ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 15

ಏಪ್ರಿಲ್ 13, 2008

ರೂ. 5/-



ಹೊಗೆನಕಲ್ : ರಾಜಕೀಯ ದುರ್ಲಾಭದ ಯತ್ನ

ಕುದ್ರೋಳಿ ಕಸಾಯಿಖಾನೆ ವಿವಾದ :

ಆಹಾರದ ಹಕ್ಕಿನ ಮೇಲೆ ಧಾಳಿ



ಕೆಂಪಾದವೋ ಎಲ್ಲಾ ಕೆಂಪಾದವೋ





ಎಡಶಕ್ತಿಗಳೇ ನಿಜವಾದ ಪರ್ಯಾಯ

ಇದ್ದದ್ದು ಇದ್ದಾಂಗ....

ಅಧಿಕಾರವೇ ಗುರಿ!?

"ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು ನಮ್ಮ ಸ್ಪಷ್ಟ ಗುರಿ. ಆ ಗುರಿಯತ್ತ ದಾಪುಗಾಲು ಹಾಕಲು ಪಕ್ಷದ ಮುಖಂಡರು ಎಂತಹ ತ್ಯಾಗಕ್ಕೂ ಸಿದ್ಧ"

-ಎಸ್.ಎಂ.ಕೃಷ್ಣ
ಮಾಜಿ ಮುಖ್ಯಮಂತ್ರಿಗಳು

★

ಅಸ್ಥಿರಗೊಳಿಸುವ ರಾಜಕೀಯ

ಅಮೆರಿಕಾದ ಮಿಲಿಟರಿ ಕೈಗಾರಿಕಾ ಸಂಕೀರ್ಣವು ಅಮೇರಿಕಾ ಸರ್ಕಾರವನ್ನು ಬೆಂಬಲಿಸುತ್ತದೆ ಮತ್ತು ತನ್ನ ಸ್ವ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ತನ್ನದೇ ಆದ ಹೈಡ್ ಕಾಯ್ದೆಯ ಷರತ್ತುಗಳನ್ನು ವಿಧಿಸುತ್ತಿದೆ. ಮತ್ತು ಏಷ್ಯಾದ ವಿಷಯದಲ್ಲಿ ಅಮೇರಿಕಾ ಯೋಜನೆಯು ಚೀನಾ ದೇಶದ ವಿರುದ್ಧ ಇತರ ದೇಶಗಳನ್ನು ಎತ್ತಿಕಟ್ಟುವಂತಹದ್ದಾಗಿದೆ. ಬುಷ್ ಆಡಳಿತವು ಜಗತ್ತಿನ ವಿವಿಧ ದೇಶಗಳನ್ನು ಅಸ್ಥಿರಗೊಳಿಸುವ ರಾಜಕೀಯವನ್ನು ಮಾಡುತ್ತಿದೆ.

ಚೆರ್ರಿ ಆಲ್‌ಬಾನೋ
ಅಮೇರಿಕಾ ಕಮ್ಯುನಿಸ್ಟ್ ಪಕ್ಷದ ಮುಖಂಡರು
ಭಾರತ - ಅಮೇರಿಕಾ ಅಣು ಒಪ್ಪಂದ ಕುರಿತು-
ಸಿಪಿಐ(ಎಂ) ಮಹಾಧಿವೇಶನದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಹೇಳಿದ್ದು

★

ಮಾತುಕತೆ ನಡೆಯಲಿ

ಚೀನಾ ದೇಶದ ಸಮಗ್ರತೆಯ ಚೌಕಟ್ಟಿನ ಮಿತಿಯೊಳಗೆ ಚೀನಾ ಮತ್ತು ದಲೈಲಾಮಾರ ಪ್ರತಿನಿಧಿಗಳ ನಡುವೆ ಮಾತುಕತೆ ನಡೆಯುವ ಮೂಲಕ ಟಿಬೆಟ್ ಪ್ರಶ್ನೆಯನ್ನು ಇತ್ಯರ್ಥ ಪಡಿಸಬೇಕೆಂದು ನಾವು ಬಯಸುತ್ತೇವೆ.

-ಪ್ರಕಾಶ್‌ಕಾರಟ್
ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ



ಆತ್ಮಹತ್ಯೆಯಲ್ಲಿ ಬೆಂಗಳೂರು ಮುಂದೆ

'ಸಿಲಿಕಾನ್ ಕಣಿವೆ' ಎಂದು ಹೆಸರಾಗಿರುವ ಬೆಂಗಳೂರು ನಗರ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರ ಸಂಖ್ಯೆಯಲ್ಲೂ ದೇಶದಲ್ಲಿ ಮುಂದಿದೆ. ಸುದ್ದಿವಾಹಕ ಸಂಸ್ಥೆಯೊಂದು ಬೆಂಗಳೂರನ್ನು ಭಾರತದ ಆತ್ಮಹತ್ಯೆಗಳ ರಾಜಧಾನಿ ಎಂದು ಬಣ್ಣಿಸಿದೆ.

2004 ರಿಂದ 2008 ರ ನಡುವೆ 4 ವರ್ಷಗಳಲ್ಲಿ 7840 ಆತ್ಮಹತ್ಯೆಗಳು ನಡೆದಿದ್ದು, 14845 ಪುರುಷರು, 2095 ಮಹಿಳೆಯರು ಅಂದರೆ, ಸರಾಸರಿ ಪ್ರತಿದಿನ 6 ಮಂದಿ ಬೆಂಗಳೂರು ನಗರದಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಜಂಟಿ ಪೋಲೀಸ್ ಆಯುಕ್ತರಾದ ಗೋಪಾಲ್.ಬಿ. ಹೊಸೂರ್ ಅವರ ಪ್ರಕಾರ ಜಾಗತೀಕರಣದ ಪರಿಣಾಮಗಳೂ ಸಹ ಆತ್ಮಹತ್ಯೆಗೆ ಕಾರಣವಾಗಿದೆ.

ವರದಿಗಾರರು, ಬರಹಗಾರರ ಗಮನಕ್ಕೆ

ಪತ್ರಿಕೆಯ ಮೇಲೆ ಅಭಿಮಾನವಿಟ್ಟು ವರದಿ, ಲೇಖನ ಕಳಿಸುವ ಬರಹಗಾರರಲ್ಲಿ ವಿನಂತಿ. ದಯಮಾಡಿ ತಮ್ಮ ಲೇಖನದ ಜೊತೆಗೆ ಸಂಬಂಧಿಸಿದ ಫೋಟೋಗಳನ್ನು ಸಹ ಕಳಿಸಿಕೊಡಿ.

ಕೆಲವೊಂದು ವಿಷಯಗಳಲ್ಲಿ ಲೇಖನ-ವರದಿಗೆ ಬೇರೆಲ್ಲೂ ಫೋಟೋಗಳು ಸಿಗುವ ಸಂಭವ ಇರುವುದಿಲ್ಲ.

ನೀವು ಕಳಿಸುವುದು ಕೈಬರಹದ ವರದಿ ಲೇಖನವಾದರೆ ದಯಮಾಡಿ 'ಯಾರಿಗೇ ಆದರೂ ಅರ್ಥವಾಗಬಹುದಾದಂತೆ ಸ್ಪಷ್ಟವಾಗಿ ಬಿಡಿ ಬಿಡಿ ಅಕ್ಷರಗಳಲ್ಲಿ ಬರೆಯಿರಿ.

ನಿಮ್ಮ ಬರಹ ಕಂಪೋಸ್ ಆದ ಸ್ವರೂಪದಲ್ಲಿ ಇದ್ದರೆ ದಯಮಾಡಿ ಮೇಲ್ ಮಾಡಿ. ಅದು ತುಂಬಾ ಪ್ರಯೋಜನಕಾರಿ.

ಕನ್ನಡ ತಂತ್ರಾಂಶಗಳಾದ 'ಬರಹ' 'ಆಕೃತಿ' ಆಗಬಹುದು. 'ನುಡಿ' ಆದರೆ ಬಹಳ ಒಳ್ಳೆಯದು.

ಇಮೇಲ್ ವಿಳಾಸ :
js_weekly@yahoo.com,
kriyaprakashana@gmail.com

ಹಣ ತುಂಬಿ, ಜೊತೆಗೆ ಸೂಕ್ತ ಮಾಹಿತಿ ನೀಡಿ

ಏಜೆನ್ಸಿದಾರರೇ ದಯಮಾಡಿ ಈ ಸೂಚನೆ ಗಮನಿಸಿ ಪತ್ರಿಕೆಯ ಬಿಲ್ ಪಾವತಿಸುವ ಹಲವು ಏಜೆನ್ಸಿದಾರರು, ಪತ್ರಿಕೆಯ ಖಾತೆಗೆ ಹಣವನ್ನು ತುಂಬಲು ಕೋರ್ ಬ್ಯಾಂಕಿಂಗ್ ಸೌಲಭ್ಯವನ್ನು ಬಳಸುತ್ತಿರುವುದು ಸರಿಯಷ್ಟೇ. ಈ ಹಣವನ್ನು ತಮ್ಮ ತಮ್ಮ ಊರುಗಳಲ್ಲಿಂದಲೇ ಪತ್ರಿಕೆಯ ಖಾತೆಗೆ ತುಂಬುವಾಗ ಕೆಲವೊಂದು ಸೂಚನೆಗಳನ್ನು ಪಾಲಿಸುವುದು ಅವಶ್ಯಕ.

ಬ್ಯಾಂಕ್‌ನ ಚಲನ್‌ನಲ್ಲಿ ಯಾರ ಪರವಾಗಿ ಹಣ ತುಂಬಿರುವುದು ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಹಾಗೆ ತುಂಬದೇ ಹೋದಲ್ಲಿ ಪತ್ರಿಕೆಯ ಖಾತೆಗೆ ಹಣ ಜಮಾ ಆಗುತ್ತದೆ. ಆದರೆ ಅದು ಯಾವ ಏಜೆನ್ಸಿದಾರರ ಹಣ ಎಂಬುದು ಗೊತ್ತಾಗುವುದಿಲ್ಲ. ದಯಮಾಡಿ ಹಣ ಜಮಾ ಮಾಡಿದ ನಂತರ ಅದರ ವಿವರಗಳನ್ನು ಬರೆದು ಒಂದು ಅಂಚೆ ಕಾರ್ಡನ್ನು ಕಳಿಸುವುದನ್ನು ಮರೆಯಬೇಡಿ.

ಈ ರೀತಿ ಹಣ ಜಮಾ ಆಗಿರುವ ಕೆಲವು ಪ್ರಕರಣಗಳಲ್ಲಿ ಸೂಕ್ತ ಮಾಹಿತಿ ಇಲ್ಲದೆ ಸಮಸ್ಯೆಯಾಗಿದೆ. ಸಂಬಂಧಿಸಿದವರು ದಯಮಾಡಿ ಸೂಕ್ತ ಮಾಹಿತಿ ನೀಡಿ.

ಸಂಪರ್ಕಕ್ಕೆ : ವೀರಣ್ಣ ಕಲ್ಮನಿ,
9480430394

ಜುಗಲ್‌ಬಂದಿ

ದೋಷ

ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ದೋಷವಿದೆ. ಬಹುತೇಕ ಪಕ್ಷಗಳು, ಸಂಘ ಸಂಸ್ಥೆಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲ, ಯುವಶಕ್ತಿಯನ್ನು ಸೂಕ್ತವಾಗಿ ಬಳಸಿಕೊಳ್ಳುತ್ತಿಲ್ಲ.

-ರಾಹುಲ್‌ಗಾಂಧಿ
ಎಐಸಿಸಿ ಪ್ರಧಾನ ಕಾರ್ಯದರ್ಶಿ

ಪರಿಹಾರ

ಡಿ.ಕೆ. ಶಿವಕುಮಾರ್‌ರನ್ನು ವೇದಿಕೆಗೆ ತರಲು ಬೆಂಬಲಿಗರ ಕೂಗಾಟ

ಕಾಂಗ್ರೆಸ್ ಸಮಾವೇಶದಲ್ಲಿ ಜೇಬುಗಳ್ಳರ ಹಾವಳಿ - ಸುದ್ದಿ

ಗೊತ್ತಿರಲಿಲ್ಲ

"ಎನ್‌ಡಿಎ ಸರ್ಕಾರದ ಕಾಲಾವಧಿಯಲ್ಲಿ ಉಗ್ರಗಾಮಿಗಳನ್ನು ಕಂದಹಾರ್‌ಗೆ ಕರೆದುಕೊಂಡು ಹೋಗಿ ಬಿಡುಗಡೆ ಮಾಡುವ ತೀರ್ಮಾನದ ಬಗೆಗೆ ಆಗ ನನಗೆ ಗೊತ್ತಿರಲಿಲ್ಲ"

- ಎನ್.ಡಿ.ಎ. ಸರ್ಕಾರದ ಗೃಹಮಂತ್ರಿ
ಎಲ್.ಕೆ.ಅಡ್ವಾಣಿ
ತಮ್ಮ ಆತ್ಮ ಚರಿತ್ರೆಯಲ್ಲಿ

ಗೊತ್ತಿತ್ತು

"ಉಗ್ರಗಾಮಿಗಳ ಬಿಡುಗಡೆ ವಿಚಾರ ವೈಯಕ್ತಿಕವಾಗಿ ತೆಗೆದುಕೊಂಡದ್ದಲ್ಲ. ಸಾಮೂಹಿಕವಾಗಿ ತೆಗೆದುಕೊಂಡ ನಿರ್ಧಾರ. (ಅಡ್ವಾಣಿಯವರಿಗೂ ಅದು ಗೊತ್ತಿತ್ತು)

-ಜಾರ್ಜ್ ಫರ್ನಾಂಡಿಸ್
ಎನ್.ಡಿ.ಎ. ಸಂಚಾಲಕ

ಚುಚ್ಚು ಮದ್ದು

■ ಜಾತಿ ಕೋಮು ಮತ್ತು ಭಾಷೆಗಳ ಆಧಾರದಿಂದ ಜನರನ್ನು ವಿಭಜಿಸುವ ವೋಟ್‌ಬ್ಯಾಂಕ್ ರಾಜಕೀಯ ರಾಷ್ಟ್ರದ ಸಮಗ್ರತೆಗೆ ದೊಡ್ಡ ಅಪಾಯ

-ಎಲ್.ಕೆ.ಅಡ್ವಾಣಿ ಬಿಜೆಪಿ ಮುಖಂಡ

▶ ಅಂದ್ರೇನು, ತಾವು ತಮ್ಮ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಿ ಬಿಡ್ತೀರಾ?

★

ಬುಷ್ ಅಣ್ಣ ಏನಂತಾರೆ?

■ ಭಯೋತ್ಪಾದಕರ ವಿರುದ್ಧ ಅಮೇರಿಕಾದ ನೇತೃತ್ವದಲ್ಲಿ ನಡೆಯುತ್ತಿರುವ ಯುದ್ಧಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ತನ್ನ ಪಾತ್ರವನ್ನು ಕುರಿತು ಪುನರ್ ವಿಮರ್ಶೆ ಮಾಡಲಿದೆ. ಇಡೀ ವಿಶ್ವದಲ್ಲಿಯೇ ಶಾಂತಿ ಇರಬೇಕೆಂಬುದು ನನ್ನ ಬಯಕೆ. ಆದರೆ ಪಾಕಿಸ್ತಾನವನ್ನು ಕಸಾಯಿಖಾನೆ ಮಾಡುವುದು ನನಗೆ ಇಷ್ಟವಿಲ್ಲ.

-ನವಾಜ್‌ಷರೀಫ್
ಪಾಕಿಸ್ತಾನದ ಮಾಜಿ ಪ್ರಧಾನಿ

▶ ನೀವು ಹೀಗೆಲ್ಲಾ ಮಾತನಾಡುವುದು ಬುಷ್ ಅಣ್ಣನಿಗೆ ಇಷ್ಟವಿದೆಯೋ, ಇಲ್ವೋ ಸ್ವಲ್ಪ ಕೇಳಿಕೊಂಡು ಬಿಟ್ಟರೆ ಬೆಳೆಯದೇನೋ ಷರೀಫ್ ಸಾಹೇಬರೇ

★

ಅಪಾಯ

■ "ಚೀನಾ ಇಡೀ ವಿಶ್ವಕ್ಕೆ ಅಪಾಯ. ಭಾರತಕ್ಕೂ ಅದು ನಂಬರ್ ಒನ್ ಶತ್ರು. ಈಗ ಭಾರತ ಚೀನಾ ಅಂದರೆ ಹೆದರಿಕೊಳ್ಳುತ್ತಿದೆ. ಅದು ಹೇಳಿದಂತೆ ಕೇಳುತ್ತಿದೆ."

-ಜಾರ್ಜ್ ಫರ್ನಾಂಡಿಸ್
ಮಾಜಿ ರಕ್ಷಣಾ ಸಚಿವ

▶ ಅಂದರೆ ಚೀನಾ ಭಾರತ ಸದಾ ಯುದ್ಧ ಮಾಡ್ತಾ ಇರಬೇಕು ಅಂತಾನಾ ನಿಮ್ಮಾಸೆ.

ಈ ಸಂಸ್ಕೃತಿ

ವೈದಿಕ ಸಂಸ್ಕೃತಿಯ ತಿರುಳೇನು ಹೇಳಿ
ತಾವು ತಮ್ಮವರಷ್ಟೆ ಬದುಕುವುದು ಬಾಳಿ
ಉಳಿದವರು ಈ ಜನರ ಸೇವಕರು ಆಗಿ
ದುಡಿಯುವುದು ಅಪ್ಪಣೆಯ ಪಾಲಿಸುತಬಾಗಿ

- ವಿಡಂಬಾರಿ

ಪರಿಸರದ ಮಂತ್ರ

ತಮ್ಮ ಕುಲ ಬಾಂಧವರ ಹಿತಕ್ಕಾಗಿ ಮಾತ್ರ
ಪಠಿಸುವರು ಕೆಲವು ಜನ ಪರಿಸರದ ಮಂತ್ರ
ಸಾವಿರಾರು ಯುವಕರಿಗೆ ಉದ್ಯೋಗವನ್ನು
ಕೊಡುವಂತ ಯೋಜನೆಗೆ ತೂರುವರು ಮಣ್ಣು

- ವಿಡಂಬಾರಿ

ಸಂಪಾದಕೀಯ

ಚುನಾವಣೆಯ ಅಗ್ನಿ ಪರೀಕ್ಷೆಯತ್ತ...

ಹದಿಮೂರನೆಯ ಕರ್ನಾಟಕ ವಿಧಾನ ಸಭೆಯ ಆಯ್ಕೆಗಾಗಿ ಮೂರು ಹಂತಗಳ ಚುನಾವಣೆಯನ್ನು ನಡೆಸಲು ಚುನಾವಣಾ ಆಯೋಗ ಪ್ರಕಟಿಸಿರುವುದು ಸ್ವಾಗತಾರ್ಹ. ಮೇ 28ರೊಳಗೆ ಚುನಾಯಿತ ಸರ್ಕಾರವೊಂದು ಅಸ್ತಿತ್ವಕ್ಕೆ ಬರಬೇಕೆಂಬ ಸಂವಿಧಾನಾತ್ಮಕ ನಿರ್ದೇಶನದಂತೆ ಈ ಚುನಾವಣೆಗಳು ಈ ಅವಧಿಯೊಳಗೆ ಮುಗಿಯುವುದು ಅಗತ್ಯ.

ಈ ಚುನಾವಣೆಗಳು ನಿರ್ಭೀತವಾಗಿ ಮುಕ್ತತೆಯಿಂದ ಹಾಗೂ ಯಾವುದೇ ಪಕ್ಷಪಾತವಿಲ್ಲದೇ ಜರುಗುವಂತೆ ಎಲ್ಲಾ ಕ್ರಮಗಳನ್ನು ಚುನಾವಣಾ ಆಯೋಗ ವಹಿಸಬೇಕಿದೆ. ಈ ಚುನಾವಣೆಗಳ ತಯಾರಿ ಈಗ ಕೊಂಚ ತರಾತುರಿಯಲ್ಲೇ ಮಾಡಲಾಗಿದೆ. ಪುನರ್ವಿಂಗಡಿತ ಕ್ಷೇತ್ರಗಳ ಆಧಾರದಲ್ಲಿ ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿ ಹಲವು ಗೊಂದಲಗಳಿಗೆ ಒಳಗಾಗಲಾಗಿತ್ತು ಮತ್ತು ಖೊಟ್ಟಿ ಮತದಾರರ ಹೆಸರುಗಳು ಸೇರ್ಪಡೆಯಾಗಿತ್ತು ಎಂದು ಚುನಾವಣಾ ಆಯೋಗಕ್ಕೆ ದೂರುಗಳನ್ನು ನೀಡಲಾಗಿತ್ತು. ಇದೆಲ್ಲವನ್ನು ಪರಿಶೀಲಿಸಿ ಆಯೋಗ ಸರಿಪಡಿಸಲು ಕ್ರಮವಹಿಸಿದೆ ಎಂದು ಹೇಳಿದೆ. ಆದಾಗ್ಯೂ ಇನ್ನೂ ಹಲವಾರು ದೋಷಗಳು ಉಳಿದಿರಬಹುದಾದ ಸಾಧ್ಯತೆಗಳಿದ್ದು ಅವುಗಳನ್ನು ಸರಿಪಡಿಸಲು ಆಯೋಗ ಕ್ರಮವಹಿಸುವುದು ಅಗತ್ಯವಿದೆ. ಒಟ್ಟು ರಾಜ್ಯದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಹಾಗೂ ವಿಶೇಷವಾಗಿ ಹಲವಾರು ಸೂಕ್ಷ್ಮ ಕ್ಷೇತ್ರಗಳು ಹೆಚ್ಚಿರುವುದನ್ನು ಪರಿಗಣಿಸಿ ಸೂಕ್ತ ಸಿದ್ಧತೆ ನಡೆಸಲು ಆಯೋಗ ಗಮನಹರಿಸಬೇಕು. ಜನತೆಯು ಪ್ರಜಾಸತ್ತಾತ್ಮಕ ಹಕ್ಕನ್ನು ಮುಕ್ತವಾಗಿ ಚಲಾಯಿಸಲು ಕ್ರಮವಹಿಸಬೇಕು.

ಹಿಂದೆಂದಿಗಿಂತಲೂ ಈ ಬಾರಿ ಹಣ ಆಮಿಷಗಳ ಪ್ರಮಾಣ ಹೆಚ್ಚುವ ಆತಂಕವಿದೆ. ಗಣಿ ಹಾಗೂ ಭೂ ದಂಧೆಗಳ ಅಕ್ರಮ ಹಣವು ಪ್ರಧಾನ ಪಾತ್ರ ವಹಿಸುತ್ತಿರುವುದು ಬಹಿರಂಗವಾಗಿಯೇ ಗೋಚರವಾಗಿದೆ. ಹಲವಾರು ಕ್ರಿಮಿನಲ್‌ಗಳು, ಚುನಾವಣೆಯೊಳಗೆ ಸ್ಪರ್ಧಿಸಲು ಬಯಸಿ ಕೆಲವು ಪಕ್ಷಗಳನ್ನು ಹುಡುಕಿ ಹೊರಟಿರುವ ಸುದ್ದಿ ಆತಂಕಕಾರಿಯೇ. ಹಾಗೇ ಅವರನ್ನು ಸೇರಿಸಿಕೊಳ್ಳಬಯಸಿದ ಪಕ್ಷಗಳ ಯತ್ನಗಳೂ... ಹೀಗಾಗಿ ಹಣ, ಕ್ರಿಮಿನಲ್ ಬಲ ಮತ್ತು ಜಾತಿ, ಧರ್ಮ ಮತ್ತು ಭಾಷೆಗಳ ಆಧಾರದಲ್ಲಿ ಜನರಲ್ಲಿ ಭಾವನೆ ಕೆರಳಿಸಿ ಅದರ ರಾಜಕೀಯ ದುರ್ಲಾಭ ಹೊಡೆಯಲು ಪ್ರಯತ್ನಗಳು ನಡೆದಿವೆ. ನಿರ್ದಿಷ್ಟವಾಗಿ ಕಾರ್ಯಕ್ರಮ ನೀತಿಗಳ ಆಧಾರದಲ್ಲಿ ಜನರ ಮನಸ್ಸನ್ನು ಗೆಲ್ಲದೆ ಹಣ, ಬಲಗಳ ಬಳಕೆ ಪ್ರಜಾಸತ್ತೆಯನ್ನು ದುರ್ಬಲಗೊಳಿಸುತ್ತದೆ. ಆದ್ದರಿಂದ ಚುನಾವಣಾ ಆಯೋಗ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಧಕ್ಕೆ ತರುವ ಈ ಪ್ರವೃತ್ತಿಗಳಿಗೆ ಕಡಿವಾಣ ಹಾಕಿ, ನಿರ್ಬಂಧಿಸಬೇಕು.

ಪ್ರಧಾನವಾಗಿ ಈ ಚುನಾವಣಾ ಹೋರಾಟ ಫ್ಯಾಸಿಸ್ಟ್ ಮನೋಭಾವದ ಕೋಮುವಾದಿ ಶಕ್ತಿಗಳು ಹಾಗೂ ಮತನಿರಪೇಕ್ಷಕ ಶಕ್ತಿಗಳ ನಡುವಿನ ಹೋರಾಟವಾಗಿದೆ. ಸೌಹಾರ್ದತೆ, ಶಾಂತಿಯ ಕರ್ನಾಟಕವನ್ನು ಕೋಮುದ್ವೇಷದ ಕರ್ನಾಟಕವನ್ನಾಗಿಸಲು ಹೊರಟಿರುವ ಕೋಮುವಾದಿ ಬಿಜೆಪಿಯು ಅಧಿಕಾರಕ್ಕೆ ಬರದಂತೆ ತಡೆಯುವುದೇ ಪ್ರಥಮ ಆದ್ಯತೆಯ ಕರ್ತ್ಯವಾಗಿದೆ. ಈ ದಿಶೆಯಲ್ಲಿ ಎಲ್ಲಾ ಸೆಕ್ಯುಲರ್ ಶಕ್ತಿಗಳು ಕಾರ್ಯೋನ್ಮುಖರಾಗುವುದು ಅಗತ್ಯವಿದೆ.


ಒಂದು ವೇಳೆ ಕೋಮುವಾದಿ ಬಿಜೆಪಿ ರಾಜ್ಯದ ಅಧಿಕಾರದ ಯಂತ್ರ ಹಿಡಿಯುವುದು ಕೇವಲ ಸಾಮಾಜಿಕ ಸಾಮರಸ್ಯ, ಸುರಕ್ಷತೆಗೆ ಈ ಬೆದರಿಕೆ ಮಾತ್ರವಲ್ಲ. ಮುಖ್ಯವಾಗಿ ಜನದ್ರೋಹಿ, ರಾಷ್ಟ್ರವಿರೋಧಿ ಪ್ರತಿಗಾಮಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸುತ್ತಾ ಜನತೆಯ ಬದುಕಿಗೆ ಹೇಗೆಲ್ಲಾ ಮಾರಕವಾಗಲಿದೆ ಎಂಬುದನ್ನು ಅರಿಯಬೇಕು. ಜನವಿರೋಧಿ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತಾ, ಜನತೆಯ ನಡುವೆ ಅತೃಪ್ತಿ ಹೆಚ್ಚಲು ಕಾರಣವಾಗಿ, ಆ ಮೂಲಕ ಬಿಜೆಪಿಯಂತಹ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಅವಕಾಶವನ್ನು ಕಾಂಗ್ರೆಸ್ ಕಲ್ಪಿಸಿದೆ. ಹೀಗಿರುವಾಗ ಅದು ಅಧಿಕಾರಕ್ಕೇರಲು ಧರ್ಮ ಅಥವಾ ಕೋಮುವಾದವನ್ನೇ ನೆಚ್ಚಿಕೊಂಡಿಲ್ಲ. ರಾಜ್ಯದ ಇಂದಿನ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯುವಲ್ಲಿ ಮಹತ್ವದ ಪಾತ್ರವನ್ನು ವಹಿಸುವುದು ಅನಿವಾರ್ಯ. ಹಾಗೆಯೇ ಕಾಂಗ್ರೆಸ್ಸೇತರ ಸೆಕ್ಯುಲರ್ ಶಕ್ತಿಗಳ ಪಾತ್ರವೂ ಸಹ ಅಷ್ಟೇ ಮಹತ್ವದ್ದಾಗಿದೆ.

ಜನತೆಯ, ದೇಶದ ಹಿತರಕ್ಷಣೆಯಲ್ಲಿ ಅತ್ಯಂತ ಸ್ಪಷ್ಟತೆ, ನಿಖರತೆಯಿಂದ ಕೋಮುವಾದದ ವಿರುದ್ಧ ದೃಢ ಹೋರಾಟ ನಡೆಸುತ್ತಾ ಬಂದಿರುವುದು ಸಿಪಿಐ(ಎಂ) ಒಳಗೊಂಡು ಎಡಶಕ್ತಿಗಳೇ. ಈ ಚುನಾವಣೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪ್ರಗತಿಪರ ಶಕ್ತಿಗಳ ನೆಲೆ, ಚುನಾವಣಾ ಶಕ್ತಿ ವೃದ್ಧಿಸುವುದು, ವಿಧಾನಸಭೆಯಲ್ಲಿ ಅವುಗಳ ಶಕ್ತಿ ಹೆಚ್ಚುವುದು ಒಟ್ಟಾರೆ ರಾಜ್ಯದ ದುಡಿವ ಜನರ ಹಿತ ಕಾಪಾಡಲು ಅತೀ ಅನಿವಾರ್ಯ.

ಚುನಾವಣೆ ಪ್ರಕಟಗೊಂಡ ಹಿನ್ನೆಲೆಯಲ್ಲಿ ವಿವಿಧ ಪಕ್ಷಗಳಲ್ಲಿ ಸ್ಪರ್ಧೆಯ 'ಟಿಕೆಟ್ ಹಂಚಿಕೆ, ಆಕಾಂಕ್ಷಿಗಳು ಗರಿಗೆದರಿವೆ. ಬಹುತೇಕ ಅಧಿಕಾರಸ್ಥ ಬಲಪಂಥೀಯ ಶಕ್ತಿಗಳು ಜನಹಿತದ ರಾಜಕೀಯ ಕರ್ತವ್ಯ ನಿರ್ವಹಿಸುವ ಹಿನ್ನೆಲೆಗಿಂತ ಗೆಲ್ಲುವ ಕುದುರೆಗಳ ಆಯ್ಕೆಗೆ ಗಮನ ನೀಡುತ್ತಿವೆ. ಆಕಾಂಕ್ಷಿಗಳ ನಡುವೆ ಮಾರಾಮಾರಿಯೇ ನಡೆದಿದೆ.

ಈ ನಡುವೆ ಮತದಾರರು ವಹಿಸಬೇಕಾದ್ದು ಮಹತ್ವದ ಹೊಣೆಯಾಗಿದೆ. ಅತ್ಯಂತ ನಿರ್ಣಾಯಕ ಸಂದರ್ಭಗಳಲ್ಲಿ ಜನತೆ ಪ್ರಜಾಪ್ರಭುತ್ವ, ಜಾತ್ಯಾತೀತತೆ ಉಳಿಸುವ ಪ್ರಬುದ್ಧ ತೀರ್ಪು ನೀಡಿದ್ದಾರೆ. ಈಗಲೂ ಜನತೆಗೆ ಅಗ್ನಿ ಪರೀಕ್ಷೆ. ನಾಡು ಕಾಯುವ ಹೊಣೆ.

ಹೊಗೆನಕಲ್ ವಿವಾದ : ದುರ್ಲಾಭದ ಹೊಂಚು



ಎಸ್.ವೈ.ಗುರುಶಾಂತ್


ಹೊಗೆನಕಲ್‌ನಲ್ಲಿ ಕುಡಿಯುವ ನೀರಿನ ಯೋಜನೆಯ ನಿರ್ಮಾಣವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ಪ್ರಕಟಿಸಿದ್ದಾರೆ. ಇದು ಸ್ವಾಗತಾರ್ಹ ಮತ್ತು ಸಮಯೋಚಿತ. ಹೊಗೆನಕಲ್‌ನ ಸುತ್ತ ಎದ್ದಿರುವ ವಿವಾದಕ್ಕೆ ಒಂದು ವಾಸ್ತವಿಕ ಪರಿಹಾರವನ್ನು ರೂಪಿಸಲು ಇದು ಸಹಾಯಕ.

ವಿವೇಚನಾ ಕ್ರಮ

ಕರ್ನಾಟಕದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದೆ. ಇಲ್ಲಿ ಜನತೆಗೆ ಹೊಣೆಯಿರುವ ಪ್ರಾತಿನಿಧಿಕ ಚುನಾಯಿತ ಸರ್ಕಾರವಿಲ್ಲ. ವಿಧಾನಸಭಾ ಚುನಾವಣೆಗೆ ಹೊರಟಿರುವ ಕರ್ನಾಟಕದಲ್ಲಿ ಹೊಸ ಸರ್ಕಾರ ಬಂದ ಮೇಲೆ ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಅವಕಾಶವಿರಲಿ ಎಂಬುದು ಅವರ ಇಂಗಿತ ಸರಿಯಾದುದು. ಈ ವಿವಾದದ ಸುತ್ತ ಬೆಳೆಯುತ್ತಿದ್ದ ಸೂಕ್ಷ್ಮ ರಾಜಕೀಯ ಸಂದರ್ಭವನ್ನು, ಕರ್ನಾಟಕದ ಜನರ ಭಾವನೆಗಳನ್ನು ಕರುಣಾನಿಧಿ ಸರಿಯಾಗಿ ಗ್ರಹಿಸಿದ್ದಾರೆ. ಗೌರವವನ್ನು ನೀಡಿದ್ದಾರೆ. ಪ್ರಜಾಪ್ರಭುತ್ವ ಹಾಗೂ ಆ ಪ್ರಕ್ರಿಯೆಯಲ್ಲಿ ನಂಬಿಕೆ ಇರಿಸಿರುವ ಪ್ರಜಾಪ್ರಭುತ್ವ ಪ್ರೇಮಿಗಳು ಅನುಸರಿಸಬೇಕಾದ ಮಾರ್ಗ ಇಂತಹುದೇ ಆಗಿದೆ. ಭಾರತದ ಒಕ್ಕೂಟದ ಭಾಗವಾಗಿರುವ, ನೆರೆಹೊರೆಯಲ್ಲಿನ ರಾಜ್ಯಗಳ ನಡುವಿನ ವಿವಾದಗಳ ಇತ್ಯರ್ಥ ವಿವೇಚನೆಯಿಂದಲೇ ಸಾಧ್ಯ.

'ಕಮಲಧಾರಿಗಳ' ಅಜೆಂಡಾ

ಆದರೆ ಗಡಿ ಮತ್ತು ಭಾಷಾ ಪ್ರಶ್ನೆಗಳನ್ನು ಬೇಕೆನಿಸಿದಾಗ ಕೆದಕಿ, ಭಾವೋನ್ಮಾದ ಕೆರಳಿಸಿ ರಾಜಕೀಯ ದುರ್ಲಾಭ ಹೊಡೆಯುವವರಿಗೆ ಸಮಸ್ಯೆಗೆ ಇತ್ಯರ್ಥ್ಯ ಬೇಕಿರುವುದಿಲ್ಲ. ಅವರು ರಾಜಕೀಯ ಮೈಲುಗಲ್ಲು ಎಣಿಸಿದರಾಯಿತು. ಹೊಗೆನಕಲ್ ವಿವಾದದಲ್ಲಿ ಇಂತಹುದೇ ಪ್ರಧಾನವಾಗಿ ವಿಜೃಂಭಿಸಿತು. ಸಣ್ಣಗೆ ಆರಂಭಗೊಂಡ ಈ 'ವಿವಾದ' ಬೃಹತ್ ಸ್ವರೂಪಕ್ಕೆ ತಿರುಗಿದ್ದೇ ಬಿಜೆಪಿಯ ಮುಖ್ಯಮಂತ್ರಿ ಆಕಾಂಕ್ಷಿ ಬಿ.ಎಸ್.ಯಡಿಯೂರಪ್ಪ ಮತ್ತು ಅದರ ಪರಿವಾರಪಡೆ ಅಲ್ಲಿಗೆ ಭೇಟಿ ನೀಡಿ ತಿದಿ ಒತ್ತಿದ ಬಳಿಕ. ಇದರ ನಾಯಕರು ಎಲ್ಲೆಂದರಲ್ಲಿ ಕರ್ನಾಟಕ ರಕ್ಷಣಾ ವೇದಿಕೆ, ಮುಂತಾದ ವೇದಿಕೆಗಳಲ್ಲಿ ಪ್ರಮುಖವಾಗಿ ಕಾಣಿಸಕೊಂಡರು. ದಿನಕ್ಕೊಂದು ಪ್ರಚೋದನಾಕಾರಿ ಹೇಳಿಕೆಗಳನ್ನೂ ನೀಡಿದರು. 'ಕನ್ನಡ ಸಂಘಟನೆಗಳು' ಕರೆ ನೀಡಿದ ಏಪ್ರಿಲ್ 10ರ ಬಂದ್‌ಗೂ ಪೂರ್ಣ ಬೆಂಬಲ ಘೋಷಿಸಿದರು. ಬಿಜೆಪಿಯ ಬೆಂಬಲ ಏನೆಲ್ಲಾ ಒಳಗೊಂಡಿರುತ್ತದೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ಹಿಂದೆ ಆರೆಸ್ಸೆಸ್ ಚಿಡ್ಡಿ ಹಾಕಿ ಲಾಠಿ ತಿರುಗಿಸಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡನ ಮಾತುಗಳು, ಕೃತಿಗಳು ಬಿಜೆಪಿಯ ಹಂಚಿಕೆಯ ರಾಜಕಾರಣಕ್ಕೆ ಪೋರ್ವೋಪಾದಿ ವಾತಾವರಣ ನಿರ್ಮಿಸುತ್ತಿತ್ತು.



ರಾಷ್ಟ್ರೀಯ ಪಕ್ಷವೆಂದು ಹೇಳಿಕೊಳ್ಳುವ ಬಿಜೆಪಿ ರಾಷ್ಟ್ರದ ಸಮಗ್ರತೆಗಿಂತ, ಉರಿವ ಮನೆಗೆ ತಾವೊಂದಿಷ್ಟು ಪೆಟ್ರೋಲ್ ಹಾಕಿ, ಮೈಕಾಯಿಸಿಕೊಳ್ಳುವ ದಾಟಿಯಲ್ಲೇ ಇತ್ತು. ಕಮಲಧಾರಿಗಳೂ ಕೆಲವು ಭಾಷಾಂಧ ಕನ್ನಡ ಹೋರಾಟಗಾರರು ಸೃಷ್ಟಿಸಿದ ಭಾವೋದ್ರೇಕದಲ್ಲಿ ವಾತಾವರಣದಲ್ಲಿ ಇತರೆ ಪ್ರಮುಖ ರಾಜಕೀಯ ಪಕ್ಷಗಳೂ ನಿಧಾನವಾಗಿಯಾದರೂ ಅದೇ ಧಾಟಿ ಅನುಸರಿಸಬಯಸಿದರು. ಬಹುತೇಕ ಪತ್ರಿಕೆ, ಟಿ.ವಿ. ಮಾಧ್ಯಮಗಳಿಗೆ ಇರಬೇಕಾದ ಕನಿಷ್ಠ 'ನೀತಿ ಸಂಹಿತೆ' ಸಾರ್ವಜನಿಕ ಹೊಣೆಗಾರಿಕೆಗಳಿಲ್ಲದೇ ಭಾವೋದ್ವೇಗ ಸೃಷ್ಟಿಸಲು ನಿರಂತರ ಹೆಣಗಿದವು.

ಎಡಬಿಡಂಗಿಗಳು

ಬಿಜೆಪಿಗೆ ವ್ಯವಧಾನ, ಸಮಚಿತ್ತದ ಚಿಂತನೆ ಅಥವಾ ಸಮಸ್ಯೆಗೆ ಪರಿಹಾರ ಕಾಣುವುದಕ್ಕಿಂತ ಇಂತಹ ಭಾವೋದ್ವೇಕವೇ ಬೇಕಾಗಿತ್ತು. ಯಾಕೆಂದರೆ ಭಾಷಾಂಧತೆಯ ಭಾವೋದ್ರೇಗಕ್ಕೆ ಸತ್ಯವನ್ನು ಕೊಲ್ಲುವ ಶಕ್ತಿ ಇದೆ. ಇಲ್ಲಿ (ಮತಾಂಧತೆಯ) ಜನ ಸಮತೋಲನದಿಂದ, ವಿವೇಚನೆಯಿಂದ ಯೋಚಿಸಿದರೆ ಬಿಜೆಪಿಯ ಬಣ್ಣ ಬಯಲಾಗುತ್ತಿತ್ತು. ಈಗ ಏನಬ್ಬರದಲ್ಲಿ ವಿರೋಧಿಸುತ್ತಿದ್ದಾರೋ ಅದೇ ಹೊಗೆನಕಲ್ ಕುಡಿಯುವ ನೀರಿನ ಯೋಜನೆಗೆ ಇದೇ ಬಿಜೆಪಿಯ ನಾಯಕ ವಾಜಪೇಯಿಯವರ ಎನ್.ಡಿ.ಎ ಸರ್ಕಾರ ಅಧಿಕಾರದಲ್ಲಿದ್ದಾಗಲೇ ಒಪ್ಪಿಗೆ ನೀಡಿತ್ತು. ಸೆಪ್ಟೆಂಬರ್ 21, 1998ರ ಕೇಂದ್ರ ಸರ್ಕಾರದ ನೀರಾವರಿ ಸಚಿವಾಲಯದಲ್ಲಿ ಯೋಜನೆ ಮುಂದುವರಿಸಲು ಹಸಿರು ನಿಶಾನೆ ತೋರಿಸಿತ್ತು. ಸೇತುಸಮುದ್ರಂಗೆ ಅನುಮೋದನೆ ಕೊಡುವುದು, ನಂತರ ಸೋತ ಮೇಲೆ ಅದನ್ನು ತಡೆಯಬೇಕೆಂದು ಹೋರಾಡುವುದು, ಹೊಗೆನಕಲ್ ಯೋಜನೆಗೆ ಅಸ್ತು ನೀಡಿ ಈಗ ಅದರ ವಿರುದ್ಧ ಕೂಗಾಡುವುದು. ಒಟ್ಟಾರೆ ಜನರ ಗಮನ ನಿಜ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸುವುದು.

ಅಲ್ಲಿ ತಮಿಳುನಾಡು ಬಿಜೆಪಿ ಘಟಕ ಹೊಗೆನಕಲ್ ಯೋಜನೆ ನಿರ್ಮಾಣ ಆಗಬೇಕೆಂದು ವಾದ ಹೂಡುತ್ತದೆ, ಇಲ್ಲಿ ಕರ್ನಾಟಕ ಬಿಜೆಪಿ ವಿರೋಧಿಸಿ 'ಬೀದಿಗಿಳಿದು ಹೋರಾಡುತ್ತದೆ'. ಇದು ಬಿಜೆಪಿ-ಸಂಘ ಪರಿವಾರದ ಎಡಬಿಡಂಗಿತನದ ಹಗಲು ವೇಷ!.

ಹೊಗೆನಕಲ್‌ನಲ್ಲಿ ಇಂತಹ ವಿವಾದದ ಒಂದು ಧ್ವನಿ ಕೇಳಿಬಂದಾಗ ಚುರುಕಾದದ್ದು ಬಿಜೆಪಿಯೇ. ಕಾರಣ : ದಕ್ಷಿಣ ಕರ್ನಾಟಕದಲ್ಲಿ ಅದಕ್ಕೆ ನೆಲೆಯಿಲ್ಲ ಅದು ದುರ್ಬಲ. ಈಗಾಗಲೇ ವಿವಿಧ ಪಕ್ಷಗಳಲ್ಲಿನ ಅತೃಪ್ತ ನಾಯಕರನ್ನು ಪಕ್ಷಾಂತರಗೊಳಿಸುತ್ತಾ ನೆಲೆ ರೂಪಿಸಿಕೊಳ್ಳಲು ಹೆಣಗುತ್ತಿರುವ ಬಿಜೆಪಿ, ಸಂಘ ಪರಿವಾರವು ಹೊಗೆನಕಲ್ ವಿವಾದವನ್ನು ಬೆಳೆಸಿ ಚುನಾವಣೆಯಲ್ಲಿ ಒಂದಿಷ್ಟು ಲಾಭ ಗಳಿಸಲು ಯತ್ನಿಸುತ್ತಿದೆ. ಒಂದೆಡೆ ಕೇಂದ್ರ ಸರ್ಕಾರದ ಯುಪಿಎ ವಿರುದ್ಧ, ಅಂದರೆ ಕಾಂಗ್ರೆಸ್ ವಿರುದ್ಧ ಮನೋಭಾವ ಬೆಳೆಸಬಹುದೆಂಬ ಲೆಕ್ಕಾಚಾರ. ಈ ವಾಸ್ತವಕ್ಕೆ ಯಾರೂ ಕಣ್ಣು ಮುಚ್ಚಿಕೊಳ್ಳಬೇಕಿಲ್ಲ.

ಮಧ್ಯಪ್ರವೇಶದ ಅಗತ್ಯ

ಇಂದು ಹೊಗೆನಕಲ್ ಯೋಜನೆಯ ವಿವಾದಗಳ ಬಗ್ಗೆ ಸೂಕ್ತವಾದ ಪರಿಹಾರಗಳನ್ನು ರೂಪಿಸಿಕೊಳ್ಳಬೇಕಿದೆ.. ಕುಡಿಯುವ ನೀರಿಗೆಂದು ತರಲಾದ ಯೋಜನೆಗಳಲ್ಲಿ ಕುಡಿವ ನೀರು ನಿರಾಕರಿಸಿದ ಉದಾಹರಣೆಗಳು ಬಹುತೇಕವಾಗಿ ತೀರಾ ಇಲ್ಲವೆಂದು ಹೇಳಬಹುದು. ಅದೊಂದು ಮಾನವೀಯ ಕರ್ತವ್ಯ ಎಂಬುದು ಇಲ್ಲಿ ಪರಿಗಣಿತ. ಕರ್ನಾಟಕದಲ್ಲಿ ಕಾವೇರಿ ನೀರು ಬಳಸಿ ಬೆಂಗಳೂರಿನ ಕುಡಿವ ನೀರಿನ ಯೋಜನೆ ರೂಪಿಸಿದಾಗ ತಮಿಳುನಾಡು ಕೆಲವು ಅಂಶಗಳ ಆಕ್ಷೇಪವೆತ್ತಿತ್ತು. ಆ

ಪುಟ 4 ಕ್ಕೆ

‘ಹಸಿವು, ಬಡತನದ ಜೊತೆ ಜಾತಿ ಬೇಧಭಾವದ ಅನುಭವ ಧಾರುಣ’

ಬಂಡಾಯ ಸಾಹಿತಿ ಆರ್.ವಿ.ಭಂಡಾರಿಯವರ ಸಾಹಿತ್ಯದಲ್ಲಿ ‘ಹಸಿವು ಅನಕ್ಷರತೆಯ ಜತೆಗೆ ಜಾತಿ ಬೇಧಭಾವದ ದಾರುಣ ಅನುಭವದ ಕುರಿತಾಗಿ ವ್ಯಕ್ತಗೊಂಡ ಕಳಕಳಿಯುನ್ನು ಪ್ರಧಾನವಾಗಿ ಗುರುತಿಸಬಹುದು ಎಂದು ಕುವೆಂಪು ವಿ.ವಿ.ಯ ಉಪನ್ಯಾಸಕ ಡಾ.ಕೆ.ಕೇಶವಶರ್ಮರವರು ಹೇಳಿದರು. ಅವರು ಕುಮಟಾದ ಎ.ವಿ.ಬಾಳಿಗಾ ಕಾಲೇಜಿನ ಇಂಗ್ಲೀಷ್ ಅಸೋಸಿಯೇಷನ್, ಚಿಂತನ ವೇದಿಕೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದೊಂದಿಗೆ ಹಮ್ಮಿ ಕೊಂಡ ಆರ್.ವಿ.ಸಾಹಿತ್ಯಾವಲೋಕನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅತಿಥಿಯಾಗಿ ಆಗಮಿಸಿದ ಕಾಲೇಜು ಪ್ರಾಚಾರ್ಯ ಡಾ.ಎಸ್.ವಿ.ಕಾಮತ್‌ರವರು ಡಾ.ಆರ್.ವಿ.ಭಂಡಾರಿಯವರಂಥ ಹಿರಿಯ ಸಾಹಿತಿಗಳ ಸಾಹಿತ್ಯಾವಲೋಕನ ಕಾರ್ಯಕ್ರಮವನ್ನು ಸಾಹಿತ್ಯದ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ನಮ್ಮ ಕಾಲೇಜಿನಲ್ಲಿ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು. ಆಶಯ ಮಾತನಾಡಿದ ವಿಮರ್ಶಕ ಡಾ.ಎಂ.ಜಿ.ಹೆಗಡೆಯವರು ಆರ್.ವಿ.ಯವರ ಬಂಡಾಯ ಹಾಗೂ ಕ್ರಾಂತಿಕಾರಿ ಸಾಹಿತ್ಯದಲ್ಲಿ ಸಾಹಿತ್ಯದ ನಂಟನ್ನು ಒಂದು ಉತ್ತಮ ಮಾಧ್ಯಮವನ್ನಾಗಿ ಅಳವಡಿಸಿದ್ದನ್ನು ವಿವರಿಸುತ್ತಲೇ ಅದರ ಆಂಶಿಕ ಸಾಂಗತ್ಯವನ್ನು ಸಮರ್ಥಿಸಿಕೊಂಡರು.

ನಂತರ ನಡೆದ ಪ್ರಬಂಧಗೋಷ್ಠಿಯಲ್ಲಿ ರಂಗನಿರ್ದೇಶಕ ಡಾ.ಶ್ರೀಪಾದ ಭಟ್, ಆರ್.ವಿ. ನಾಟಕದ ಕುರಿತು ಮಾತನಾಡುತ್ತ ‘ಚರಿತ್ರೆಯಲ್ಲಿ ನೆಮ್ಮದಿ ಕಳಕೊಂಡ ಮುಕ್ರಿ, ಮುತ್ತ, ಸಾತು, ಪಾತುವಿನಂತ ಜನರಿಗೆ ಅರಿವು ನೀಡುವ ನಿಟ್ಟಿನಲ್ಲಿ ಪರಿಧಿಯಲ್ಲಿರುವವರನ್ನು ಕೇಂದ್ರದೆಡೆ ತರುವ ಒತ್ತಾಸೆಯಂತಿದೆ’ ಎಂದು ಅನೇಕ ದೃಷ್ಟಾಂತಗಳ ಮೂಲಕ ವಿವರಿಸಿದರು. ಜೀವನನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುವ ಅಂತರ್ಮುಖಿಯಾದ ಆರ್.ವಿ.ಯವರ ಒಟ್ಟು ಕಾವ್ಯಪ್ರಕಾರಗಳಲ್ಲಿ ನಾಡಿನ ಎಲ್ಲ ಕಾವ್ಯ ಪರಂಪರೆಯ ಸೊಗಡು ಅಡಗಿರುವುದನ್ನು ಕಾಣಬಹುದು ಎಂದು ಆರ್.ವಿ.ಕಾವ್ಯದ ಕುರಿತು ಉಪನ್ಯಾಸಕ ಯೋಗಿಶ್ ಭಟ್ ಮಾತನಾಡಿದರು. ಹಾಗೆಯೇ ಅವರ ಕಥೆ, ಕಾದಂಬರಿಗಳಲ್ಲಿ ಹೊಸ ಹೊಸ ಕನಸು ಚಿಂತನೆಗಳೊಂದಿಗೆ ಹೊಸ ಸಮಾಜ ನಿರ್ಮಿಸುವ ಕಥಾನಾಯಕನ ಹುಮ್ಮಸ್ಸಿದೆ ಎಂದು ಡಾ.ಚಿಂತಾಮಣಿ ಕೂಡ್ಲೆಕೆರೆಯವರು ತಮ್ಮ ಪ್ರಬಂಧದಲ್ಲಿ ಪ್ರಸ್ತುತ ಪಡಿಸಿದರು.



ಇದೇ ಸಂದರ್ಭದಲ್ಲಿ ಡಾ.ಆರ್.ವಿ.ಯವರ ಕವನ ಸಂಕಲನ ‘ಹದ್ದುಗಳು’ ಹಾಗೂ ಅವರ ಮಕ್ಕಳ ಕಥಾ ಸಂಕಲನ ‘ಹೂವಿನೊಡನೆ ಮಾತುಕತೆ’ ಎಂಬೆರಡು ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಕವಿ ಡಾ.ಬಿ.ಎ.ಸನದಿಯವರು ಅಧಿಕಾರದಲ್ಲಿ ಕುಳಿತ ತೋಳ ಹಾಗೂ ಹದ್ದುಗಳ ನಡುವೆ ಬದುಕಬೇಕಾದ ವಾಸ್ತವತೆಯಲ್ಲಿ ನಾವಿದ್ದೇವೆ ಎನ್ನುವುದು ಸತ್ಯ, ಹಾಗಂತ ಬಡವರ ಸಮಸ್ಯೆಯ ಪರಿಹಾರಕ್ಕೆ ಹೊರಟರೆ ನಮಗೇ ಕೀಳರಿಮೆ ಕಾಡುವ ಅಪಾಯ ತಪ್ಪದು. ಇಂತಲ್ಲಿ ಸಾಹಿತ್ಯ ಪ್ರಕಾರಗಳು ತಾತ್ವಿಕ ನೆಲೆಯಲ್ಲೇ ಬಂಡಾಯ ಏಳುವುದು ಅನಿವಾರ್ಯ ಎಂದು ಹೇಳುತ್ತ ಅವರ ‘ಹದ್ದುಗಳು’ ಕವಿತೆಯಲ್ಲಿಯ ಕಾವ್ಯ ಪ್ರತಿಮೆಯ ಕುರಿತು ಪ್ರಸ್ತಾಪಿಸುತ್ತ, ಕಾವ್ಯದ ಕಲ್ಪನೆ ನಮ್ಮನ್ನು ಊರ್ಧ್ವಮುಖವಾಗಿ ಗ್ರಹಿಸಲು ಹಚ್ಚಬೇಕು ಎಂದು ಹೇಳಿದರು. ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯುನ್ನು ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಎಸ್.ಆರ್. ನಾರಾಯಣರಾವ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕವಿ, ಪ್ರಕಾಶಕ ವಿಷ್ಣುನಾಯ್ಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ.ಆರ್.ವಿ.ಭಂಡಾರಿಯವರು ಉಪಸ್ಥಿತರಿದ್ದರು.

ಮಾಸ್ತಿಗೌಡ, ಹೊನ್ನಾವರ



ಹೊಗೆನಕಲ್ ವಿವಾದ ....

ಪುಟ 3 ರಿಂದ

ಸಂದರ್ಭದಲ್ಲಿಯೇ ಕೇಂದ್ರದ ಮಧ್ಯಸ್ತಿಕೆಯಲ್ಲಿ ಬೆಂಗಳೂರಿನ ಯೋಜನೆಗೆ ಆಕ್ಷೇಪ ಕೂಡದೆಂದು ಮತ್ತು ಧರ್ಮಪುರಿ (ಈಗ ವಿಭಜಿತ ಜಿಲ್ಲೆ ಧರ್ಮಪುರಿ, ಕೃಷ್ಣಗಿರಿ) ಜಿಲ್ಲೆಗೆ ಕುಡಿವ ನೀರಿನ ಯೋಜನೆಗೆಂದು 1.4 ಟಿ.ಎಂ.ಸಿ ನೀರನ್ನು ನೀಡಬೇಕೆಂದು ಒಪ್ಪಂದಕ್ಕೆ ಬರಲಾಗಿತ್ತು. ಈ ನೀರನ್ನು ಮುಂದೆ ತಮಿಳುನಾಡಿಗೆ ಹಂಚಿಕೆಯಾಗಲಿರುವ ಕಾವೇರಿ ನೀರಿನ ಪಾಲಿನಲ್ಲಿಯೇ ಪರಿಗಣಿಸಬೇಕೆಂದು ನಿರ್ಧರಿಸಲಾಗಿತ್ತು.

ಈಗ ಎದ್ದಿರುವ ವಿವಾದದಲ್ಲಿ ಹೊಗೆನಕಲ್ ಯೋಜನೆಯ ಪ್ರದೇಶ ಯಾವ ರಾಜ್ಯಕ್ಕೆ ಸೇರಿದೆ? ಅದು ಕರ್ನಾಟಕದ್ದೇ ಎಂದು ಒಂದು ವಾದವಾದರೆ ಅದು ತಮಿಳುನಾಡಿನದು ಎಂಬುದು ಇನ್ನೊಂದು ವಾದ. ಇಂತಹ ಮೂಲಭೂತ ಪ್ರಶ್ನೆಗಳಿಗೆ ವೈಜ್ಞಾನಿಕ ಸಮೀಕ್ಷೆ, ಚರ್ಚೆ, ಪರಸ್ಪರ ತಿಳುವಳಿಕೆ ಅಗತ್ಯವಿದೆ. ಯಾಕೆಂದರೆ ಇಂತಹ ಗಡಿ ಗುರುತಿಸಿಕೊಳ್ಳುವ ಕೆಲಸ ಇನ್ನೂ ಸ್ಪಷ್ಟವಾಗಿ ಆಗಿಲ್ಲ. ನೇಮಿಸಿದ್ದ ಸಮಿತಿಗಳು ಕಾರ್ಯಸ್ಥಗಿತಗೊಳಿಸಿವೆ. ಆದ್ದರಿಂದಲೇ ಗಡಿ ಗುರುತಿಸಿದ ಬಳಿಕವೂ ಉಭಯ ರಾಜ್ಯಗಳು ಪರಸ್ಪರ ಮಾತುಕತೆ ನಡೆಸಿ ಪರಿಹಾರ ಕಂಡುಕೊಳ್ಳಬೇಕು. ಇದಕ್ಕೆ ಅಗತ್ಯವಾದ ಪಾತ್ರವನ್ನು ಕೇಂದ್ರ ಸರ್ಕಾರವೂ ವಹಿಸಲೇಬೇಕು.

ಅಂತೂ ಈ ವಿವಾದಕ್ಕೆ ತಾತ್ಕಾಲಿಕ ತಡೆಯೇನೋ ಸಿಕ್ಕಿದೆ. ಆದರೆ ಈ ನಡುವೆ ನಡೆದ ವಿದ್ಯಮಾನಗಳು ತಮಿಳುನಾಡು-ಕರ್ನಾಟಕ ಜನರ ನಡುವಿನ ಬಾಂಧವ್ಯಕ್ಕೆ ವಿಷವಿಕ್ಕುವ ಹಲವು ಕೃತ್ಯಗಳೂ ಆಗಿವೆ. ಬಸ್‌ಗಳಿಗೆ ಬೆಂಕಿ, ಅಂಗಡಿ, ಹೊಟೆಲ್‌ಗಳ ಧ್ವಂಸ, ಸಿನಿಮಾ ನಟರು, ಉದ್ಯಮಿಗಳ ಉದ್ರೇಕಕಾರಿ ಮಾತುಗಳು, ಸಿನಿಮಾ, ಟಿ.ವಿ. ವಾಹಿನಿಗಳ ಬಂದ್ ಇತ್ಯಾದಿಗಳು ನಡೆದು ಹೋಗಿವೆ. ಎರಡೂ ಕಡೆ ಭಾಷಾಂಧತೆ ಬೆಳೆಯಲು ಎಗ್ಗಿಲ್ಲದ ಯದ್ವಾತದ್ವಾ ಸ್ಪರ್ಧೆ ಏರ್ಪಟ್ಟಿದೆ. ಇದರ ದುಷ್ಪರಿಣಾಮದ ಅಪಾಯಗಳನ್ನು ನಿಧಾನವಾಗಿಯಾದರೂ ಯೋಚಿಸಿ ಅಂತಹ ಸಂಕುಚಿತ ಭಾಷಾಂಧ ಶಕ್ತಿಗಳನ್ನು ದೂರವಿಡುವುದರತ್ತ,

ಸೋಲಿಸುವತ್ತ ಜನತೆ ಗಮನಹರಿಸಬೇಕು...

ಸಮಾನದೂರ - ಸಮಾನ ಹತ್ತಿರ

ಶ್ರೀ

ಅಂತೂ ಇಂತೂ ಮೇ ತಿಂಗಳಲ್ಲೇ ಎಲೆಕ್ಷನ್ ಬಂದೇ ಬಿಟ್ಟಿತು. ಯಡಿಯೂರಪ್ಪನವರ ಆತ್ಮಕ್ಕೆ ಶಾಂತಿ ಸಿಕ್ಕಿರಬಹುದು! ಇನ್ನಷ್ಟು ಗ್ಲಿಸರಿನ್ ಹಿಡಿದುಕೊಂಡು ಹೊರಡಬಹುದು. ತಾನು ಟೋಪ್ಪಿ ಬಿದ್ದ ಕತೆಯನ್ನು ಹೇಳಿ ಹೇಳಿ ಗಿನ್ನಿಸ್ ದಾಖಲೆ ಮಾಡಬಹುದು.

ಇರಲಿ, ಮುಂದ? ಮುಂದೇನು. ರಾಜಕೀಯದಲ್ಲಿ ಏನೂ ಆಗಬಹುದು. ಯಾರೊಂದಿಗೂ ಮೈತ್ರಿ ಇಲ್ಲ ಅಂತ ದೇವೇಗೌಡರು ಘಂಟಾಘೋಷವಾಗಿ ಹೇಳಿಯಾಯ್ತು. ಕಾಂಗ್ರೆಸ್ ಮತ್ತು ಬಿಜೆಪಿ ಇವರಿಗೆ ಸಮಾನ ದೂರ ಅಂತೆ. ಸರಿಯಾದ ಮಾತೇ ಅಲ್ಲವೇ? ಗೌಡರು ಯಾರೊಂದಿಗೂ ಮೈತ್ರಿ ಮಾಡಿ ಕೊಳ್ಳುವುದಿಲ್ಲ, ಪಕ್ಷದೊಳಗಿನವರೊಂದಿಗೂ ಅವರ ಮೈತ್ರಿ ಇರಲಿಲ್ಲ. ಅವರು ಮೈತ್ರಿ ಮಾಡಿಕೊಂಡರೆ ಅಧಿಕಾರದೊಂದಿಗೆ ಮಾತ್ರ! ಕಾಂಗ್ರೆಸ್ ಬಿಜೆಪಿ ಇಬ್ಬರೊಂದಿಗೂ ಸಮಾನವಾಗಿ ಅಧಿಕಾರ ಹಂಚಿಕೊಂಡು, ಸಮಾನವಾಗಿ ದೂರವಿಟ್ಟರು. ಸರಿತಾನೆ ಅವರು ಹೇಳಿದ್ದು, ಇದಪ್ಪ ಸಮಾನತೆ ಅಂದ್ರೆ!

ಇನ್ನು ಮತ್ತೆ ಅತಂತ್ರ ವಿಧಾನಸಭೆ ಆದರೆ ಏನಾಗಬಹುದು? ದೇವೇಗೌಡರನ್ನು ಸಮಾನ ದೂರವಿಡಲು ಕಾಂಗ್ರೆಸ್ ಬಿಜೆಪಿ ಮೈತ್ರಿ? ರಾಜಕೀಯದಲ್ಲಿ ಅಸಾಧ್ಯವೆಂಬುದು ಯಾವುದಾದರೂ ಇದೆಯಾ? ಕಾಂಗ್ರೆಸ್ ಬಿಜೆಪಿ ಎರಡೂ ಪಕ್ಷಗಳೂ ಜನತಾದಳದಿಂದ ಸಮಾನವಾಗಿ ಟೋಪಿ ಬಿದ್ದವರು. ಸಮಾನ ದುಃಖಿಗಳು ಎರಡು ಪಕ್ಷಗಳೂ ಜಾಗತೀಕರಣ, ಉದಾರೀಕರಣ ಅಮೇರಿಕಾದ ಗುಲಾಮಗಿರಿ ಮುಂತಾದ ಹೆಚ್ಚಿನ ವಿಚಾರಗಳಲ್ಲಿ ಸಮಾನ ಮನಸ್ಕರು.

ಏನ್ರೀ ಹಿಂಗೆಲ್ಲ ಏನೇನೋ ಅಸಂಬದ್ಧ ಹೇಳುತ್ತಿದ್ದೀರ. ಇದು ಅಸಾಧ್ಯ. ಅಂತ ಹೇಳೋರು ಎಂ.ಪಿ.ಪ್ರಕಾಶ್‌ರನ್ನು ಕೇಳಿ ನೋಡಿ. ಅವರಿಗೆ ಈ ಎರಡು ಪಕ್ಷಗಳಲ್ಲಿ ಏನೂ ವ್ಯತ್ಯಾಸ ಕಂಡಿಲ್ಲ. ಅದು ಸೇರೋದೋ ಇದು ಸೇರೋದೋ ಅಂತ ಅಳೆದೂ ಸುರಿದೂ, ಕಡೆಗೆ ‘ಹಾಳಾಗಿ ಹೋಗ್ಲಿ ಯಾವ್ದೋ ಒಂದು, ಯಾವ್ದಕ್ಕೆ ಸೇರಿದರೂ ರಾಗಿ ಬೀಸೋದು ತಪ್ಪಲ್ಲ!’ ಅಂತ ಯಾವ್ದೋ ಒಂದು ಪಕ್ಷಕ್ಕೆ ಸೇರ್‍ಕೊಂಡಿದ್ದಾರೆ. ಇದ್ರಿಂದ್ಲೇ ಗೊತ್ತಾಗಲ್ವೇ ಎರಡೂ ಪಕ್ಷಗಳೂ ಸಮಾನ ಅಂತ.

ಕಾಂಗ್ರೆಸ್- ಬಿಜೆಪಿ ಮೈತ್ರಿಯಾದರೆ 20- 20 ಬದಲು 30-30 ಆಗಬಹುದು. ಯಾರು ಮೊದಲು ಮುಖ್ಯಮಂತ್ರಿ ಆಗಬೇಕು ಎಂಬ ವಿಚಾರದಲ್ಲೂ ಸಮಸ್ಯೆ ಬರಲಾರದು. ಅನುಕಂಪದ ಆಧಾರದ ಮೇಲೆ ಯಡ್ಯೂರಪ್ಪನವರೇ ಮುಖ್ಯಮಂತ್ರಿ ಆಗಬಹುದು. ಮುಖ್ಯಮಂತ್ರಿ ಆಗಲು ಅರ್ಹತೆ ಮುಖ್ಯವೋ ಅನುಕಂಪ ಮುಖ್ಯವೋ ಅಂತ ಅಸಂಬದ್ಧ ಪ್ರಶ್ನೆ ಕೇಳಬೇಡಿ. ಯಾಕೆಂದರೆ ಇದುವರೆಗೂ ಅವರು ‘ನನಗೆ ಅರ್ಹತೆ ಇದೆ ಮುಖ್ಯಮಂತ್ರಿ ಆಗ್ತೀನಿ’ ಅಂತ ಹೇಳೇ ಇಲ್ಲ, ಬರೀ ಅನುಕಂಪದ ಆಧಾರದಲ್ಲಿ ಆ ಪದವಿ ಕೇಳುತ್ತಿದ್ದಾರೆ. ಅಂಧಹಾಗೆ ಜೆಡಿ(ಎಸ್) ನವರು ಕಾಂಗ್ರೆಸ್‌ಗೂ ಕೈ ಕೊಟ್ಟಿದ್ದರು. ಆಗ ಈ ವಿಶ್ವಾಸ ದ್ರೋಹ, ಮೋಸ, ವಂಚನೆ, ಅನುಕಂಪ ಇಂಥದ್ದು ಏನೂ ವಿಚಾರಗಳು ಏಳಲೇ ಇಲ್ಲವಲ್ಲ? ಅದಕ್ಕೆ ಹೇಳಿದ್ದು ಬಿಜೆಪಿ ಅತಿ ಬುದ್ಧಿವಂತರ ಪಕ್ಷ ಅಂತ. ಎಂತಹ ಸಂದರ್ಭಗಳನ್ನು ಎನ್‌ಕ್ಯಾಷ್ ಮಾಡಿಕೊಳ್ಳುವ ಚಾಣಾಕ್ಷತೆ!

ರ್‍ರೀ....ಏಳ್ರೀ....ಹೊತ್ತಾಯ್ತು ತರಕಾರಿ ತಗೊಂಬನ್ನಿ ಅಂತ ಎಚ್ಚರಿಸಿದಾಗಲೇ ಎಚ್ಚರ! ಥೂ ಎಂತೆಂಥ ಕನಸು ಬೀಳುತ್ತಪ್ಪ!

ಜನಶಕ್ತಿ ಕನ್ನಡ ವಾರಪತ್ರಿಕೆ

ಬೆಂಗಳೂರಿನಲ್ಲಿ ಮೊನ್ನೆ ಸಾವಿರಾರು ಜನ ಹಮಾಲರು ನೆರೆದರು. ಅವರು ಕೇಳಿದ್ದೇನು. ಅವರ ನೋವು ಸಂಕಟಗಳೇನು?

ಕೋಟಿ ಕೋಟಿ ದುಡಿದು ಕೊಟ್ಟ ಹಮಾಲರ ತುತ್ತಿನ ಚೀಲ ಬರಿದಾಗಿದೆ...

ಕೆ. ಮಹಾಂತೇಶ್

ಆ ನತದೃಷ್ಟ ಹಮಾಲಿ ಹೆಸರು ಅಣ್ಣಾಜಿ... ಅಣ್ಣಾಜಿ ಎಂದರೆ ಎಲ್ಲಾ ಹಮಾಲಿಗಳಿಗೂ ಎಲ್ಲಿಲ್ಲದ ಗೌರವ! ಕಳೆದ 30 ರಿಂದ 40 ವರ್ಷಗಳಿಂದ ತನ್ನ ಕಟ್ಟುಮಸ್ತಾದ ದೇಹದಿಂದ ಎರಡು ಕ್ವಿಂಟಾಲ್ ಚೀಲಗಳನ್ನು ದಬಕ್ಕನೆ ಬೆನ್ನಿಗೇರಿಸಿಕೊಂಡು ದಡಬಡನೆ ನಡೆಯುತ್ತಿದ್ದ. ಹತ್ತಾರು ಹುಡುಗರಿಗೆ ಕುಸ್ತಿ ತಾಲೀಮು ಕಲಿಸಿದ್ದ ಜೀವ ಕೂಡ ಅಣ್ಣಾಜಿ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಎಪಿಎಂಸಿ ಹಮಾಲರ ಸಮಾವೇಶವನ್ನು ಯಶಸ್ವಿಗೊಳಿಸಲು ಸ್ವತ: ಅಣ್ಣಾಜಿ ಉತ್ಸಾಹಿ ಹಮಾಲಿ ಯುವಕರೊಂದಿಗೆ ದುಡಿದಿದ್ದರು.

ಆದರೆ.... ಇತ್ತೀಚೆಗೆ ಇದ್ದಕ್ಕಿದ್ದಂತೆ ಅಣ್ಣಾಜಿ ಕಾಲು ಬಿದ್ದುಹೋದವು... ಸೊಂಟ ಬಗ್ಗಿಹೋಯಿತು.. ಆಗ ಆರಂಭವಾಯಿತು ನೋಡಿ, ಹಮಾಲಿ ಕಾರ್ಮಿಕನ ನಿಜವಾದ ಸಂಕಷ್ಟದ ಬದುಕು. ಅದುವರೆಗೂ ಅಣ್ಣಾಜಿಯನ್ನು ನಂಬಿದ ಮನೆ, ಅಣ್ಣಾಜಿ ನೆಲ ಹಿಡಿದ ತಕ್ಷಣ ಗೋಳಿನ ಗೂಡಾಯಿತು. ತಿನ್ನುವ ಅನ್ನಕ್ಕೂ ಕಷ್ಟಪಡುವಂತಾಯಿತು. ಮತ್ತೊಂದು ಕಡೆ ಗಂಡನ ಅನಾರೋಗ್ಯಕ್ಕೆ, ಆಸ್ಪತ್ರೆ ಖರ್ಚಿಗೆ ಹಣ ಹೊಂದಿಸುವ ಬದುಕು ಅಣ್ಣಾಜಿಯ ಹೆಂಡತಿಯ ನಿತ್ಯ ಕಾಯಕವಾಯಿತು. ಒಂದು ಕಡೆ ಬಡತನ, ಏನೂ ಉಳಿಸಲಾಗದ ಹಮಾಲಿ ಬದುಕು, ಮತ್ತೊಂದೆಡೆ ತಾನು ದುಡಿದ ಅಂಗಡಿ ಮತ್ತು ಸರ್ಕಾರದಿಂದ ಕವಡೆಯ ಸಹಾಯವೂ ಇಲ್ಲ. ಹಮಾಲಿ ಸಂಘದಿಂದ, ಹಲವು ಸಂಘ ಸಂಸ್ಥೆಗಳಿಂದ ಸ್ವಲ್ಪ ಪ್ರಮಾಣದ ಸಹಾಯವೇನೋ ಸಿಕ್ಕಿತು.

ಸಾವಿಗೆ ಶರಣು

ಆದರೆ 30 ರಿಂದ 40 ವರ್ಷಗಳಿಂದ ದುಡಿದುಡಿದು ನಿತ್ರಾಣರಾಗಿದ್ದ ಅಣ್ಣಾಜಿ ಜೀವ ಉಳಿಯುವ ಸ್ಥಿತಿಯಲ್ಲಿರಲಿಲ್ಲ. ಹಾಗಾಗಿ ಒಂದು ಕಾಲದಲ್ಲಿ ಕಟ್ಟುಮಸ್ತಾದ ದೇಹ ಹೊಂದಿದ್ದ ಅಣ್ಣಾಜಿ ಎಂಬ ಹಮಾಲಿ ಕೊನೆಗೆ ಸಾವಿಗೆ ಶರಣಾಗಬೇಕಾಯಿತು.

ಇದು ಕೇವಲ ಹುಬ್ಬಳ್ಳಿಯ ಅಣ್ಣಾಜಿ ಕಥೆಯಲ್ಲ.... ರಾಜ್ಯದ ನೂರಾರು ಪಟ್ಟಣ ಹಳ್ಳಿಗಳಲ್ಲಿ ಬೆವರನ್ನು ಮಾರಿ ಬದುಕುತ್ತಿರುವ ಲಕ್ಷಾಂತರ ಹಮಾಲರ ಪರಿಸ್ಥಿತಿ.

ಕಳೆದ 60 ವರ್ಷಗಳಲ್ಲಿ ಕೇಂದ್ರ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ಹಣವನ್ನು ಹಮಾಲಿಗಳು ತಮ್ಮ ಬೆವರಿನ ಮೂಲಕ ನೀಡಿದ್ದಾರೆ. ಆದರೆ ಅದಕ್ಕೆ ಪ್ರತಿಯಾಗಿ ಅವರಿಗೆ ಸಿಕ್ಕಿದ್ದು ಮಾತ್ರ ಕವಡೆಯಷ್ಟೂ ಇಲ್ಲ.

ಕೇಂದ್ರ ರಾಜ್ಯದಲ್ಲಿ ಎಷ್ಟೆಲ್ಲಾ ಸರ್ಕಾರಗಳು ಅಧಿಕಾರ ನಡೆಸಿವೆ. ಎಷ್ಟೆಲ್ಲ ರಿಯಾಯಿತಿಗಳನ್ನು ಶ್ರೀಮಂತರಿಗೆ ನೀಡಿವೆ. ಆದರೆ ಇದರಲ್ಲಿ ಬಡಪಾಯಿ ಹಮಾಲರಿಗೆ ಮಾತ್ರ ಸಾಸುವೆಯಷ್ಟು ಸಿಗಲಿಲ್ಲ.

ಮತ್ತೊಂದೆಡೆ ರಾಜ್ಯದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿರುವ ಹಮಾಲಿಗಳು ಅಲ್ಲಲ್ಲಿ ತಮ್ಮದೆ ಆದ ಸ್ವತಂತ್ರ ಸಂಘಗಳನ್ನು, ವಿವಿಧ ಹೆಸರಲ್ಲಿ ಕಟ್ಟಿಕೊಂಡಿದ್ದರೂ, ಹಮಾಲರ ಹಕ್ಕುಗಳಿಗಾಗಿ ಅವರಿಗೆ ಸಿಗಬೇಕಾದ ಕಾನೂನು ಸೌಲಭ್ಯಗಳಿಗಾಗಿ ಹೋರಾಟ ನಡೆಸಿರುವುದು ವಿರಳ.

ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ಆರಂಭವಾದ ನಂತರ ಕಳೆದ ಏಳೆಂಟು ವರ್ಷಗಳಲ್ಲಿ ಈ ದಿಶೆಯಲ್ಲಿ ಹಮಾಲರನ್ನು ವ್ಯವಸ್ಥಿತವಾಗಿ ಸಂಘಟಿಸುವ ಪ್ರಯತ್ನ ನಡೆಸಿದೆ. ಆದರೂ ಲಕ್ಷಾಂತರ ಹಮಾಲರು ಈ ಸಂಘಟನಾ ವ್ಯಾಪ್ತಿಯಿಂದ ಹಿಂದಿದ್ದಾರೆ.

ಈ ವಿಶಾಲ ಹಮಾಲಿ ಸಮುದಾಯವನ್ನು ಸಂಘಟಿಸಿ ಅವರ ಜೀವನ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಮಾರ್ಚ್ 31, 2008ರಂದು ರಾಜ್ಯದ ಎಪಿಎಂಸಿ, ಗಿರಣಿ, ವೇರ್‌ಹೌಸ್, ಬಜಾರ್ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಹಮಾಲರ ಬೃಹತ್ ರಾಜಭವನ ಚಲೋ ನಡೆಸಲಾಯಿತು.



ರ್‍ಯಾಲಿ ಮೂಲಕ ಸರ್ಕಾರಕ್ಕೆ ಮಂಡಿಸಲ್ಪಟ್ಟ ಹಮಾಲರ ಬೇಡಿಕೆಗಳು

1. ಎಲ್ಲಾ ಹಮಾಲರಿಗೆ ನಿವೃತ್ತಿ ವೇತನ (ಪಿಂಚಣಿ) ನೀಡಲು ಕ್ರಮವಹಿಸಬೇಕು.
2. ಎಪಿಎಂಸಿಗಳಲ್ಲಿ (ಇಬ್ಬರು) ಹಮಾಲಿ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಬೇಕು.
3. ಜನಶ್ರೀ ವಿಮಾ ಯೋಜನೆಯ ಕಂತು ಹಣವನ್ನು ಎಪಿಎಂಸಿ ಅಥವಾ ಕೃಷಿ ಮಾರಾಟ ಇಲಾಖೆಯಿಂದಲೇ ತುಂಬಬೇಕು ಮತ್ತು ವಿಮಾ ಮೊತ್ತವನ್ನು 1 ಲಕ್ಷಕ್ಕೆ ಏರಿಸಬೇಕು ಹಾಗೂ ವಿಮಾ ಯೋಜನೆಗೆ ಹಮಾಲಿ ಕಾರ್ಮಿಕರ ವಯೋಮಿತಿ 70ಕ್ಕೇರಿಸಬೇಕು.
4. ರಾಜೀವ್ ಗಾಂಧಿ ವಸತಿ ಯೋಜನೆಯಡಿ ಎಲ್ಲಾ ಹಮಾಲರಿಗೆ ಮನೆಗಳನ್ನು ನಿರ್ಮಾಣ ಮಾಡಬೇಕು. ಅದಕ್ಕೆ ಅಗತ್ಯವಾದ ನಿವೇಶನದ ವ್ಯವಸ್ಥೆಯಾಗಬೇಕು ಹಾಗೂ ರೂ.5,000 ಪಾವತಿಯಿಂದ ವಿನಾಯಿತಿ ನೀಡಬೇಕು.
5. ಮಹಿಳಾ ಹಮಾಲರಿಗೆ ಅನುಕೂಲವಾಗುವಂತೆ ಶಿಶುಪಾಲನಾ ಕೇಂದ್ರಗಳನ್ನು ವ್ಯವಸ್ಥೆ ಮಾಡಬೇಕು. ಹೆರಿಗೆ ಭತ್ಯೆ ಒದಗಿಸಬೇಕು.
6. ಹಮಾಲಿ ಕಾರ್ಮಿಕರ ಮಕ್ಕಳಿಗೆ ನೀಡುವ ವಿದ್ಯಾರ್ಥಿ ವೇತನ ಹೆಚ್ಚಿಸಬೇಕು.
7. ಎಪಿಎಂಸಿ ಹೊರಗೆ ನಡೆಯುವ ಕೃಷಿ ಉತ್ಪನ್ನ ವ್ಯವಹಾರವನ್ನು ಮಾರುಕಟ್ಟೆ ಒಳಗೆ ನಡೆಯುವಂತೆ ಕ್ರಮ ವಹಿಸಬೇಕು.
8. ಶ್ರಮಿಕ ಭವನವನ್ನು ಪ್ರತಿ ಎಪಿಎಂಸಿಗಳಲ್ಲಿ ನಿರ್ಮಿಸಬೇಕು.
9. ನೆಲ್ಲು ಭತ್ತ ಚೀಲಗಳು 70 ಕೆ.ಜಿ.ಗಿಂತ ಹೆಚ್ಚಿರದಂತೆ ಕ್ರಮವಹಿಸಬೇಕು ಮತ್ತು 100ರಿಂದ 120 ಕೆ.ಜಿ ತೂಕವುಳ್ಳ ಮೂಟೆಗಳನ್ನು ರದ್ದು ಮಾಡಬೇಕು.
10. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಎಪಿಎಂಸಿ ಕಾನೂನು ತಿದ್ದುಪಡಿ ಮಸೂದೆಯನ್ನು ವಾಪಸ್ ಪಡೆಯಬೇಕು.

ಗಿರಣಿ, ಮಿಲ್, ಗೋಡೌನ್ ಹಮಾಲರ ಬೇಡಿಕೆಗಳು

1. ಗಿರಣಿ/ ಮಿಲ್/ಗೋಡೌನ್‌ಗಳಲ್ಲಿ ದುಡಿಯುತ್ತಿರುವ ಎಲ್ಲಾ ಕಾರ್ಮಿಕರಿಗೆ ಪಿಂಚಣಿ ಯೋಜನೆ ಭವಿಷ್ಯನಿಧಿ ಜಾರಿ ಮಾಡಬೇಕು.
2. ಎಲ್ಲಾ ಕಾರ್ಮಿಕರಿಗೆ ಭವಿಷ್ಯನಿಧಿ ಜಾರಿ ಮಾಡಬೇಕು.
3. ಬೋನಸ್ ಕಾಯಿದೆ ಜಾರಿ ಮಾಡಬೇಕು.
4. ಎಲ್ಲಾ ಕಾರ್ಮಿಕರಿಗೆ ನಿವೇಶನ ನೀಡಬೇಕು.
5. ನಿವೇಶನ ಇದ್ದವರಿಗೆ ಯಾವುದಾದರೂ ಯೋಜನೆ ಅಡಿಯಲ್ಲಿ ಮನೆ ನಿರ್ಮಿಸಿಕೊಡಬೇಕು.
6. ಹಾಜರಿ ಪುಸ್ತಕ ನೀಡಬೇಕು.
7. ರಜಾ ಸೌಲಭ್ಯ ನೀಡಬೇಕು.
8. ಎಲ್ಲಾ ಕಾರ್ಮಿಕರಿಗೆ ಬಿಪಿಎಲ್ ಪಡಿತರ ಚೀಟಿ ನೀಡಬೇಕು.

ಟೌನ್, ಬಜಾರ್ ಮತ್ತು ಗ್ರಾಮೀಣ ಹಮಾಲರ ಬೇಡಿಕೆಗಳು

1. ಟೌನ್, ಬಜಾರ್‌ಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಹಮಾಲಿಗಳಿಗೂ ಕಾರ್ಪೊರೇಷನ್, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳು ಗುರುತಿನ ಚೀಟಿ ಹಾಗೂ ಲೈಸೆನ್ಸ್ ನೀಡಬೇಕು.
2. ನಗರ ಪ್ರದೇಶದ ಎಲ್ಲಾ ಹಮಾಲರಿಗೂ ಹಳದಿ ಪಡಿತರ, ಉಚಿತ ನಿವೇಶನ ಹಾಗೂ ವಸತಿ ಸೌಲಭ್ಯ ಕಲ್ಪಿಸಬೇಕು.
3. ಜನಶ್ರೀ ವಿಮಾ ಕಂತಿನ ಹಣವನ್ನು ಸರ್ಕಾರವೇ ತುಂಬಬೇಕು.
4. ಗ್ರಾಮೀಣ ಪ್ರದೇಶದ ಎಲ್ಲಾ ಹಮಾಲರಿಗೂ ಗ್ರಾಮ ಪಂಚಾಯಿತಿಯಿಂದ ಗುರುತಿನ ಚೀಟಿ ಲೈಸೆನ್ಸ್ ನೀಡಬೇಕು.
5. ಎಲ್ಲಾ ಹಮಾಲರಿಗೂ ಪಂಚಾಯಿತಿ ವ್ಯಾಪ್ತಿಯಲ್ಲಿ ಉಚಿತ ನಿವೇಶನ, ರೇಷನ್ ಕಾರ್ಡ್ ಹಾಗೂ ವಸತಿ ಸೌಲಭ್ಯ ದೊರೆಯಬೇಕು.
6. 60 ವರ್ಷ ದಾಟಿದ ಎಲ್ಲಾ ಹಮಾಲರಿಗೆ ಪಿಂಚಣಿ ಯೋಜನೆ, ಉಚಿತ ಆಸ್ಪತ್ರೆ ಸೌಲಭ್ಯ ಜಾರಿಯಾಗಬೇಕು.

ಭಾರಿ ಮೆರವಣಿಗೆ ಮ್ಲಾನಗೊಳಿಸಿತು ನೊಂದವರ ಘೋಷಣೆ

ಮಾರ್ಚ್ 31 ಬೆಳಗ್ಗಿನಿಂದಲೇ ಸಾವಿರಾರು ಹಮಾಲರಿಂದ ಬೆಂಗಳೂರಿನ ರೈಲ್ವೆ ನಿಲ್ದಾಣ ತುಂಬಿ ತುಳುಕುತ್ತಿತ್ತು. ರಾಜ್ಯದ ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಬಾಗಲಕೋಟೆ, ಬೆಳಗಾಂ, ಧಾರವಾಡ, ಗದಗ್, ಹಾವೇರಿ, ಉ.ಕನ್ನಡ, ದ.ಕನ್ನಡ, ಚಿತ್ರದುರ್ಗ, ತುಮಕೂರು, ಮಂಡ್ಯ, ಹಾಸನ, ಕೊಪ್ಪಳ, ಚಿಕ್ಕಬಳ್ಳಾಪುರ, ಕೋಲಾರ ಮೊದಲಾದ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಎಪಿಎಂಸಿ, ಗಿರಣಿ, ವೇರ್‌ಹೌಸ್, ಬಜಾರ್, ಮತ್ತು ಗ್ರಾಮೀಣ ಪ್ರದೇಶದ ಹಮಾಲಿ ಕಾರ್ಮಿಕರು ಆಳುವ ಪ್ರಭುಗಳಿಗೆ ತಮ್ಮ ಅಳಲನ್ನು ತೋಡಿಕೊಳ್ಳಲು ಜಮಾವಣೆಗೊಂಡಿದ್ದರು. ಆಕರ್ಷಕವಾದ ಬ್ಯಾನರ್ಸ್, ಬಾವುಟಗಳು, ಪ್ಲೇಕಾರ್ಡ್‌ಗಳು ಹಾಗೂ ಘೋಷಣೆಗಳಿಂದ ಉದ್ಯಾನ ನಗರದ ನಾಗರೀಕರ ಗಮನ ಸೆಳೆದರು.

ರೈಲ್ವೆ ನಿಲ್ದಾಣದಿಂದ ಹೊರಟು ಬನ್ನಪ್ಪ ಪಾರ್ಕ್ ಸೇರಿದ ಈ ಮೆರವಣಿಗೆಯ ನೇತೃತ್ವವನ್ನು ಹಮಾಲಿ ಫೆಡರೇಷನ್ ರಾಜ್ಯ ಅಧ್ಯಕ್ಷರಾದ ಎಸ್.ಪ್ರಸನ್ನಕುಮಾರ್, ಪ್ರಧಾನ ಕಾರ್ಯದರ್ಶಿ, ಡಿ.ವೆಂಕಟರಮಣ, ಕಾರ್ಯದರ್ಶಿ, ಕೆ.ಮಹಾಂತೇಶ್, ಹಾಗೂ ರಾಜ್ಯ ಪದಾಧಿಕಾರಿಗಳು ಭಾಗವಹಿಸಿದ್ದರು.

ಬನ್ನಪ್ಪ ಪಾರ್ಕ್‌ನಲ್ಲಿ ನಡೆದ ಸಭೆಯಲ್ಲಿ ಈ ಹೋರಾಟಕ್ಕೆ ಬೆಂಬಲಿಸಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ, ಎನ್.ಎಲ್. ಭರತ್‌ರಾಜ್, ಅಂಗನವಾಡಿ ನೌಕರರ ಸಂಘದ ಪ್ರ.ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಕಟ್ಟಡ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ವೀರಸ್ವಾಮಿ ಎಸ್ಎಫ್ಐ ರಾಜ್ಯ ಅಧ್ಯಕ್ಷರಾದ ರಾಜಶೇಖರ್‌ಮೂರ್ತಿ ಮಾತನಾಡಿದರು.

ಎಪಿಎಂಸಿ ನಿರ್ದೇಶಕರಿಗೆ ಮನವಿ ಹಲವು ಭರವಸೆ

ಪ್ರತಿಭಟನಾ ಸಭೆಗೆ ಎಪಿಎಂಸಿ ಆಯುಕ್ತರಾದ ಶ್ರೀನಿವಾಸ್ ಹಾಗೂ ಜಂಟಿ ಆಯುಕ್ತರಾದ ಚಂದ್ರಮೋಹನ್ ಆಗಮಿಸಿ ಸರ್ಕಾರದ ಪರವಾಗಿ ಮನವಿ ಸ್ವೀಕರಿಸಿದರು. ಅಲ್ಲದೆ, ಸ್ಥಳದಲ್ಲೇ 100ರಿಂದ 120 ಕೆ.ಜಿ ತೂಕದ ಚೀಲದ ಭಾರವನ್ನು 70 ಕೆ.ಜಿಗೆ ಇಳಿಸುವ ನಿರ್ಧಾರ ಕೈಗೊಂಡಿರುವುದಾಗಿ ಘೋಷಿಸಿದರು. ಅಲ್ಲದೆ ಜನಶ್ರೀ ವಿಮಾ ಹಣವನ್ನು ಸರ್ಕಾರವೇ ತುಂಬುವ ಬಗ್ಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡಿ ಕಳಿಸಲಾಗಿರುವುದನ್ನು ತಿಳಿಸಿದರು. ಇದಲ್ಲದೆ ನಿವೇಶನ, ಸಬ್ಸಿಡಿ ಕುರಿತು ಹಮಾಲರ ಪರವಾಗಿ ನಿರ್ಧಾರ ಕೈಗೊಂಡಿರುವುದನ್ನು ಸಭೆಯಲ್ಲಿ ಘೋಷಿಸಿದರು.

ರಾಜ್ಯಪಾಲರ ಭೇಟಿ

ನಂತರ ಪ್ರಧಾನ ಕಾರ್ಯದರ್ಶಿ ಡಿ.ವೆಂಕಟರಮಣ, ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ ನೇತೃತ್ವದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.



ರ್‍ಯಾಲಿಯಲ್ಲಿ ಎಪಿಎಂಸಿ ನಿರ್ದೇಶಕರು ಮಾತನಾಡುತ್ತಿರುವುದು

ಚಿಂತಾಮಣಿ : ಮಹಿಳೆಯ ಮೇಲೆ ಲಾರಿ ಬೀಸಿದ ಪೋಲೀಸಪ್ಪ

ಸಿನಿಮಾನಾ.... ನಿಜ ಘಟನೆಯಾ ?

ಸಿನಿಮಾನಾ... ನೈಜ ಘಟನೆಯೂ ಎಂದು ಎಚ್ಚರಗೊಳ್ಳುವಲ್ಲಿ ನಡೆದೇ ಹೋಗಿತ್ತು. ಅತ್ಯಂತ ಅಮಾನವೀಯ, ಅನಾಗರೀಕ ರಾಕ್ಷಸ ದೌರ್ಜನ್ಯ. ನಡೆಸಿದವರ್‍ಯಾರೂ ಅಲ್ಲಾ.... ಕರ್ತವ್ಯ ನಿರತ, ಸಮವಸ್ತ್ರಧಾರಿತ ಚಿಂತಾಮಣಿ ಪಟ್ಟಣದ ಸರ್ಕಲ್ ಇನ್ಸ್‌ಪೆಕ್ಟರ್ ರಮೇಶ್.

ಎಂತಹುದೇ ಸಮಸ್ಯೆ ಇರಲಿ, ಸಂಜೆ 6 ಗಂಟೆಯ ನಂತರ ಹೆಣ್ಣು ಮಕ್ಕಳನ್ನು ಪೋಲೀಸ್‌ಠಾಣೆಗೆ ಕರೆಯುವಂತಿಲ್ಲ. ಮಹಿಳಾ ಸಿಬ್ಬಂದಿಯಿಲ್ಲದೆ... ಮಹಿಳೆಯರನ್ನು ಮಹಿಳಾ ಹೋರಾಟಗಾರರನ್ನು ಪುರುಷ ಪೋಲೀಸ್ ಸಿಬ್ಬಂದಿಯಾಗಲೀ.. ಅಧಿಕಾರಿ ಗಳಾಗಲೀ... ಮುಟ್ಟುವಂತಿಲ್ಲ. ಇವೆಲ್ಲವನ್ನು ತಮ್ಮ ನಡವಳಿಕೆ ತಿಳುವಳಿಕೆಯಲ್ಲಿ ಅಂತರ್ಗತ ಮಾಡಿಕೊಳ್ಳಬೇಕಾದ ಪೋಲೀಸ್ ಅಧಿಕಾರಿಗಳು ವಾಸ್ತವದಲ್ಲಿ ನಡೆದುಕೊಳ್ಳುತ್ತಿರುವುದಾದರೂ ಹೇಗೆ?.... ಹೀಗೊಂದು ವಾಸ್ತವ ಅನುಭವ ಚಿಂತಾಮಣಿಯ ಸಾರ್ವಜನಿಕರಿಗೆ.

ಈಕೆ ಜಗದೀಶ್ವರಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅವಿಭಜಿತ ಕೋಲಾರ ಜಿಲ್ಲಾ ಸಮಿತಿ ಅಧ್ಯಕ್ಷೆ, ತಂದೆ ಇಲ್ಲ. ಬದುಕಿಗೋಸ್ಕರ ಹಿರಿ ವಯಸ್ಸಿನ ತಾಯಿ ಹಣ್ಣಿನ ವ್ಯಾಪಾರಿಗಳಾಗಿದ್ದಾರೆ. ಸಾಕ್ಷರತಾ ಪ್ರೇರಕರಾಗಿರುವ ಜಗದೀಶ್ವರಿ ಬಿಡುವಿನ ವೇಳೆ ತಾಯಿಗೆ ನೆರವು ನೀಡುತ್ತಾರೆ. ಕಳೆದ 30-35 ವರ್ಷಗಳಿಂದ ಬೀದಿ

**ಒಬ್ಬ ಮಹಿಳೆಗೆ ಅದೂ ಆಕೆ
ಮಹಿಳಾ ಸಂಘಟನೆಯ ನಾಯಕಿ
ಅಂತಾ ಗೊತ್ತಿದ್ದೂ ಕೂಡಾ ಒಬ್ಬ
ಪೊಲೀಸ್ ಅಧಿಕಾರಿ
ನಡುಬೀದಿಯಲ್ಲಿ ಕೆನ್ನೆಗೆ ರಪರಪ
ಬಾರಿಸುವುದು, ಬೀದಿಯಲ್ಲಿ
ಬಡಿಯುತ್ತಾ ಠಾಣೆಗೆ
ಎಳೆದೊಯ್ಯುವುದು ಅಂದರೇನು?
ಅಷ್ಟಕ್ಕೂ ಆ ಮಹಿಳೆ ಮಾಡಿದ
ಅಪರಾಧವಾದರೂ ಏನು?**

ಬದಿಯಲ್ಲಿ ಒಂದೇ ಸ್ಥಳದಲ್ಲಿ ವ್ಯಾಪಾರದ ಮೂಲಕ ಬದುಕು ನಡೆಸಿದ್ದಾರೆ. ಬೀದಿ ಬದಿ ಅಂಗಡಿಗಳು ಅಕ್ರಮ, ಆದರೆ ದಿನಂಪ್ರತಿ ಪೋಲೀಸರಿಗೆ ಒಂದಿಷ್ಟು ಹಣ ನೀಡುತ್ತಾ ಹೋಗುವವರೆಗೂ ಅವು ಸಕ್ರಮ. ಇದು ರಾಜ್ಯವ್ಯಾಪಿ ಕಾಣುವ ಚಿತ್ರಣ. ಬೆಂಗಳೂರಿನ ಕಲಾಸಿಪಾಳ್ಯದ ಮಾರುಕಟ್ಟೆಯ ಬೀದಿಬದಿ ಅಂಗಡಿಯವರು ಪ್ರತಿ ನಿತ್ಯ ಪೋಲೀಸ್ ಸಿಬ್ಬಂದಿಗೆ ನೀಡುವ ಲಂಚ 50 ರಿಂದ 150 ರೂಪಾಯಿಗಳು. ಗ್ರಾಮಾಂತರ ಪಟ್ಟಣಗಳಲ್ಲಿ 20 ರಿಂದ 50. ಹೀಗೆ ಸಾವಿರಾರು ಅಂಗಡಿಗಳು ಸ್ವ ಉದ್ಯೋಗದ ಮುಖೇನ ಆಯಾ ವ್ಯಾಪ್ತಿಯ ಪೋಲೀಸರೊಂದಿಗೆ ಸೆಣಸುತ್ತಾ ಬದುಕು ನಡೆಸುತ್ತಿರುವುದೇ ಹೀಗೆ.

ಇದಕ್ಕೆ ಯಾರು ಹೊಣೆ? ಸರ್ಕಾರಕ್ಕೆ ಸಮಾಜದ ಕಳಸ್ತರದ ದುಡಿಯುವ ಜನತೆಯ ಪ್ರಶ್ನೆಗಳು ಎಂದೂ ಆದ್ಯತೆಯಾಗಲಿಲ್ಲ. ಇಡೀ ಊರಿಗೆ ತರಕಾರಿ ಹೂ-ಹಣ್ಣು ಪೂರೈಸುವ ಇವರ ಕಷ್ಟಗಳ ಅಷ್ಟಿಷ್ಟಲ್ಲ. ಒಂದೆಡೆ ಹೆಚ್ಚುತ್ತಿರುವ ಜೀವನದ ಅಭದ್ರತೆ, ಜನತೆಯ ಕೊಳ್ಳುವ ಶಕ್ತಿಯನ್ನು ಕುಂಠಿತಗೊಳಿಸುತ್ತಿದ್ದು, ಕುಟುಂಬದಲ್ಲಿ ಪಡಿತರ ಬಳಕೆಯು ಕುಸಿದಿರುವಾಗ ಹಣ್ಣನ್ನು ಕೊಳ್ಳುವುದೆಲ್ಲಿ? ವ್ಯಾಪಾರ ಕುಸಿದಿದೆ. ಆದಾಯ ಕಡಿತಗೊಂಡಿದೆ.

ದುಬಾರಿ ಬೆಲೆ ಏರಿಕೆ ಮತ್ತೊಂದೆಡೆ ಪೋಲಿಸರ ದಿನನಿತ್ಯದ ಕಿರುಕುಳ.. ದುಡಿಮೆಗೆ ಬೇರೆ ಪರ್ಯಾಯ ದಾರಿಗಳಲ್ಲಿ ಹೀಗೆ... ವ್ಯಾಪಾರ ನಡೆಸುತ್ತಿದ್ದ ಜಗದೀಶ್ವರಿ ತಾಯಿ ಮಣಿಯನ್ನು ಮಾರ್ಚ್ 4 ರಂದು ವ್ಯಾಪಾರದಲ್ಲಿ ತಲ್ಲೀನರಾಗಿದ್ದಾಗ ಏಕಾಏಕಿ ಲಾರಿ ಬೀಸುತ್ತಾ... ಮೊಬೈಲ್ ಅನ್ನು ರಜನಿಕಾಂತ್ ಸ್ಟೈಲ್‌ನಲ್ಲಿ ತಿರುಗಿಸುತ್ತಾ ಬೋಳಿ ಮಗನೇ... ಸೂಳೆ ಮಗನೇ ಎಂದು ಬೈಯುತ್ತಾ ಬಂದವನೇ ಫುಟ್‌ಪಾತ್ ಮೇಲಿನ ಅಂಗಡಿ ಖಾಲಿ ಮಾಡು ಎಂದವನೇ... ಅಂಗಡಿಯ ಮೇಲೆ ಲಾರಿ ಬೀಸಿದ. ಪರಿಣಾಮ ಅಡಿಕೆ, ಹಲವು ಹಣ್ಣುಗಳು.. ಚೆಲ್ಲಾಡಿವೆ. ಇದನ್ನು ಪ್ರಶ್ನಿಸಿದ ಮಣಿಯಮ್ಮನ್ನು ಜೋರಾಗಿ ನೂಕಿ 4-5 ಕೆ.ಜಿ. ದ್ರಾಕ್ಷಿ ಎರಚಾಡಿದ್ದಾನೆ. ಅದೇ ಸಮಯಕ್ಕೆ ಅಲ್ಲಿಗೆ ಬಂದ ಜಗದೀಶ್ವರಿ ಆತನ ಅನಾಗರೀಕ ವರ್ತನೆ ಪ್ರಶ್ನಿಸಿ 'ಕಾನೂನು ಪ್ರಕಾರ ನೋಟೀಸ್ ಜಾರಿ ಮಾಡಿ ಖಾಲಿ ಮಾಡ್ತೀವಿ' ಎಂದೊಡನೆ... ಆಕೆಯ ಕೆನ್ನೆಗೆ ಒಂದೇ ಸಮನೆ ಹತ್ತು ಹನ್ನೆರಡು ಬಾರಿ ಹೊಡೆದಿದ್ದನ್ನು ನೋಡಿ ನೆರವಿಗೆ ಬಂದ ಸಾರ್ವಜನಿಕರನ್ನು ಹೆದರಿಸಿ 'ಮಾತನಾಡಲೂ ಬಿಡದೆ.. ಪೋಲೀಸ್ ಠಾಣೆವರೆಗೆ ಹೊಡೆದು ಒದ್ದು ಉರುಳಾಡಿಸಿ ಕರೆ ತಂದಿದ್ದಾನೆ. ಆತನ ವರ್ತನೆಗೆ ಜನ ಭಯಭೀತರಾಗಿದ್ದಾರೆ. ಈ ಕಿರುಕುಳ ಆಟೋ ರಿಕ್ಷಾ ಚಾಲಕರಿಗೆ.. ಒಟ್ಟಿಗೆ ಓಡಾಡುವ ಅಣ್ಣ ತಂಗಿ, ಅಪ್ಪ -ಮಗಳು, ಗಡ್ಡ ಉದ್ದವಾಗಿ ಬಿಟ್ಟವರು, ಕೂದಲು ಉದ್ದ ಬಿಟ್ಟ ಹುಡುಗರಿಗೆ, ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಸಾಮಾನ್ಯ ಸಂಗತಿಯಾಗಿವೆ. ಇದರ ನಡುವೆ ಎರಡು-ಮೂರು ಭಾರಿ ಈ ವರ್ತನೆಗಳನ್ನು ಪ್ರಶ್ನಿಸಿದ ಜಗದೀಶ್ವರಿಯನ್ನೂ ಗುರಿಯಾಗಿಸಿ ಮಾಡಿರುವ ಈ ಹಲ್ಲೆ ಅತ್ಯಂತ ಅಮಾನವೀಯವಾಗಿದೆ. ಇದು ಸಾಲವೆಂಬಂತೆ... ಎಳೆದಾಡುವಾಗ ಬಳೆ ತಗುಲಿ ರಕ್ತ ಬಂದದ್ದನ್ನು ತನ್ನ ಮೇಲೆ ಚಾಕುವಿನಿಂದ ದಾಳಿ ಮಾಡಿದರೆಂದು ಸುಳ್ಳು ಮೊಕದ್ದಮೆ ಹೂಡಿದ್ದಾನೆ ಈ ಪುಣ್ಯಾತ್ಮ.

ಪೋಲೀಸ್ ಠಾಣೆಗೆ ಸ್ವ ಪ್ರತಿಷ್ಠೆಯ ವಿಷಯವಾಗಿದ್ದರಿಂದ ಜಗದೀಶ್ವರಿ ನೀಡಿದ ದೂರನ್ನು ಇಲ್ಲಿಯವರೆಗೂ ದಾಖಲಿಸಿಲ್ಲ. ಪ್ರಸ್ತುತ ಪ್ರಕರಣ ಕೋರ್ಟ್‌ನಲ್ಲಿದೆ. ಹೊರಗೆ ಜನಪರ ಪ್ರಜಾಸತ್ತಾತ್ಮಕ ಚಳುವಳಿಗಳು ಸಂಘಟನೆಗಳು ಹೋರಾಟವನ್ನು ತೀವ್ರಗೊಳಿಸುತ್ತಿದ್ದಾರೆ. ಕಳೆದ ಹಲವಾರು ದಿನಗಳಿಂದ ಪೋಲೀಸ್ ಠಾಣೆಯ ಎದುರು ಅನಿರ್ದಿಷ್ಟಾವಧಿ ಹೋರಾಟ ನಡೆಯುತ್ತಿದ್ದರೂ ಜಿಲ್ಲಾಡಳಿತ ಗಮನಹರಿಸಿಲ್ಲ. ಹಾಗಾಗಿ ಹೋರಾಟವನ್ನು ವಿಸ್ತರಿಸುವ ಹಾಗೂ ತೀವ್ರಗೊಳಿಸುವ ಮುಖೇನ ಅಧಿಕಾರಶಾಹಿ ದರ್ಪವನ್ನು ಮಣಿಸುವ ಹೋರಾಟದ ಯೋಜನೆ ರೂಪುಗೊಳ್ಳುತ್ತಿದೆ.

○ ಕೆ.ಎಸ್.ಲಕ್ಷ್ಮಿ

ಶಿರಗುಪ್ಪ : ಗೂಂಡಾ ದಾಳಿಗೆ ಹೋರಾಟದ ಎದಿರೇಟು

ಬಳ್ಳಾರಿ ಜಿಲ್ಲೆಯ ಭತ್ತದ ಖಣಜವೆಂದೇ ಹೆಸರಾಗಿರುವ ಸಿರುಗುಪ್ಪ ತಾಲ್ಲೂಕಿನ ಕೆಂಚನಗುಡ್ಡ ಗ್ರಾಮ ಒಂದು ಐತಿಹಾಸಿಕ ಸ್ಥಳವಾಗಿದೆ. ವಿಜಯನಗರ ಅರಸರ ಸಾಮಂತರಾದ ಕೆಂಚನಗೌಡ, ರಾಣಿ ತಂಗಮ್ಮ ಆಳಿದ ಪಾಳೆಯ ಪಟ್ಟು, ಕೆಂಚನಗುಡ್ಡ. ತುಂಗಭದ್ರಾ ನದಿಯ ದಂಡೆಯಲ್ಲಿರುವ ಈ ಗ್ರಾಮ ಪ್ರವಾಸಿತಾಣವೂ ಹೌದು. ಆದರೆ ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದೆ ಈ ಗ್ರಾಮದ ಜನರ ಬದುಕು ನರಕ ಸದೃಶ್ಯವಾಗಿದೆ. ಅಭಿವೃದ್ಧಿ ಎಂಬುದು ಕನಸಿನ ಮಾತಾಗಿವೆ. ಸರ್ಕಾರದಿಂದ ಮಂಜೂರಾಗುವ ಹಣವನ್ನು ಗುಳುಂ ಎಂದು ನುಂಗುವ ಭಾರಿ ಕುಳಗಳು ಗ್ರಾಮದಲ್ಲಿದೆ. ಗ್ರಾಮ ಪಂಚಾಯ್ತಿಯ ಅಧಿಕಾರವನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡಿರುವ ಈ ಕುಳಗಳು ರಾಜಕೀಯ ಪ್ರಭಾವ, ಜಾತಿ ಪ್ರಾಬಲ್ಯದ ಮದದಿಂದ ಮೆರೆಯುತ್ತಿವೆ. ತಮ್ಮ ವಿರುದ್ಧ ಧ್ವನಿಯೆತ್ತಿದವರ ಬಾಯಿ ಮುಚ್ಚಿಸಲು ಗೂಂಡಾ ಪಡೆಯೊಂದನ್ನು ಕಟ್ಟಿಕೊಂಡಿದ್ದಾರೆ. ಈ ಗೂಂಡಾ ಪಡೆಯ ನಾಯಕ ಗ್ರಾಮ ಪಂಚಾಯ್ತಿಯ ಉಪಾಧ್ಯಕ್ಷ ಈತನ ಹೆಸರು ಪೆದ್ದರಾಮಪ್ಪನವರ ಅಡಿವೆಪ್ಪ. ಇವರು ಮಾಡುವ ಅನ್ಯಾಯ, ದೌರ್ಜನ್ಯಗಳ ವಿರುದ್ಧ ಮಾತಾಡಿದವರ ಬಾಯಲ್ಲಿ, ಮೂಗಲ್ಲಿ ರಕ್ತ ಬರುವಂತೆ ಹೊಡೆಯುವುದು ಇವರು ಮಾಡುವ ಘನಕಾರ್ಯ. ಇವರ ಈ ಘನ ಕಾರ್ಯಕ್ಕೆ ತಾಲ್ಲೂಕಿನ ಶಾಸಕರಾದ ಎಂ.ಎಸ್. ಸೋಮಲಿಂಗಪ್ಪನವರ ಕುಮ್ಮಕ್ಕು ಬೇರೆ ಇದೆ. ಈ ಹಿಂದೆ ಇವರ ವಿರುದ್ಧ ಮಾತಾಡಿ ದವರೆಲ್ಲಾ ಮೈ, ಕೈ ಮುರಿಸಿಕೊಂಡು ಮೌನವಾಗಿದ್ದಾರೆ.ಹಲವಾರು ಜನ ಶಿಕ್ಷಕರು ಈ ಗೂಂಡಾ ಪಡೆಯ ದೌರ್ಜನ್ಯಕ್ಕೆ ಹೆದರಿ ವರ್ಗಾವಣೆ ಮಾಡಿಸಿಕೊಂಡು ಹೋಗಿದ್ದಾರೆ. ಇವರ ರಾಜಕೀಯಕ್ಕೆ ಮಣೆ ಹಾಕುತ್ತಾ ಏಜೆಂಟ್‌ಗಿರಿ ಮಾಡುತ್ತಿರುವ ಉಸ್ಮಾನ್ ಪಟೇಲ್ ಬಿರಾದಾರ್ ಎಂಬ ಶಿಕ್ಷಕ ರಾಜಕೀಯ ಪುಡಾರಿಯಂತೆ ಮೆರೆಯುತ್ತಿದ್ದಾನೆ. ಶಾಲೆಯೂ ಕೂಡ ಇವರ ರಾಜಕೀಯ ಅಖಾಡವಾಗಿದೆ. ಜನ ಭಯದಿಂದ ಉಸಿರು ಬಿಗಿ ಹಿಡಿದುಕೊಂಡು ಬದುಕು ಸಾಗಿಸುತ್ತಿದ್ದಾರೆ.

ಬೆದರಿಸುವ ಪ್ರಯತ್ನ

ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಗ್ರಾಮದ ಕೂಲಿಕಾರರನ್ನು ಸಂಘಟಿಸಿದ ಕರ್ನಾಟಕ ಪ್ರಾಂತ ರೈತ ಸಂಘ ಜನರ ಬದುಕಿಗೆ ಧ್ವನಿಯಾಯಿತು. ನೂರಾರು ಜನ ಕೂಲಿಕಾರರು ಉದ್ಯೋಗ ಪಡೆದು ಸಂಘದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳತೊಡಗಿದರು. ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡರು. ಜನರು ಈ ರೀತಿಯಾಗಿ ಸಂಘಟನೆಯಾದುದನ್ನು ಕಂಡು ಕಣ್ಣು ಕೆಂಪಗೆ ಮಾಡಿಕೊಂಡು ಗ್ರಾಮ ಪಂಚಾಯ್ತಿಯ ಉಪಾಧ್ಯಕ್ಷ ಪೆದ್ದರಾಮಪ್ಪನವರ ಅಡಿವೆಪ್ಪ ಗೂಂಡಾಗಿರಿಯ ಬೆದರಿಕೆ ಹಾಕತೊಡಗಿದ. ಜನ ಆತನ ಗೂಂಡಾಗಿರಿಯ ಬೆದರಿಕೆಗೆ ಸಂಘಟನೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವ ಮೂಲಕ ಉತ್ತರ ನೀಡಿದರು.

ಬಿ.ಅಡಿವೆಪ್ಪ, ಬಿ.ಸುರೇಶ, ಹುಗ್ಗಿ ಅಡಿವೆಪ್ಪನವರ ಮುಂದಾಳತ್ವದಲ್ಲಿ ಸಂಘಟಿತರಾದ ಗ್ರಾಮದ ಜನತೆ ಸಂಘದ ಶಕ್ತಿಯನ್ನು ಅರಿತುಕೊಂಡರು. ರಾಜಕೀಯದ ಬಗ್ಗೆ ಮಾತಾಡತೊಡಗಿದರು. ಗ್ರಾಮದ ಸಮಸ್ಯೆಗಳ ಬಗ್ಗೆ ಪ್ರಶ್ನಿಸತೊಡಗಿದರು. ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾದ ಪೆದ್ದರಾಯಪ್ಪನವರ ಅಡಿವೆಪ್ಪ ದೌರ್ಜನ್ಯದಿಂದ ಕುಡಿಯುವ ನೀರಿನ ಮೇನ್ ಪೈಪ್‌ಲೈನಿಗೆ ಅಕ್ರಮ ಕನೆಕ್ಷನ್ ತೆಗೆದುಕೊಂಡು ತನ್ನ ಮನೆಗೆ ನೀರಿನ ಪೈಪ್ ಹಾಕಿಕೊಂಡಿದ್ದಾರೆ. ಇದರಿಂದ ಗ್ರಾಮದ ಜನತೆಕುಡಿಯುವ ನೀರಿಗಾಗಿ ಪರದಾಡುವಂತಾಯಿತು. ಆತನ ಈ ದೌರ್ಜನ್ಯವನ್ನು ಪ್ರತಿಭಟಿಸಿ, ರೈತ ಸಂಘದ ಕಾರ್ಯಕರ್ತರಾದ ಟಿ.ಮುದುಕಪ್ಪ, ಟಿ.ತಿಮ್ಮಪ್ಪ ಮತ್ತು ಎಂ.ಅಡಿವೆಪ್ಪ ಗ್ರಾಮ ಪಂಚಾಯ್ತಿಗೆ ದೂರು ಸಲ್ಲಿಸಿದರು. ಇದರಿಂದ ಕೆರಳಿದ ಪಿ.ಅಡಿವೆಪ್ಪ ಮತ್ತು ಆತನ ಗೂಂಡಾಪಡೆ, ಹುಚ್ಚು ನಾಯಿ ಕಡಿದವರಂತೆ ಎಗರಾಡುತ್ತಾ ಕಾಂ: ಬಿ.ಸುರೇಶ್‌ರವರ ಮೇಲೆರಗಿ ದೈಹಿಕ ಹಲ್ಲೆ ನಡೆಸಿತು.

ದೈಹಿಕ ಹಲ್ಲೆ

ಬಿ.ಸುರೇಶ್‌ರವರ ಮೇಲೆ ನಡೆದ ಈ ಹಲ್ಲೆಯನ್ನು ಪ್ರತಿಭಟಿಸಿ 27.03.2008ರಂದು ನೂರಾರು ಜನ ಕೆಂಬಾವುಟ ಹಿಡಿದು, ಗೂಂಡಾ ದಾಳಿಯ ವಿರುದ್ಧ ಘೋಷಣೆ ಕೂಗುತ್ತಾ, ಗ್ರಾಮದಲ್ಲಿ ರ್‍ಯಾಲಿ ನಡೆಸಿ, ಗ್ರಾಮ ಪಂಚಾಯ್ತಿಯ ಮುಂದೆ ಧರಣಿ ಕುಳಿತರು. ಗೂಂಡಾ ನಾಯಕ ಪಿ.ಅಡಿವೆಪ್ಪನವರ ಉಪಾಧ್ಯಕ್ಷ ಸ್ಥಾನವನ್ನು ರದ್ದುಗೊಳಿಸಬೇಕು, ಆತನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು, ದೌರ್ಜನ್ಯದಿಂದ ಪೈಪ್ ಲೈನಿಗೆ ಹಾಕಿದ ಕನೆಕ್ಷನ್ ತೆಗೆದು ಹಾಕಬೇಕು ಎಂದು ಒತ್ತಾಯಿಸಿ ನಡೆದ ಧರಣಿಯನ್ನು ಉದ್ದೇಶಿಸಿ ಎಸ್.ಕೆ. ಸೋಮಪ್ಪ, ಬಿ.ಅಡಿವೆಪ್ಪ, ಬಿ.ಸುರೇಶ್ ಮಾತನಾಡಿದರು. ಜನಶಕ್ತಿಯ ಮುಂದೆ ನಿಮ್ಮ ಗೂಂಡಾಗಿರಿ ನಡೆಯುವುದಿಲ್ಲ. ನಿಮ್ಮ ಗೂಂಡಾಗಿರಿಯನ್ನು ಮಟ್ಟ ಹಾಕುವ ಶಕ್ತಿಯಿದೆ ತಾಕತ್ತಿದ್ದರೆ ಮುಂದೆ ಬನ್ನಿ ಎಂದು ಸವಾಲು ಹಾಕಿದ ಸಂಗಾತಿಗಳು, ಇನ್ನು ಮುಂದೆ ಗೂಂಡಾಗಿರಿಯನ್ನು ಕೈಬಿಡದಿದ್ದರೆ ತಕ್ಕ ಪಾಠವನ್ನು ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಹತ್ತು ವರ್ಷಗಳಿಂದ ಗೂಂಡಾಗಿರಿ ಮಾಡಿಕೊಂಡು ಮೆರೆಯುತ್ತಿದ್ದ ಪಿ.ಅಡಿವೆಪ್ಪ ಹಾಗೂ ಆತನ ಗೂಂಡಾ ಪಡೆ, ಹೋರಾಟದ ಅಬ್ಬರಕ್ಕೆ ಅವಿತುಕೊಂಡಿತು. ಮರುದಿನವೇ ಪೈಪ್ ಲೈನಿನ ಕನೆಕ್ಷನ್ ತೆಗೆದು ಹಾಕಿ ರಿಪೇರಿ ಮಾಡಿಸಿಕೊಟ್ಟು ಪಿ.ಅಡಿವೆಪ್ಪನನ್ನು ಕಂಡು ಕೆಂಚನಗುಡ್ಡದ ಜನ ಉರಿದವನಿಗೆ ದುರುಗಪ್ಪನ ಹಾವಳಿ ತಪ್ಪಿದ್ದಲ್ಲ ಎಂದು ಮಾತಾಡುತ್ತಾ ನಗ ತೊಡಗಿದರು. ಈ ಹೋರಾಟ ಗೂಂಡಾಗಿರಿಗೆ ತಕ್ಕ ಎದಿರೇಟು ನೀಡಿದೆಯಲ್ಲದೆ ಜನರಲ್ಲಿ ಆತ್ಮವಿಶ್ವಾಸ, ಹೋರಾಟದ ಕೆಚ್ಚನ್ನು ಮೂಡಿಸಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಸಿಪಿಐ(ಎಂ) ನ ಹತ್ತೊಂಭತ್ತನೇ ಮಹಾಧಿವೇಶನ


ನಿಜವಾದ ಪರ್ಯಾಯ ನೀತಿಗಳಿರುವುದು ಎಡಶಕ್ತಿಗಳ ಬಳಿ ಮಾತ್ರ

ಭಾರತದ ಜನಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ಹೊರಿಸಿದ ಸಂಕಟಗಳಿಂದ ಮುಕ್ತಗೊಳಿಸುವ ನಿಜವಾದ ಪರ್ಯಾಯ ಧೋರಣೆ ಇರುವುದು ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳ ಬಳಿ ಮಾತ್ರ. ಇದನ್ನು ಕಳೆದ ಮೂರು ವರ್ಷಗಳ ಬೆಳವಣಿಗೆಗಳು ಮತ್ತು ಸಿಪಿಐ(ಎಂ)ನ ಹತ್ತೊಂಭತ್ತನೇ ಮಹಾಧಿವೇಶನದ ಕಲಾಪಗಳು ಹಾಗೂ ತೀರ್ಮಾನಗಳು ಸ್ಪಷ್ಟವಾಗಿ ತೋರಿಸಿ ಕೊಟ್ಟಿವೆ ಎನ್ನುತ್ತಾರೆ ಈ ಮಹಾಧಿವೇಶನದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಗೆ ಚುನಾಯಿತರಾಗಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾಗಿರುವ ವಿ.ಜೆ.ಕೆ. ನಾಯರ್.

ಏಪ್ರಿಲ್ 3, 2008 ರಂದು ಸಿಪಿಐ(ಎಂ)ನ ಹತ್ತೊಂಬತ್ತನೇ ಮಹಾಧಿವೇಶನ ಮುಕ್ತಾಯಗೊಂಡಿದೆ. ಪಕ್ಷ ಹೊಸ ನೆಲೆಯನ್ನು ಕಂಡುಕೊಳ್ಳುವ ಸಾಮರ್ಥ್ಯ ಹೊಂದಿದೆ, ಭಾರತೀಯ ಸಮಾಜದಲ್ಲಿ ಜನಗಳ ಮಧ್ಯಪ್ರವೇಶಕ್ಕೆ ಮತ್ತು ಬದಲಾವಣೆಗೆ ಫಲವತ್ತಾದ ಮಣ್ಣನ್ನು ಹದಗೊಳಿಸಲು ಸಿದ್ಧವಾಗಿದೆ ಎಂಬುದನ್ನು ಪ್ರದರ್ಶಿಸಿರುವ ಮಹಾಧಿವೇಶನವಿದು.

2005ರಲ್ಲಿ ನವದೆಹಲಿಯಲ್ಲಿ ನಡೆದ ಪಕ್ಷದ ಹಿಂದಿನ ಮಹಾಧಿವೇಶನದ ನಂತರದ ಅವಧಿ ಆ ಮಹಾಧಿವೇಶನದ ತೀರ್ಮಾನಗಳು ಸರಿಯಿದ್ದವೆಂಬುದನ್ನು ತೋರಿಸಿದೆ. ಯುಪಿಎ ಎಂಬ ವ್ಯವಸ್ಥೆಯ ಮೂಲಕ ಸಾಮಾನ್ಯ ಕನಿಷ್ಟ ಕಾರ್ಯಕ್ರಮದೊಂದಿಗೆ ಸರಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಪ್ರಕಾರ ದೇಶದ ಆಡಳಿತ ನಡೆಸಲು ತನಗೆ ಮನಸ್ಸಿಲ್ಲ ಎಂಬುದನ್ನು ಪ್ರದರ್ಶಿಸುತ್ತಿದೆ. ಎನ್‌ಡಿಎ ಆಡಳಿತಕ್ಕೆ ಜನಗಳ ವಿರೋಧದಿಂದಾಗಿ 2004ರ ಸಂಸದೀಯ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಅದರ ಜತೆಗಾರರು ಜನಾದೇಶ ಪಡೆದರು, ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಎಡಪಕ್ಷಗಳ ಬೆಂಬಲದಿಂದಾಗಿ ಅವರು ಈ ಸ್ಥಾನಮಾನ ಪಡೆದರು.





ಹುತಾತ್ಮ ಸಂಗಾತಿಗಳಿಗೆ ವಂದನೆ

ಅದೇ ಭಾವ


ಆಗ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಭಾರತ ಪ್ರಕಾಶಿಸುತ್ತಿದೆ ಎಂದು ಹೇಳಿಕೊಂಡರೂ ಜನಗಳ ಅಭಿಮತ ಮಾತ್ರ ಬೇರೆಯೇ ಆಗಿತ್ತು. ಆದ್ದರಿಂದ ಅವರು ಎನ್‌ಡಿಎ ಯನ್ನು ಅಧಿಕಾರದಿಂದ ಕೆಳಗಿಳಿಸಿದರು. ಈಗ ಕಾಂಗ್ರೆಸ್ ಕೂಡಾ ಅಮೆರಿಕನ್ ಸಾಮ್ರಾಜ್ಯಶಾಹಿ ಬಣದ ಆದೇಶದಂತೆ ಬೇರೊಂದು ರೀತಿಯಲ್ಲಿ, ತಾವು 9ಶೇ. ಬೆಳವಣಿಗೆ ಸಾಧಿಸಿದ್ದೇವೆ, ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ ಸಾಧಿಸಿದ್ದೇವೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಬಹುಪಾಲು ಜನತೆ ಈಗಲೂ ಶೋಚನೀಯ ಪರಿಸ್ಥಿತಿಗಳಲ್ಲಿ ಬದುಕು ಸಾಗಿಸುತ್ತಿದ್ದಾರೆ. ಸರಕಾರವೇ ನೇಮಿಸಿದ ಡಾ. ಅರ್ಜುನ್ ಸೆನ್‌ಗುಪ್ತಾ ನೇತೃತ್ವದ ಸಮಿತಿಯ ವರದಿಯ ಪ್ರಕಾರ 70ಶೇ. ಜನ ದಿನಕ್ಕೆ 20 ರೂಪಾಯಿಗಿಂತಲೂ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. ಬೆಳವಣಿಗೆ ಆಗಿರುವುದು ಶತಕೋಟ್ಯಾಧಿಪತಿಗಳ ಸಂಖ್ಯೆಯಲ್ಲಿ ಮತ್ತು ಬಡತನದ ಮಟ್ಟಗಳಲ್ಲಿ ಮಾತ್ರ.. ಇದಕ್ಕೆಲ್ಲಾ ಮುಕುಟವಿಟ್ಟಂತೆ 123 ಒಪ್ಪಂದಕ್ಕೆ ಸಹಿ ಹಾಕಿ ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ

ಸಮ್ಮೇಳನದ ವೇದಿಕೆಯಲ್ಲಿ ಮುಖಂಡರು



ಗಿರಾಕಿ ದೇಶವಾಗಿ ಪರಿವರ್ತಿಸುವ ಪ್ರಯತ್ನ ನಡೆದಿದೆ. ಸಿಪಿಐ(ಎಂ) ಮಧ್ಯಪ್ರವೇಶ ವಿಲ್ಲದಿದ್ದರೆ, ಈಗಾಗಲೇ ಭಾರತವನ್ನು ಅಮೆರಿಕನ್ ಸಾಮರಿಕ ಹಿತಗಳನ್ನು ಈಡೇರಿಸಿಕೊಳ್ಳುವಲ್ಲಿ, ಜಗತ್ತಲ್ಲೆಲ್ಲಾ ಅದರ ಸ್ವಪ್ರತಿಷ್ಠೆ ಹೆಚ್ಚಿಸಿಕೊಳ್ಳುವಲ್ಲಿ, ಜನಗಳ ಸಂಹಾರದಲ್ಲಿ ಭಾಗೀದಾರ ನಾಗಿಸಲಾಗುತ್ತಿತ್ತು. ಪರಮಾಣು ಒಪ್ಪಂದ ಕಾರ್ಯಗತಗೊಳಿಸದಂತೆ ತಡೆಯಲು ಸಿಪಿಐ(ಎಂ)ಗೆ ಸಾಧ್ಯವಾಗಿದೆ.

ಜನಗಳ ಆರ್ಥಿಕ ಸಂಕಟಗಳು ಜೀವನಾವಶ್ಯಕ ವಸ್ತುಗಳ ಏರುತ್ತಿರುವ ಬೆಲೆಗಳಿಂದಾಗಿ ಇನ್ನಷ್ಟು ಹೆಚ್ಚಿವೆ. ಈ ವಿದ್ಯಮಾನ ಎನ್‌ಡಿಎ ಆಳ್ವಿಕೆಯ ಕಾಲದಲ್ಲೂ ನಿಂತಿರಲಿಲ್ಲ. ಮೂಲತಃ ಕಾಂಗೆಸ್ ಪಕ್ಷ 1991ರಲ್ಲಿ ಆರಂಭಿಸಿದ , ನಂತರ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಮುಂದೊಯ್ದ ಧೋರಣೆ ಈಗ ಹಣ್ಣಾಗಿ ಜನಗಳನ್ನು ಇಷ್ಟೊಂದು ಬಾಧಿಸುತ್ತಿದೆ. ಕೃಷಿ ಬಿಕ್ಕಟ್ಟು ಎಷ್ಟು ಆಳವಾಗಿದೆಯೆಂದರೆ ಇದುವರೆಗೆ 1,60,000 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ವಿದೇಶಿಪ್ರತಿನಿಧಿ - ಮಹಾಧಿವೇಶನದಲ್ಲಿ

ಯುಪಿಎ ಮತ್ತು ಎಡಪಕ್ಷಗಳು ಮುಂದಿಟ್ಟ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಜ್ಯಾರಿಗೊಳಿಸಲು ನಿರಾಕರಿಸುತ್ತಾ ಕಾಂಗ್ರೆಸ್ ಪಕ್ಷ ಎನ್‌ಡಿಎ ಆಳ್ವಿಕೆಯಿಂದಾಗಿ ಸಂಕಟಪಟ್ಟ ಜನಗಳ ಸಹಾನುಭೂತಿಯನ್ನು ಕಳಕೊಳ್ಳುತ್ತಿದೆ. ಪರ್ಯಾಯ ಕಣ್ಣೋಟವೇನೂ ಇಲ್ಲದ ಎನ್‌ಡಿಎಗೆ ಮತ್ತೆ ಅಧಿಕಾರಕ್ಕೆ ಮರಳುವ ಆಸೆ ಗರಿಗೆದರಿದೆ.

ಎಡ ಸರಕಾರಗಳ ಅನುಭವ

ಆದರೆ ಭಾರತದ ಜನಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ಹೊರಿಸಿದ ಸಂಕಟಗಳಿಂದ ಮುಕ್ತಗೊಳಿಸುವ ನಿಜವಾದ ಪರ್ಯಾಯ ಧೋರಣೆ ಇರುವುದು ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳ ಬಳಿ ಮಾತ್ರ. ಇದನ್ನು ಕಳೆದ ಮೂರು ವರ್ಷಗಳ ಬೆಳವಣಿಗೆಗಳು ಮತ್ತು ಸಿಪಿಐ(ಎಂ)ನ ಹತ್ತೊಂಭತ್ತನೇ ಮಹಾಧಿವೇಶನದ ಕಲಾಪಗಳು ಹಾಗೂ ತೀರ್ಮಾನಗಳು ಸ್ಪಷ್ಟವಾಗಿ ತೋರಿಸಿ ಕೊಟ್ಟಿವೆ. ನಿಜ, ಬಿಜೆಪಿ ಅದರ ಕೋಮುವಾದಿ. ನೀತಿಗಳಿಂದಾಗಿ, ಅಲ್ಪಸಂಖ್ಯಾತರು, ದಲಿತರು ಮುಂತಾದವರ ಬಗ್ಗೆ ಹೊಂದಿರುವ ವೈಷಮ್ಯದಿಂದಾಗಿ ಹೆಚ್ಚು ಅಪಾಯಕಾರಿ. ಸರಿಯಾದ ಪರ್ಯಾಯ ನೀತಿಗಳನ್ನು ಅನುಸರಿಸುವಲ್ಲಿ, ಜನಗಳ ಒಗ್ಗಟ್ಟನ್ನು ಕಾಪಾಡಿಕೊಳ್ಳುವಲ್ಲಿ ಮತ್ತು ಅವರು ಕೋಮುವಾದೀ ದುಷ್ಟ ಶಕ್ತಿಗಳಿಗೆ ಬಲಿಯಾಗದಂತೆ ತಡೆಯುವಲ್ಲಿ, ಪಶ್ಚಿಮ ಬಂಗಾಳ , ಕೇರಳ ಮತ್ತು ತ್ರಿಪುರಾದ ಎಡ ನೇತೃತ್ವದ ಸರಕಾರಗಳು ತಮ್ಮ ಸಾಮರ್ಥ್ಯವನ್ನು ತೋರಿಸಿ ಕೊಟ್ಟಿವೆ. ಈ ಬಾರಿ ಎಡ ನೇತೃತ್ವದ ಸರಕಾರಗಳ ಅನುಭವವನ್ನು ಒಂದು ರಾಷ್ಟ್ರೀಯ ಅಜೆಂಡಾವಾಗಿ ಎತ್ತುವಲ್ಲಿ ಹತ್ತೊಂಭತ್ತನೇ ಮಹಾಧಿವೇಶನ ಯಶಸ್ವಿಯಾಗಿದೆ.

ಸಿಪಿಐ(ಎಂ)ನ ಹತ್ತೊಂಭತ್ತನೇ ಮಹಾಧಿವೇಶನ ಚಾರಿತ್ರಿಕವಾಗಿ ಕಾರ್ಮಿಕ ವರ್ಗದ ನಗರವೆನಿಸಿಕೊಂಡ ಕೊಯಮತ್ತೂರಿನಲ್ಲಿ ನಡೆದಿದೆ. ಜನಗಳನ್ನು ಅಣಿನೆರೆಸುವಲ್ಲಿ ಅದು ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿದೆ. ತಮಿಳುನಾಡು ಮತ್ತು ಸುತ್ತಮುತ್ತಲ ಪ್ರದೇಶಗಳ ಜನತೆ ಸಿಪಿಐ(ಎಂ) ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಂಬಲಿಸುತ್ತಿದೆ ಎಂಬುದನ್ನು ಇದು ತೋರಿಸುತ್ತದೆ. ಕೊಯಮತ್ತೂರಿನ ವಿಒಸಿ ಪಾರ್ಕಿನಲ್ಲಿ ನಡೆದ ರ್‍ಯಾಲಿಯಲ್ಲಿ ಭಾಗವಹಿಸಿದ ಲಕ್ಷೋಪಲಕ್ಷ ಜನಗಳು ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ ಮತ್ತು ಪಕ್ಷದ ತಮಿಳುನಾಡು ಮುಖಂಡರ ಭಾಷಣಗಳಿಗೆ ಭಾರೀ ಸ್ಪಂದನ ತೋರಿಸಿದರಲ್ಲದೆ, ಎಡ ನೇತೃತ್ವದ ಸರಕಾರಗಳ ಮೂರು ಮುಖ್ಯಮಂತ್ರಿಗಳ ಮಾತುಗಳನ್ನು ಕೂಡಾ ತದೇಕ ಚಿತ್ತದಿಂದ ಆಲಿಸಿದರು.

ಸಿಪಿಐ(ಎಂ)ನ ಹತ್ತೊಂಭತ್ತನೇ ಮಹಾಧಿವೇಶನದ ಕಲಾಪಗಳ ಮತ್ತು ತೀರ್ಮಾನಗಳ ಮುಖ್ಯ ಅಂಶಗಳನ್ನು ನಿಮಗೆ ವಿವರಿಸಬೇಕು. ಅದಕ್ಕಾಗಿ ನಾವು ವಿಶೇಷ ಪ್ರಯತ್ನಗಳನ್ನು ಮಾಡುತ್ತೇವೆ. ○

ಹುತಾತ್ಮ ಜ್ಯೋತಿಗೆ ಸ್ವಾಗತ



ಸಿಪಿಐ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ.ಎ.ಬಿ. ಬರ್ಧನ್ ಅಧಿವೇಶನದಲ್ಲಿ



ಮಾಂಸಾಹಾರದಂತಹ ಬಹುಸಂಖ್ಯೆಯ ಜನರ ಆಹಾರದ ಹಕ್ಕಿನ ಮೇಲೆ ಸಂಘ ಪರಿವಾರ ಸತತವಾಗಿ ಧಾಳಿ ನಡೆಸಿದೆ. ಆಧುನಿಕ ಕಸಾಯಿಖಾನೆ ಆರಂಭಗೊಳ್ಳದಂತೆ ಹಲವು ತಂತ್ರಗಳನ್ನು ಹೆಣೆದು, ಹಲವಾರು ಅನಧಿಕೃತ ಕಸಾಯಿಖಾನೆಗಳ ಸೃಷ್ಟಿಗೆ ಕುಮ್ಮಕ್ಕು ನೀಡುತ್ತಿದೆ. ಕರಾವಳಿಯನ್ನು ರಣರಂಗವಾಗಿಸಲಿದೆ! ಇದಕ್ಕೆ ಆಡಳಿತದ ಕ್ರಮಗಳೇನು? ಹೊಣೆಗಾರಿಕೆಯೇನು?



ಕುದ್ರೋಳಿ ಕಸಾಯಿಖಾನೆ ವಿವಾದ
ಆಹಾರದ ಹಕ್ಕಿನ ಮೇಲೆ ಧಾಳಿ

ಮುನೀರ್ ಕಾಟಿಪಳ್ಳ


ಸಂಘ ಪರಿವಾರದ ಮುಂಗಾಟ ಗಳಿಂದಾಗಿ ಸದಾ ವಿವಾದಕ್ಕೆ ಗುರಿಯಾಗಿ ಸುದ್ದಿಯಲ್ಲಿರುವ ಕುದ್ರೋಳಿಯ ಕಸಾಯಿಖಾನೆ ಮತ್ತೆ ಸುದ್ದಿಯಲ್ಲಿದೆ. ಕರಾವಳಿಯಲ್ಲಿ ಸಂಘ ಪರಿವಾರ ಜನರನ್ನು ಧರ್ಮದ ಆಧಾರದಲ್ಲಿ ವಿಭಜಿಸಲು, ಮುಸ್ಲಿಂರ ವಿರುದ್ಧ ಹಿಂದೂಗಳನ್ನು ಎತ್ತಿ ಕಟ್ಟಲು, ದಿನ ನಿತ್ಯ ಕೋಮು ಕದನಗಳನ್ನು ಹುಟ್ಟು ಹಾಕಲು, ಆ ಮೂಲಕ ತನ್ನ 'ಪ್ರಯೋಗಶಾಲೆ'ಯಲ್ಲಿ ರಾಜಕೀಯವಾಗಿ ಭದ್ರವಾಗಲು ಬಳಸಿಕೊಂಡ ಮುಖ್ಯ ವಿಷಯಗಳಲ್ಲಿ ಒಂದು ಹುಡುಗಿಯರ ಚುಡಾವಣೆಯಾದರೆ ಮತ್ತೊಂದು ಗೋಸಾಗಾಟ, ಗೋಮಾಂಸ ಮಾರಾಟ, ಅದರಲ್ಲೂ ಮುಖ್ಯವಾಗಿ ಸಂಘ ಪರಿವಾರ ದನ ಸಾಗಾಟ ವಿಷಯದಲ್ಲಂತೂ ಗೋಮಾಂಸದ ರುಚಿ ಹತ್ತಿದ ಹುಲಿಯಂತೆ ವರ್ತಿಸಿದೆ. ತನ್ನ ಗೂಂಡಾ ಪಡೆಯಾದ ಭಜರಂಗದಳದ ಮೂಲಕ ಹಿಂದುಳಿದ ಜಾತಿಗೆ ಸೇರಿದ ಯುವಕರನ್ನು ದನದ ವ್ಯಾಪಾರಿಗಳಾದ ಮುಸ್ಲಿಂರ ಮೇಲೆ ಛೂ ಬಿಟ್ಟು ಜಿಲ್ಲೆಯಲ್ಲಿ ಅರಾಜಕತೆಯನ್ನೇ ಸೃಷ್ಟಿಸಿದೆ. ಜನರ ಮುಗ್ಧ ನಂಬಿಕೆಗಳನ್ನು ಕೆರಳಿಸಿ ಅವರ ಭಾವನೆಗಳೊಂದಿಗೆ ಚೆಲ್ಲಾಟವಾಡಿ ಅಪರಿಮಿತ ರಾಜಕೀಯಲಾಭವನ್ನು ಗಳಿಸಿದೆ. ಈಗ ಕರಾವಳಿಯಲ್ಲಿ ಸಿಕ್ಕಿದ ಯಶಸ್ಸಿನಿಂದ ಸ್ಫೂರ್ತಿಗೊಂಡು ದನ ಸಾಗಾಟಗಾರರ ಮೇಲಿನ ದಾಳಿಗಳ ಪ್ರಯೋಗವನ್ನು ರಾಜ್ಯದ ಇತರ ಜಿಲ್ಲೆಗಳಲ್ಲೂ ನಡೆಸತೊಡಗಿದೆ.



ಭಜರಂಗಿ ನಾಯಕರ ಪುಂಡಾಟ

ಬಜರಂಗದಳದ ಅಟ್ಟಹಾಸ

ಹೀಗೆ ಸಂಘ ಪರಿವಾರವು ಮುಸ್ಲಿಂರನ್ನು ರಾಕ್ಷಸರನ್ನಾಗಿ ಚಿತ್ರಿಸಲು ಬಳಸಿಕೊಂಡ ಗೋಹತ್ಯೆ ಅರ್ಥಾತ್ ಜಾನುವಾರು ವಧೆ ನಡೆಯುವ ನಗರಪಾಲಿಕೆ ಆಡಳಿತಕ್ಕೆ ಒಳಪಟ್ಟ ಕುದ್ರೋಳಿಯ ಕಸಾಯಿಖಾನೆ ಮತ್ತೆ ವಿವಾದದ ಸುಳಿಗೆ ಸಿಲುಕಿಕೊಂಡಿದೆ. ಎರಡು ವರ್ಷಗಳ ಹಿಂದೆ ಸಂಘ ಪರಿವಾರದ ಗೋಪ್ರೇಮ ಉತ್ತುಂಗದಲ್ಲಿದ್ದಾಗ ಇದೆ ಕಸಾಯಿಖಾನೆ ಜಿಲ್ಲೆಯ ಜನರನ್ನು ತುದಿಗಾಲಲ್ಲಿ ನಿಲ್ಲಿಸಿತ್ತು. ಹಳ್ಳಿಗಳಲ್ಲಿ ರೈತರಿಗೆ ದುಡ್ಡು ಕೊಟ್ಟು ನಿರುಪಯುಕ್ತ ಜಾನುವಾರುಗಳನ್ನು ವಾಹನಗಳ ಮೂಲಕ ಸಾಗಾಟ ಮಾಡುವ ಜಾನುವಾರು ವ್ಯಾಪಾರಿಗಳನ್ನು ಸರಿರಾತ್ರಿಯಲ್ಲಿ ಮಾರ್ಗ ಮಧ್ಯದಲ್ಲಿ ತಡೆಗಟ್ಟುತ್ತಿದ್ದ ಭಜರಂಗಿಗಳು ಸಾರ್ವಜನಿಕವಾಗಿ ವ್ಯಾಪಾರಿಗಳಿಗೆ ಹಲ್ಲೆ ನಡೆಸುವುದು ಮಾತ್ರವಲ್ಲದೆ ಅವರಲ್ಲಿರುವ ದುಡ್ಡು, ಮೊಬೈಲ್ ಮುಂತಾದ ಬೆಲೆ ಬಾಳುವ ವಸ್ತುಗಳನ್ನು ದೋಚುತ್ತಿದ್ದರು. ಇಷ್ಟು ಮಾತ್ರವಲ್ಲದೆ ಮುಸ್ಲಿಮರಾದ ಈ ವ್ಯಾಪಾರಿಗಳನ್ನು ಸಾರ್ವಜನಿಕ ಮೆರವಣಿಗೆ ನಡೆಸಿ ಪೋಲೀಸರಿಗೆ ಒಪ್ಪಿಸಿ ತಾವು ಧರ್ಮ ರಕ್ಷಕರ ಗೆಟಪ್‌ನಲ್ಲಿ ಹೀರೋಗಳ ರೀತಿ ಮಿಂಚುತ್ತಿದ್ದರು. ವ್ಯಾಪಾರಿಗಳು ತಾವು ಮಾಡದ ತಪ್ಪಿಗೆ ಭಜರಂಗಿಗಳ ಕೈಯಲ್ಲಿ ಏಟು ತಿಂದು, ಜಾನುವಾರು, ನಗದು, ಮೊಬೈಲ್ ಕಳಕೊಳ್ಳುವುದು ಮಾತ್ರವಲ್ಲದೆ ಅಕ್ರಮ ಸಾಗಾಟದ ಕೇಸು ಹಾಕಿಸಿಕೊಂಡು ಜೈಲು ಪಾಲಾಗುತ್ತಿದ್ದರು. ಸಾರ್ವಜನಿಕವಾಗಿ ಹಲ್ಲೆ, ದರೋಡೆ ಮಾಡುತ್ತಿದ್ದ ಭಜರಂಗಿಗಳ ಜೊತೆಗೆ ಪೋಲಿಸರು ಮೃದುವಾಗಿ ವರ್ತಿಸಿ ಅವರಿಗೆ ಇನ್ನಷ್ಟು ಹುರುಪು ತುಂಬುತ್ತಿದ್ದರು.



ಆದಿ ಉಡುಪಿಯಲ್ಲಿ ಅಲ್ಪಸಂಖ್ಯಾತರ ಮೇಲೆ ಹಿನಾಯ ಧಾಳಿ

ಷಡ್ಯಂತ್ರಗಳು

ಈ ಯಶಸ್ಸಿನಿಂದ ರೋಮಾಂಚಿತರಾಗಿದ್ದ ಭಜರಂಗದಳ ಅದೇ ಹುರುಪಿನಲ್ಲಿ ನಗರಪಾಲಿಕೆಯ ಏಲಂನಲ್ಲಿ ಭಾಗವಹಿಸಿ ಎರಡು ವರ್ಷದ ಹಿಂದೆ ಕಸಾಯಿಖಾನೆಯ ಗುತ್ತಿಗೆಯನ್ನು ತಾವೆ ಪಡೆದುಕೊಂಡರು. ಸಂಘ ಪರಿವಾರಕ್ಕೆ ಬಲವಾದ ಪೆಟ್ಟು ಬಿದ್ದದ್ದೇ ಅವಾಗ. ಯಾವುದೇ ಲೆಕ್ಕಾಚಾರದಲ್ಲಿ ಕಸಾಯಿಖಾನೆ ಯನ್ನು ತಾವೇ ವಹಿಸಿಕೊಂಡು ದನದ ಮಾಂಸದ ವ್ಯಾಪಾರವನ್ನು ಸಂಪೂರ್ಣವಾಗಿ ನಿಲ್ಲಿಸಲು ಸಂಚು ಹೆಣೆದಿದ್ದ ಸಂಘ ಪರಿವಾರಕ್ಕೆ ಎಡ ಮತ್ತು ಪ್ರಗತಿ ಪರ ಸಂಘಟನೆಗಳು ಹಾಗೂ ಮಾಂಸ ವ್ಯಾಪಾರಸ್ಥರು ಸರಿಯಾದ ಏಟನ್ನೇ ನೀಡಿದರು.

ಕಸಾಯಿಖಾನೆಯಲ್ಲಿ ಸರಿಯಾದ ಮೂಲಭೂತ ಸೌಲಭ್ಯಗಳಿಲ್ಲ, ಪಶುವೈದ್ಯರು ಲಭ್ಯವಿಲ್ಲ ಎಂಬ ಕಾರಣಗಳನ್ನು ಒಡ್ಡಿ ಜಾನುವಾರುಗಳನ್ನು ವಧಿಸುವ ಕೆಲಸಕ್ಕೆ ತಡೆಯೊಡ್ಡಿದಾಗ ಮಾಂಸ ವ್ಯಾಪಾರಸ್ಥರು ಆ ಕೊರತೆಗಳಿಗೆ ನಗರ ಪಾಲಿಕೆಯೇ ಕಾರಣ. ನಗರ ಪಾಲಿಕೆ ಮೂಲಭೂತ ವ್ಯವಸ್ಥೆಯನ್ನು ಮಾಡಬೇಕು ಎಂದು ಪ್ರತಿಭಟನೆಗಿಳಿದಾಗ ಅಷ್ಟರವರೆಗೆ ಕಸಾಯಿಖಾನೆಗೆ ಯಾವುದೇ ಸೌಲಭ್ಯವನ್ನು ಒದಗಿಸದೇ ಸುಮ್ಮನಿದ್ದ ನಗರಪಾಲಿಕೆ ಪಶುವೈದ್ಯ ಮತ್ತು ಇತರ ಸೌಲಭ್ಯವನ್ನು ತಕ್ಷಣ ಒದಗಿಸಿದಾಗ ಭಜರಂಗಿ ಪಡೆ ಕಂಗಾಲಾಗಿತ್ತು. ಇನ್ನು ಕಸಾಯಿಖಾನೆಯಲ್ಲಿ ಗುತ್ತಿಗೆ ವಹಿಸಿಕೊಂಡ ಭಜರಂಗಿಗಳ ಕೈಯಿಂದಲೇ ಗೋವಧೆ (ಜಾನುವಾರು) ನಡೆಯುತ್ತದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿತ್ತು. ಜನಸಾಮಾನ್ಯರು, ಸಂಘಟನೆಗಳು, ಮಾಧ್ಯಮಗಳು ಗೋಹತ್ಯೆಯ ನೆಪದಲ್ಲಿ ಹಾದಿರಂಪ ಬೀದಿರಂಪ ಮಾಡುತ್ತಿದ್ದ ಭಜರಂಗೀಗಳೇ ಕಸಾಯಿಖಾನೆಯನ್ನು ವಹಿಸಿಕೊಂಡು ಗೋಹತ್ಯೆ ನಡೆಸುವುದನ್ನು ಪ್ರಶ್ನಿಸ ತೊಡಗಿದಾಗ ಇಕ್ಕಟ್ಟಿಗೆ ಸಿಲುಕಿದ ಭಜರಂಗಿಪಡೆ ಕಸಾಯಿಖಾನೆಯತ್ತ ಸುಳಿಯದೆ ತಲೆ ತಪ್ಪಿಸಿಕೊಂಡಿತು. ಹಾಗೂ ಗುತ್ತಿಗೆ ನಿಯಮ ಪಾಲಿಸದೆ ಗುತ್ತಿಗೆಯನ್ನು ಕಳಕೊಂಡಿತು. ಹೀಗೆ ಬಹಿರಂಗವಾಗಿ ಮುಖಭಂಗಕ್ಕೊಳಗಾದ ಸಂಘ ಪರಿವಾರ ಕಳೆದುಹೋದ ಮಾನವನ್ನು ಪುನಃಗಳಿಸಿಕೊಳ್ಳಲು ಕಸಾಯಿಖಾನೆಯಿಂದ ಪರಿಸರ ಮಾಲಿನ್ಯವಾಗುತ್ತಿದೆ ಎಂದು ಬೊಬ್ಬೆ ಹೊಡೆಯತೊಡಗಿತು. ನಗರಪಾಲಿಕೆಗೆ ಬೇಜವಾಬ್ದಾರಿತನದಿಂದ ಕೆಟ್ಟು ಹೋಗಿದ್ದ ಕಸಾಯಿಖಾನೆಯ ಪರಿಸರವನ್ನು ಪರಿಸರ ಮಾಲಿನ್ಯ ಇಲಾಖೆಗೆ ತೋರಿಸಿ ನ್ಯಾಯಾಲಯ ಮತ್ತು ಆಗ ತಮ್ಮದೇ ಪಕ್ಷ ಆಡಳಿತದ ಭಾಗವಾಗಿದ್ದುದರಿಂದ ದೊರಕಿದ ಅಧಿಕಾರವನ್ನು ಬಳಸಿ ಪರಿಸರ ನಿಯಂತ್ರಣ ಮಂಡಳಿಯ ಮೂಲಕ ಕಸಾಯಿಖಾನೆಯನ್ನು ಮುಚ್ಚಿಸಿ ಬಿಟ್ಟಿತು.

ಇದರಿಂದಾಗಿ ಇಡೀ ಮಂಗಳೂರಿಗೆ ಮಾಂಸ ಪೂರೈಸುತ್ತಿದ್ದ ಕಸಾಯಿಖಾನೆ ಮುಚ್ಚಿದ್ದರಿಂದಾಗಿ ಮಂಗಳೂರಿನಲ್ಲಿ ಮಾಂಸಾಹಾರಿಗಳಿಗೆ ಮಾಂಸವೇ ದೊರೆಯದ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಂಘ ಪರಿವಾರದ ಸುಳ್ಳು ಪ್ರಚಾರಗಳಿಂದ ಕಸಾಯಿಖಾನೆಯೆಂದರೆ ಅಲ್ಲಿ ಬರೀ ದನದ ಮಾಂಸ

ಪುಟ 11ಕ್ಕೆ

ಏನೇನೋ ತಂತ್ರ, ಕುತಂತ್ರಗಳು

ಕಸಾಯಿಖಾನೆಯ ಗುತ್ತಿಗೆ ನವೀಕರಿಸಲು ನಿರಾಕರಣೆ ನಗರ ಪಾಲಿಕೆಯ ಕಛೇರಿಯೊಳಗೆ ಧರಣ, ಅಫಿದಾವಿತ್ ನೀಡಲಾಗುವುದಿಲ್ಲ ಎಂಬ ಹೇಳಿಕೆ ಅನಂತರ ಪ್ರತಿಭಟನೆಗೆ ಮಣಿದು ಗುತ್ತಿಗೆ ನವೀಕರಣ, 36 ತಿಂಗಳ ಕಾಲಾವಕಾಶ ಕೋರಿಕೆಯ ಅಫಿದಾವಿತ್ ಸಲ್ಲಿಕೆ ಇಷ್ಟಾಗಿಯೂ ಮೇ 18ರ ನಂತರ ಕಸಾಯಿಖಾನೆ ಶಾಶ್ವತವಾಗಿ ಮುಚ್ಚಲ್ಪಡುತ್ತದೆ ಎಂಬ ಸುದ್ದಿಗಳಿಂದಾಗಿ ಇಂದು ಕರಾವಳಿಯಲ್ಲಿ ಮತ್ತೆ ಕುದ್ರೋಳಿಯ ಕಸಾಯಿಖಾನೆ ದೊಡ್ಡ ಮಟ್ಟದ ಸುದ್ದಿಯಲ್ಲಿದೆ. ಪತ್ರಿಕೆಗಳಲ್ಲಿ ದಿನನಿತ್ಯ ಈ ಬಗ್ಗೆ ವರದಿಗಳು ಪ್ರಕಟವಾಗುತ್ತಿದೆ. ಮಾಂಸ ವ್ಯಾಪಾರಸ್ಥರ ಸಹನೆ, ಪ್ರಜಾಸತ್ತಾತ್ಮಕ, ಪ್ರಗತಿಪರ ಸಂಘಟನೆಗಳ ಮಧ್ಯ ಪ್ರವೇಶದಿಂದಾಗಿ ಕಸಾಯಿಖಾನೆಯ ವಿಷಯ ಈ ಬಾರಿ ಧರ್ಮದ ಚೌಕಟ್ಟಿನಿಂದ ಹೊರ ಬಂದು ಬಹುಸಂಖ್ಯಾತ ಜನರ ಆಹಾರದ ಹಕ್ಕಿನ ಪ್ರಶ್ನೆಯಾಗಿ ಜನರ ಮಧ್ಯೆ ಚರ್ಚಿತವಾಗುತ್ತಿದೆ. ಕಸಾಯಿಖಾನೆ ಮುಚ್ಚಲ್ಪಟ್ಟರೆ ದನದ ಜೊತೆಗೆ ಆಡು, ಕುರಿಗಳ ಮಾಂಸಗಳು ಸಹ ಮಾರುಕಟ್ಟೆಯಲ್ಲಿ ದೊರಕುವುದಿಲ್ಲ, ಇದರಿಂದ ಮಾಂಸಾಹಾರಿಗಳಾದ ಜಿಲ್ಲೆ ಶೇ.95ರಷ್ಟು ಜನ ತಮ್ಮ ಸಹಜ ಆಹಾರ ಪದ್ಧತಿಯಿಂದ ವಂಚಿತರಾಗುವ ಅಪಾಯ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಪರ್ಯಾಯ ವ್ಯವಸ್ಥೆ ಆಗುವವರೆಗೆ ಕುದ್ರೋಳಿ ಕಸಾಯಿಖಾನೆಯನ್ನು ಮುಚ್ಚಬಾರದು ಎನ್ನುವ ಒತ್ತಡ ತೀವ್ರ ವಾಗುತ್ತಿದೆ.

ಮಾಂಸ ವ್ಯಾಪಾರ ನಿಲುಗಡೆಯಾದರೆ ಕರಾವಳಿಯಲ್ಲಿ ಮಾಂಸ ವ್ಯಾಪಾರವನ್ನೇ ಅವಲಂಬಿಸಿರುವ ಹತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳು ಬೀದಿ ಪಾಲಾಗುವ ಭೀತಿಯನ್ನು ಎದುರಿಸುತ್ತಿದೆ. ಅಕ್ರಮ ಮಾಂಸ ಮಾರಾಟಗಳು ನಡೆದು ಅದನ್ನು ತಡೆಗಟ್ಟುವ ನೆಪದಲ್ಲಿ ಕೋಮು ಘರ್ಷಣೆ ತಲೆದೋರಿ ಕಾನೂನು ಸುವ್ಯವಸ್ಥೆ ಹದಗೆಡುವ ಸಾಧ್ಯತೆಗಳಿವೆ. ಈ ಎಲ್ಲಾ ಕಾರಣಗಳಿಂದಾಗಿ ಸರ್ಕಾರ ಕಸಾಯಿಖಾನೆಯ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಕೆಂಪಾದವೋ ಎಲ್ಲ ಕೆಂಪಾದವೋ...

ಕಾರ್ಮಿಕ ಚಳುವಳಿಯ ದೊಡ್ಡ ಇತಿಹಾಸವಿರುವ ತಮಿಳುನಾಡಿನ ಕೊಯಮತ್ತೂರು ನಗರಕ್ಕೆ ನಗರವೇ ಕೆಂಪಾಗಿ ಭಾರತದ ಬದಲಾವಣೆಗಾಗಿ ಪಣತೊಟ್ಟ ಸಿಪಿಐ(ಎಂ) ನ ಮಹಾಧಿವೇಶನದ ದೃಢತೆಗೆ ಸಾಕ್ಷಿಯಾಯಿತು.



ಸಮುದ್ರ ನೀಲಿಯ ಬದಲಾಗಿ ಕೆಂಪಾಗಿತ್ತು. ಆಶ್ಚರ್ಯವಲ್ಲ ಸತ್ಯ. ಕೆಂಪು ಸಮುದ್ರ ಇಡೀ ಕೊಯಮತ್ತೂರು ನಗರವನ್ನು ಆವರಿಸಿತ್ತು. ಅದು ಕೆಂಬಾವುಟಗಳ ಸಮುದ್ರವಾಗಿತ್ತು. ಈ ಕೆಂಬಾವುಟಗಳ ಮೂಲಕವೇ ಇಡೀ ನಗರಕ್ಕೆ ಕೆಂಪು ಕೋಟೆಯನ್ನು ನಿರ್ಮಿಸಿದ್ದರು ದುಡಿವ ಜನ. ದಶ ದಿಕ್ಕುಗಳಿಂದಲೂ ಹರಿದು ಜನಪ್ರವಾಹ ಕೆಂಪು ಸಮುದ್ರದಲ್ಲಿ ಲೀನವಾಗುತ್ತಿತ್ತು. ಪ್ರತಿ ಮನೆಗಳ ಮೇಲಿನ ಕೆಂಬಾವುಟಗಳು ಬೋರ್ಗರೆವ ಜನ ಪ್ರವಾಹಕ್ಕೆ ಉತ್ಸಾಹದ ಚಿಲುಮೆಯನ್ನು ತುಂಬುತ್ತಿದ್ದವು. ಈ ದೃಶ್ಯ ಅನಾವರಣಗೊಂಡಿದ್ದು ಸಿಪಿಐ(ಎಂ) ಪಕ್ಷದ 19ನೇ ಮಹಾಧಿವೇಶನದ ಕೊನೆಯ ದಿನ ಆಯೋಜಿಸಿದ್ದ ಬೃಹತ್ ರ್‍ಯಾಲಿಯಲ್ಲಿ. ಲಕ್ಷಾಂತರ ಸಂಖ್ಯೆಯಲ್ಲಿ ಜಮಾಯಿಸಿದ್ದ ದುಡಿವ ಜನ ಸಿಪಿಐ(ಎಂ) ಮಹಾಧಿವೇಶನವನ್ನು ಸಾಕ್ಷೀಕರಿಸಿದರು.

ಸ್ವಯಂಸೇವಕರಿದ್ದುದು ಇನ್ನಷ್ಟು ಕಳೆ ಕಟ್ಟಿತ್ತು.

ನಾಯಕರ ಜಮಾವಣೆ

3 ಲಕ್ಷ ಜನರ ರ್‍ಯಾಲಿಯ ಈ ದೃಶ್ಯ ವೈಭವವನ್ನು ಸವಿಯಲು ಪಕ್ಷದ ನಾಯಕರಿಗೆ ಕೆಂಪು ವಂದನೆ ಹೇಳುವ ವ್ಯವಸ್ಥೆ ಮಾಡಲಾಗಿತ್ತು. ಪ್ರಕಾಶ್‌ಕಾರಟ್, ಸೀತಾರಾಂ ಯೆಚೂರಿ, ಬಿಮನ್‌ಬಸು, ಬೃಂದಾಕಾರಟ್, ಪಿನರಾಯ್ ವಿಜಯನ್, ಕೋಡಿಯೇರಿ ಬಾಲಕೃಷ್ಣನ್, ರಾಮಚಂದ್ರಪಿಳ್ಳೆ ಹೀಗೆ ರಾಷ್ಟ್ರ ನಾಯಕರು ಈ ರ್‍ಯಾಲಿ ನೋಡಲೆಂದೇ ಎತ್ತರದ ವೇದಿಕೆಯಲ್ಲಿ ನಿಂತು ನೆರೆದಿದ್ದ ಜನರ ಕಡೆ ಕೈ ಬೀಸಿ ಉತ್ಸಾಹ ತುಂಬಲು ಮುಂದಾಗಿದ್ದರು.

ಸಾಂಸ್ಕೃತಿಕ ವೈಭವದ ಅನಾವರಣ

ಮಹಿಳೆಯರ ತಮಟೆಯ ತಂಡ, ಸೇರಿದಂತೆ ತಮಿಳುನಾಡು ಜನರ ಸಾಂಸ್ಕೃತಿಕ ತಂಡಗಳು ನೆರೆದಿದ್ದವರಿಗೆ ಮನರಂಜನೆ ನೀಡುವ ಜೊತೆಗೆ





ಕಟೌಟ್‌ಗಳ ಕಾರುಬಾರು....

ಚೆ, ಫಿಡೆಲ್, ಮಾರ್ಕ್ಸ್, ಏಂಗೆಲ್ಸ್, ಲೆನಿನ್, ಇಎಂಎಸ್, ಜ್ಯೋತಿಬಸು, ಸುರ್ಜಿತ್, ಪ್ರಕಾಶ್‌ಕಾರಟ್, ಸೀತಾರಾಂಯೆಚೂರಿ ಮಹಾನ್ ನಾಯಕರ ಕಟೌಟ್‌ಗಳು ಇಡೀ ನಗರದಲ್ಲಿ ರಾರಾಜಿಸುತ್ತಿದ್ದವು. ಈ ಚಿತ್ರಗಳನ್ನು ಕಣ್ತುಂಬಿಸಿ ನೋಡುತ್ತಿದ್ದವರಲ್ಲಿ ಏನೋ ಆನಂದ, ಕೆಂಪು ತೋರಣ ನಡೆದುದ್ದಕ್ಕೂ ಸಾಗುತ್ತಿತ್ತು.

ಫೋಟೋ ಕ್ಲಿಕ್...!

ಈ ಅಸಾಧಾರಣ ದೃಶ್ಯ ಸೆರಹಿಡಿಯಲು ಸಾವಿರಾರು ಕ್ಯಾಮರಾಗಳು ಎಡೆಬಿಡದೆ ಕ್ಲಿಕ್ಕಿಸುತ್ತಿದ್ದವು. ಫೋಟೋಗ್ರಾಫರ್‌ಗಳು ಜನಸಾಗರವನ್ನು ತಮ್ಮ ಕ್ಯಾಮರಾದಲ್ಲಿ ತುಂಬಿಕೊಳ್ಳಲು ಪರದಾಡುತ್ತಿದ್ದುದು, ಇವರಿಗಾಗಿ ಸಂಗಾತಿಗಳು ನಗುಮೊಗದಿಂದ ಜಾಗ ಮಾಡಿಕೊಡುತ್ತಿದ್ದರು. ನೆರೆದಿದ್ದವರಿಗೆ ಇತಿಹಾಸದ ಗಂಧ ಇದ್ದುದರ ಸಂಕೇತವಾಗಿತ್ತು.

ಕೆಂಪು ಸ್ವಯಂ ಸೇವಕರ ಅಭೂತಪೂರ್ವ ಪೆರೇಡ್

ಇಡೀ ರ್‍ಯಾಲಿಯಲ್ಲಿ ಗಮನಸೆಳೆದದ್ದು ರೆಡ್ ವಾಲೆಂಟೀರ್ಸ್! (ಕೆಂಪು ಸ್ವಯಂ ಸೇವಕರು) ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರು ಅತ್ಯಂತ ಶಿಸ್ತಿನಿಂದ ಸಾಲಾಗಿ ನಿಂತ ದೃಶ್ಯ ಮನಮೋಹಕವಾಗಿತ್ತು. ಕೆಂಪು ಅಂಗಿ, ತಲೆಗೆ ನಕ್ಷತ್ರ ಒಳಗೊಂಡ ಟೋಪಿ, ಖಾಕಿ ಪ್ಯಾಂಟು ಸೈನಿಕರಿಗೂ ಕಡಿಮೆ ಇಲ್ಲದಂತೆ ಶಿಸ್ತಿನಿಂದ ಹೆಜ್ಜೆ ಹಾಕುತ್ತಿತ್ತು ಕೆಂಪು ಸೈನ್ಯ.

ಕಣ್ಮನ ಸೆಳೆದ ಪುಟಾಣಿಗಳು...

ಪುಟಾಣಿ ಕೆಂಪು ದಳ ಮತ್ತೊಂದು ವಿಶೇಷ. ಈ ಪಡೆಯನ್ನು ನೋಡಿದಾಗ ಎರಡೂ ಬದಿಗಳಲ್ಲಿ ನಿಂತ ಸಾವಿರಾರು ಜನರಿಂದ ಚಪ್ಪಾಳೆಯ ಕರತಾಡನ. 10 ವರ್ಷದಿಂದ 40 ವರ್ಷ ವಯೋಮಾನದ ಒಂದೊಂದು ಕೆಂಪು ತುಕಡಿಗಳು ಸಾಲು ಸಾಲು ಹೊರಟಾಗ ನೋಡುವುದೇ ಒಂದು ಭಾಗ್ಯ. ಇಂಥ ಹಲವು ಕೆಂಪು ತುಕಡಿಗಳಿದ್ದ 25 ಸಾವಿರಕ್ಕೂ ಹೆಚ್ಚು ಕೆಂಪು ಸ್ವಯಂಸೇವಕರು ಬ್ಯಾಂಡ್‌ಗೆ ಹೆಜ್ಜೆ ಹಾಕುವ ಮೂಲಕ ವಿಶಿಷ್ಟತೆ ಮೆರೆದಿದ್ದರು. ಇದರಲ್ಲಿ ಕೆಂಪು ಮಹಿಳಾ

'ರ್‍ಯಾಲಿಗೆ ದೃಷ್ಟಿ ಬೊಟ್ಟು'ನಂತಿದ್ದವು. ತಮಿಳುನಾಡಿನ ಸಾಂಪ್ರದಾಯಿಕ ತಮಟೆ ವಾದ್ಯ ಆಕರ್ಷಣೆ ಪಡೆದಿತ್ತು. ಮಾತ್ರವಲ್ಲ ನೆರೆದಿದ್ದವರೂ ತಾಳಕ್ಕೆ ಹೆಜ್ಜೆ ಹಾಕುತ್ತಿದ್ದರು.

ಜಾತ್ರೆಯ ವಾತಾವರಣ

ಕೊಯಮತ್ತೂರಿನ ತುಂಬೆಲ್ಲಾ, ಕೆಂಬಾವುಟ ಹಿಡಿದ, ಕೆಂಪು ಅಂಗಿ - ಟೋಪಿ ಧರಿಸಿದ ಜನರೇ. ಎಲ್ಲಿ ನೋಡಿದರೂ ಜಾತ್ರೆಯ ಸಂಭ್ರಮ. ಎಲ್ಲರ ಮುಖದಲ್ಲಿ ಸಂತೋಷ ಲಕ್ಷಾಂತರ ಸಂಖ್ಯೆಯಲ್ಲಿ ನಗರಕ್ಕೆ ಆಗಮಿಸಿದ್ದ ಸಿಪಿಐ(ಎಂ)ನ ಸದಸ್ಯರು ಹಿತೈಷಿಗಳು ಕೆಂಪು ದಳದ ಮೆರವಣಿಗೆಯನ್ನು ವೀಕ್ಷಿಸಲು ರಸ್ತೆಯ ಎರಡೂ ಬದಿಗಳಲ್ಲಿ ಕಿಕ್ಕಿರಿದು ನಿಂತಿದ್ದರು. ವಾಹನಗಳ ಮೇಲೆ, ಕಟ್ಟಡಗಳ ಮೇಲೆ ಎಲ್ಲಿ ನೋಡಿದರೂ ಕೆಂಬಾವುಟದ ಜನರೇ, ಇವರಿಗೆಲ್ಲರಿಗೂ ಸಿಪಿಐ(ಎಂ)ನ ಅತ್ಯುನ್ನತ ಅಂಗವಾಗಿರುವ ಮಹಾಧಿವೇಶನದ ರ್‍ಯಾಲಿಯಲ್ಲಿ ಭಾಗವಹಿಸಿದ ಅತ್ಯುತ್ಸಾಹ ಹೆಮ್ಮೆ.

ಮಾನವೀಯತೆ ಮೆರೆದ ಕಾರ್ಯಕರ್ತರು

ಲಕ್ಷಾಂತರ ಮಂದಿ ಕಿಕ್ಕಿರಿದು ಸಾಗುತ್ತಿದ್ದ ರಸ್ತೆಯಲ್ಲಿ ರೋಗಿಯೊಬ್ಬರನ್ನು ಹೊತ್ತ ಅಂಬುಲೆನ್ಸ್ ಶಬ್ದ ಮಾಡುತ್ತಾ ಬಂತು ಇದನ್ನು ತಿಳಿದ ಪಕ್ಷದ ಕಾರ್ಯಕರ್ತರು ತಕ್ಷಣ ಆ ಆಂಬುಲೆನ್ಸಿಗೆ ದಾರಿ ಮಾಡಿಕೊಟ್ಟು ಅದನ್ನು ಮುಂದೆ ಕಳುಹಿಸಿ ಮುಗಿಲು ಮುಟ್ಟಿದ ಸಂತೋಷದ ನಡುವೆಯೇ ಮಾನವೀಯತೆಯನ್ನು ಮೆರೆದು ಸಿಪಿಐ(ಎಂ)ನ ನೈಜ ಗುಣವನ್ನು ಪ್ರದರ್ಶಿಸಿದರು.

ನಿಲ್ಲದ ಪ್ರವಾಹ

ಸಾಗರೋಪಾದಿ ಯಲ್ಲಿ ಹರಿದು ಬರುತ್ತಿದ್ದ ಜನ ಬಹಿರಂಗಸಭೆ ನಡೆಯುವ ವಿಓಸಿ ಬೃಹತ್ ಮೈದಾನಕ್ಕೆ ಬರತೊಡಗಿದರು. ಸ್ವಲ್ಪ ಹೊತ್ತಿನಲ್ಲಿ ಮೈದಾನ ಭರ್ತಿಯಾಯಿತು. ನಾಯಕರ ಭಾಷಣಗಳು ಆರಂಭವಾದವು. ಆದರೆ ಜನಸಾಗರ ಮಾತ್ರ ನಿಲ್ಲಲಿಲ್ಲ. ಅದು ರಭಸವಾಗಿ ಹರಿದು ಮೈದಾನದೆಡೆಗೆ ನುಗ್ಗುತ್ತಿತ್ತು ಹೋರಾಟದ ಸಾಗರಕೆ ಸಾವಿರಾರು ನದಿಗಳು ಎಂಬಂತೆ.

■ *ಲಿಂಗರಾಜು,*
ಎಚ್.ಆರ್.ನವೀನ್‌ಕುಮಾರ್









ಕಾಫಿ ಎಸ್ಟೇಟ್ ಮಾಲಿಕರ ಜೋಡಿ ಅವ್ರಿಗೆ ಲಿಂಕ್ ಇರ್ತದ. ಮತ್ತ ಕಮಿಷನ್‌ನೂ. ಎಷ್ಟು ಕೂಲಿಯಾಳುಗಳು ಬೇಕೋ ಅಷ್ಟು ನಮ್ಮ ಹಳ್ಳಿಗಳಿಗೆ ಬಂದು ಕರ್ಕೊಂಡು ಹೋಗ್ತಾರ. ಒಮ್ಮೊಮ್ಮೆ ಲಾರಿ ತುಂಬ್ಕೊಂಡು. ತಕ್ಷಣ ಅಲ್ಲಿಗೆ ಬರೋದಕ ನಮ್ಮ ಹತ್ರ ಹಣ ಇಲ್ಲಾ ಅಂದ್ರ ಅವರೇ ಸಾಲನೂ ಕೊಡ್ತಾರ. ಆಮ್ಯಾಲ ಬಡ್ಡಿ ಸಮೇತ ವಸೂಲು ಮಾಡ್ತಾರ.

ಕಾಡಿದ ಆ ಮಗುವಿನ ಕಣ್ಣು

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕಣವಿ ಹಳ್ಳಿ. ಕೊಂಗನಹೊಸೂರು ಬಂಡ್ರಿ ಥಾಂಡಾ ಮತ್ತು ಎತ್ತರೆತ್ತರಕ್ಕೆ ಘನ ಗಂಭೀರತೆಯಿಂದ ತಲೆಯಿತ್ತಿದ ಬೆಟ್ಟ-ಗುಟ್ಟಗಳ ಪದತಲದಲ್ಲಿ ಸುತ್ತಾಡಿ ಕಡೆಗೂ ಬಂದ ಕಾರಣವ ಪೂರೈಸಿಕೊಂಡು ಕಲ್ಬುರ್ಗಿಯ ಬಸ್ಸು ಹತ್ತಲು ಅಣಿಯಾದೆವು. ಎಸ್‌ಎಫ್‌ಐ-ಡಿವೈಎಫ್‌ಐ ಸಂಗಾತಿಗಳು ಉಗುರಿಗೆಲ್ಲ ಉಲ್ಲಾಸಗೊಂಡಂತೆ ಆ ಭಾಗದ ಜನತೆಯ ಬದುಕ ಗಾಥೆಯನ್ನೇ ಬಿಚ್ಚಿಡುತ್ತಿದ್ದರು. ಜೀವನವಿಡೀ ಕಷ್ಟಗಳನ್ನು ಬೆನ್ನಿಗೆ ಕಟ್ಟಿಕೊಂಡೇ ಸಾಗುತ್ತಿರುವ ನೂರಾರು ಕೂಲಿಕಾರ್ಮಿಕರಿಗಾಗಿಯಾದರೂ REGA ದಡಿ ಕೆಲಸ ಕೊಡಿಸಲು ಸಾಧ್ಯವಾಗಿದ್ದು ಖಂಡಿತ ಅವರಿಗೆ ಖುಷಿ ತಂದಿತ್ತು. ಅದೂ ಒಂದೆರೆಡು ದಿನಗಳ ಪ್ರಯತ್ನದಲ್ಲಿ.

ಬಡತನದ ಕೊಂಡಿ

ಹರಪನಹಳ್ಳಿ ತಾಲ್ಲೂಕಿನ ಗ್ರಾಮೀಣ ಜನತೆ ಈಚೆಗಿನ ದಿನಗಳಲ್ಲಿ ದುಡಿದುಣ್ಣಲು ಕಾರ್ಯ ಹುಡುಕಿ ಹೋಗುವುದು ಪ್ರಮುಖವಾಗಿ ಎರಡು ಸ್ಥಳಗಳಿಗೆ. ಒಂದು ಕಾಫಿ ಸೀಮೆಗೆ. ಅಂದರೆ ಚಿಕ್ಕಮಗಳೂರಿಗೆ. ಇನ್ನೊಂದು ಸೊಂಡೂರಿನ ಗಣಿ ಕೆಲಸಕ್ಕೆ. ಹೀಗೆ ಆರೇಳು ತಿಂಗಳುಗಟ್ಟಲೆ ವಲಸೆ ಹೋದವರು ಇಂದಿಗೂ ಬಡತನವೆಂಬ ಸರಪಳಿಯ ಒಂದೇ ಒಂದು ಕೊಂಡಿಯಿಂದ ಕಳಚಿಕೊಳ್ಳಲಾಗಿಲ್ಲ. ಬದಲಿಗೆ ಹೊಸ ಹೊಸ ಸಂಕಟಗಳಿಗೆ ಮತ್ತೆ ಮತ್ತೆ ತತ್ತರಿಸಿದ್ದಾರೆ.

ಬಸ್ಸು ಬರಲು ತಡವೇ ಇತ್ತು. ಸರ್ವಾಂಗವೂ ಸುಂದರವಾಗಿಸಿಕೊಂಡ ಮೋಹಕ ಉಡುಪುಧಾರಿ ಲಂಬಾಣಿ ಹೆಂಗಸೊಬ್ಬಳು ಎಳೆ ಮಗುವನ್ನು ಮಗ್ಗುಲಲ್ಲಿ ಬಿಗಿದಪ್ಪಿ ಬರುತ್ತಿದ್ದಳು. ಪಕ್ಕದಲ್ಲಿ ಯುವಕ. ಆಕೆಯ ಗಂಡ. ಗಗ್ಗರಿಗೆ ತರಹೇವಾರಿ ರಂಗುರಂಗಿನ ಚಿಕಳಿಗಳು. ಬೊಟ್ಟಷ್ಟು ಕನ್ನಡಿಗಳು. ಕವಡಿಗಳ ತೋರಣ. ತಲೆಯಿಂದ ಹೊದ್ದ ದುಪ್ಪಟ್ಟಾಕ್ಕಂತು ಅಂಗೈಯಗಲ ಕನ್ನಡಿಗಳು ಅಂಚಿನಗಲದಲ್ಲಿ ಹೊಳೆಯುತ್ತಿದ್ದವು. ಸೊಂಟದಿಂದ ಇಳಿಬಿದ್ದ ಎರಡೆಳೆ ಕವಡಿಯ ಸಾಲುಗಳು. ನಾನು ಅವಳನ್ನು ಮಾತಾಡಿಸಿದೆ. "ಎಲ್ಲಿಗೆ ಹೊಂಟ್ರೀ...?" ಆ ಹೆಂಗಸು ತುಸು ನಕ್ಕು ಉಲ್ಲಾಸದಿಂದ 'ಜಾತ್ರಿಗೆ' ಅಂದಳು. ಅದು-ಇದು ಮಾತನಾಡಿದೆವು. ಅವರಿಗೆ ಒಂದು ಎಕ್ರೆ ಭೂಮಿ, ನಾಲ್ಕು ಜನ ಅಣ್ಣ-ತಮ್ಮಂದಿರು. ಹಿರಿಯರಂತೆ ಇವರೂ ಕಾಫಿ ಸೀಮೆಗೆ ದುಡಿಯಲು ಹೋಗಿ ಬರುತ್ತಾರೆ. ಹಾಗೆ ಅಲ್ಲಿಗೆ ಹೋದಾಗ ನಮ್ಮ ನಂಬುಗೆಯ ದೇವರನ್ನು ಅಲ್ಲಿ ಸ್ಥಾಪಿಸಿ ಜಾತ್ರೆ ಮಾಡುತ್ತಾರೆ. ವರುಷಕ್ಕೊಮ್ಮೆ ಸಂಭ್ರಮದಿಂದ ಹೋಗಿಯೂ ಬರುತ್ತಾರೆ.

ದೊಡ್ಡ ಕತಿ

ಎಸ್‌ಎಫ್‌ಐ ಸಂಗಾತಿ ಶೆಟ್ಟಿ ನಾಯಕ ಉತ್ಸಾಹದ ಯುವಕ. ಹಿಂದೊಮ್ಮೆ ಈತನೂ ಕಾಫಿ ಸೀಮೆಗೆ ಠಳಾಯಿಸಿ ಬಂದಿದ್ದಾನೆ. "ಹಿಂಗ ದುಡಿಲಿಕ್ಕೆ ಹೋಗಾ ಮಂದಿಗೆ ಯಾರ ಕರ್ಕೊಂಡು ಹೋಗ್ತಾರ..? ಗುತ್ತೆದಾರರಾ? ಸ್ವಂತ?.."

...ಎತ್ತರೆತ್ತರಕ್ಕೆ ಚಾಚಿಕೊಂಡ ಮಲೆಗಳು. ಮೇಲ್ಮುಖವಾಗಿ ಬೆಳೆದ ದಟ್ಟ ಕಾಫಿ ಗಿಡಗಳು. ಸುರಿವ ಮಳೆ. ಕಾಫಿ ಬೀಜ ಕೀಳುವವರ ಬೆನ್ನಿಗೊಂದು ಗೋಣಿಚೀಲ. ಕೆಳಗಿನಿಂದ ಕೀಳುತ್ತಾ ಕೀಳುತ್ತಾ ಮೇಲೆ ಮೇಲಕ್ಕೆ ಹೋಗಬೇಕು. ಅಲ್ಲಿವರೆಗೂ ಚೀಲದೊಳಗಿನ ಕಾಫಿ ಬೀಜಗಳ ಭಾರ 50-60 ಕಿಲೋದಷ್ಟಾಗುತ್ತದೆ. ಬೆಳಗಿನ ಬಲುಬೇಗ ಕಾರ್ಯಾರಂಭ ಮಾಡಬೇಕು.ಅರ್ಧರಾತ್ರಿ ಮೂರು ಗಂಟೆಗೆದ್ದು ಟಪಟಪ ರೊಟ್ಟಿ ತಟ್ಟಿ, ಆರು ಗಂಟೆಯೊಳಗೆ ನ್ಯಾರಿ (ಬೆಳಗಿನ ಊಟ) ಮುಗಿಸಲೇಬೇಕು. ಇಡೀ ದಿನ ಮೈ ಮುರಿಯೆ ದುಡಿಮೆ...

"ಅಯ್ಯೊ ಬಿಡ್ರಿ ಕಾಮ್ರೇಡ್. ಅದೊಂದು ದೊಡ್ಡ ಕತಿ. ಗುತ್ತೇದಾರರಿರ್ತಾರ. ಭಾರಿ ಜಾಲ.

ಕಾಫಿ ಎಸ್ಟೇಟ್ ಮಾಲಿಕರ ಜೋಡಿ ಅವ್ರಿಗೆ ಲಿಂಕ್ ಇರ್ತದ. ಮತ್ತ ಕಮಿಷನ್‌ನೂ. ಎಷ್ಟು ಕೂಲಿಯಾಳುಗಳು ಬೇಕೋ ಅಷ್ಟು ನಮ್ಮ ಹಳ್ಳಿಗಳಿಗೆ ಬಂದು ಕರ್ಕೊಂಡು ಹೋಗ್ತಾರ. ಒಮ್ಮೊಮ್ಮೆ ಲಾರಿ ತುಂಬ್ಕೊಂಡು. ತಕ್ಷಣ ಅಲ್ಲಿಗೆ ಬರೋದಕ ನಮ್ಮ ಹತ್ರ ಹಣ ಇಲ್ಲಾ ಅಂದ್ರ ಅವರೇ ಸಾಲನೂ ಕೊಡ್ತಾರ. ಆಮ್ಯಾಲ ಬಡ್ಡಿ ಸಮೇತ ವಸೂಲು ಮಾಡ್ತಾರ.

ಒಮ್ಮೆ ಕುರಿಗಳ ಹಂಗ ಲಾರಿ ತುಂಬ್ಕೊಂಡು ಹೋಗಾಗಿ ಲಾರಿಗೆ ಲಾರಿನೇ ಉರುಳಿ ಮೂರು ಮಂದಿ ಸ್ಪಾಟನಾಗ ಸತ್ತು ಹೋದ್ರು. ಕೆಲವರದ್ದು ಕೈಕಾಲು ಮುರದು, ಜೀವನದ ತುಂಬ ಅಂಗವಿಕಲ ಆದ್ರು. ಆ ಕಡಿಗೆ ಕಾಫಿ ಮಾಲಿಕರಿಂದಲೂ ಕಮಿಷನ್ ಈಕಡಿಗಿ ಕೆಲಸ ಕೊಡಿಸ್ತೀನಲ್ಲ ಅಂತ ಕಾರ್ಮಿಕರಿಂದಾನೂ ಕಮಿಷನ್ ಹೊಡಿಯಾ ಗುತ್ತೇದಾರ, ಕೊಡುವ ಕೂಲಿಯೂ ಕಾರ್ಮಿಕರಿಗೆ ಪೂರ್ತಿ ಕೊಡಾದಿಲ್ಲ. ಅದರಲ್ಲೂ ನೇರ ಮತ್ತು ಪರೋಕ್ಷ ಹಿಸ್ಸಾ ಮುರಿದುಕೊಳ್ಳುತ್ತಾನೆ. ದಿನಕ್ಕೆ 60 ರೂ. 80 ರೂ. ಕೆಲವೊಮ್ಮೆ ಮಾತ್ರ ರೂ. 100. ಆರು ತಿಂಗಳು ತರುವಾಯು ವಾಪಸ್ ಹಳ್ಳಿಗೆ ಹೊರಡುವಾಗ ಅನೇಕ ಸಾರಿ ಬರಿಗೈಯೇ..." ಶೆಟ್ಟಿ ನಾಯಕ ಹೇಳುವುದನ್ನು ತದೇಕ ಚಿತ್ತದಿಂದ ಕೇಳುತ್ತಿದ್ದೆ. ಯಾರೋ ಒಬ್ಬ ಕುಡುಕ ಜೋರು ಜೋರಾಗಿ ಚೀರಾಡುತ್ತಿದ್ದ. ನಾನು ಮಾತ್ರ ಕಾಫಿ ತೋಟದಲ್ಲಿದ್ದೆ....

....ಎತ್ತರೆತ್ತರಕ್ಕೆ ಚಾಚಿಕೊಂಡ ಮಲೆಗಳು. ಮೇಲ್ಮುಖವಾಗಿ ಬೆಳೆದ ದಟ್ಟ ಕಾಫಿ ಗಿಡಗಳು. ಸುರಿವ ಮಳೆ. ಕಾಫಿ ಬೀಜ ಕೀಳುವವರ ಬೆನ್ನಿಗೊಂದು ಗೋಣಿಚೀಲ. ಕೆಳಗಿನಿಂದ ಕೀಳುತ್ತಾ ಕೀಳುತ್ತಾ ಮೇಲೆ ಮೇಲಕ್ಕೆ ಹೋಗಬೇಕು. ಅಲ್ಲಿವರೆಗೂ ಚೀಲದೊಳಗಿನ ಕಾಫಿ ಬೀಜಗಳ ಭಾರ 50-60 ಕಿಲೋದಷ್ಟಾಗುತ್ತದೆ. ಬೆಳಗಿನ ಬಲುಬೇಗ ಕಾರ್ಯಾರಂಭ ಮಾಡಬೇಕು.ಅರ್ಧರಾತ್ರಿ ಮೂರು ಗಂಟೆಗೆದ್ದು ಟಪಟಪ ರೊಟ್ಟಿ ತಟ್ಟಿ, ಆರು ಗಂಟೆಯೊಳಗೆ ನ್ಯಾರಿ (ಬೆಳಗಿನ ಊಟ) ಮುಗಿಸಲೇಬೇಕು. ಇಡೀ ದಿನ ಮೈ ಮುರಿಯೆ ದುಡಿಮೆ...

"ಕಾಮ್ರೇಡ್ ನಂಗಂತು ಮೊದ ಮೊದಲು ಮುಂಜಾನಿ ಉಣಲಿಕ್ಕೆ ಆಗ್ತೀರಲಿಲ್ಲ.. ಅಭ್ಯಾಸ ಇರಲಿಲ್ಲ.......... ಬಲು ಕಷ್ಟ ಆ ಕೆಲಸ..." ಶೆಟ್ಟಿ ನಾಯಕ ಹೇಳ್ತಿದ್ದ.

ಈ ಭಾಗದ ಲಂಬಾಣಿ ಜನಾಂಗ ಪೂರ್ತಿಯೇ ಬಹುತೇಕ ಕಾಫಿ ಸೀಮೆಗೆ ವಲಸೆ ಹೋಗುತ್ತಾರೆ. "ಉದ್ಯೋಗ ಖಾತ್ರಿ ಕೆಲಸಕ್ಕೆ ರೂ. 74 ರಿಂದ ರೂ. 100 ಆದ್ರಂತು ನಮ ಕಡಿಂದ ಒಬ್ರೂ ವಲಸೆ ಹೋಗಾದಿಲ್ಲ. ಆದ್ರ ಜನ ಬೇಡಿಕೆ ಇಟ್ಟರ್‍ರೂ ಅಧಿಕಾರಿಗಳು ಕೆಲಸ ಕೊಡಾದಿಲ್ಲ. ಈಗ ಬಿಡ್ರಿ. ಹೋರಾಟ ಮಾಡಿ ಕೆಲಸ ಪಡಿತೀವಿ. ಮಂತ್ರ ಗೊತ್ತಾಯ್ತಲ್ಲ...." ಅನಂತ ನಾಯಕ ಮತ್ತು ಶೆಟ್ಟಿ ನಾಯಕ ಕಣ್ಣಲ್ಲಿ ಚಳುವಳಿ ಬೆಳೆಸುವ ಕನಸು ಹೆಣಿಕೆಗಟ್ಟುತ್ತಿತ್ತು.

ವಲಸೆ ಕಷ್ಟಗಳು ಕೇಳಿದರೆ ಯಾರಿಗಾದರೂ ಎದೆ ಝಲ್ಲೆನ್ನುತ್ತದೆ. ಇತ್ತೀಚೆಗೆ ಜನವರಿ 7 ರಂದು ಕಾಫಿ ಸೀಮೆಯಲ್ಲೊಂದು ಎಳೆ ಕಂದನ ಮೇಲೆ ಬಲತ್ಕಾರ ಮತ್ತು ಕೊಲೆ ನಡೆದುಹೋಯಿತು. ದಾವಣಗೆರೆ ಜಿಲ್ಲೆಯ ಬದುನಾಯಕ ತಾಂಡಾದ ದಂಪತಿಗಳು ಎರಡು ಹೆಂಗೂಸಗಳನ್ನು ಉಡಿಯಲ್ಲಿಟ್ಟುಕೊಂಡು ಕಾಫಿ ತೋಟದ ಕೆಲಸಕ್ಕೆ ಹಾಸನಕ್ಕೆ ಬಂದರು. ಮೊದಲ ಹುಡುಗಿಗೆ 13 ವಯಸ್ಸು. ಎರಡನೆಯದಕ್ಕೆ 11. ಗಂಡ-ಹೆಂಡತಿ ತೋಟದ ಕೆಲಸಕ್ಕೆ, ಎರಡು ಹುಡುಗೀರು ಮುನೀರ್ ಎಂಬ ತೋಟದ ಮಾಲಿಕನ ಮನೆ ಕೆಲಸಕೆ. ಅದೊಂದು ದಿನ ಜನವರಿ 7 ರ ಮದ್ಯಾಹ್ನ ಮುನೀರ್ ಕೆಲಸ ಮಾಡುವ ಎಳೆ ಹೆಂಗೂಸನ್ನು ಹೊತ್ತೊಯ್ದು ಬಲತ್ಕಾರಗೈದು ಬಾರ್ಬರಿಕವಾಗಿ ಹತ್ಯೆಗೈದನು. ತೋಟದ ಮಾಲೀಕ, ದುಡ್ಡಿನ ಹೊಳೆಯಲ್ಲಿ ಎಲ್ಲವೂ ಮುಚ್ಚಲು ಹವಣಿಸಿದ. ಹೆತ್ತವರ ಕರುಳು ವಿಲ ವಿಲ ಒದ್ದಾಡಿ ಆಕ್ರಂದನಗೈದರೂ

ವಲಸೆ ಕಷ್ಟಗಳು ಕೇಳಿದರೆ ಯಾರಿಗಾದರೂ ಎದೆ ಝಲ್ಲೆನ್ನುತ್ತದೆ. ಇತ್ತೀಚೆಗೆ ಜನವರಿ 7 ರಂದು ಕಾಫಿ ಸೀಮೆಯಲ್ಲೊಂದು ಎಳೆ ಕಂದನ ಮೇಲೆ ಬಲತ್ಕಾರ ಮತ್ತು ಕೊಲೆ ನಡೆದುಹೋಯಿತು. ದಾವಣಗೆರೆ ಜಿಲ್ಲೆಯ ಬದುನಾಯಕ ತಾಂಡಾದ ದಂಪತಿಗಳು ಎರಡು ಹೆಂಗೂಸಗಳನ್ನು ಉಡಿಯಲ್ಲಿಟ್ಟುಕೊಂಡು ಕಾಫಿ ತೋಟದ ಕೆಲಸಕ್ಕೆ ಹಾಸನಕ್ಕೆ ಬಂದರು. ಮೊದಲ ಹುಡುಗಿಗೆ 13 ವಯಸ್ಸು. ಎರಡನೆಯದಕ್ಕೆ 11. ಗಂಡ-ಹೆಂಡತಿ ತೋಟದ ಕೆಲಸಕ್ಕೆ, ಎರಡು ಹುಡುಗೀರು ಮುನೀರ್ ಎಂಬ ತೋಟದ ಮಾಲಿಕನ ಮನೆ ಕೆಲಸಕೆ.

ಮಾಲಿಕನಿಗೆ ಹೆದರಿ, ಕೇಸು ಮಾಡಲು ಮುಂದಾಗಲಿಲ್ಲ. ಜೀವ ಭಯದಿಂದ ತಲ್ಲಣಿಸಿದರು. ಘಟನೆ ತಿಳಿದ ದಾವಣಗೆರೆಯ ಎಸ್‌ಎಫ್‌ಐ - ಡಿವೈಎಫ್‌ಐ ಸಂಗಾತಿಗಳು ಹೋರಾಟದ ಬಾವುಟ ಎತ್ತಿದರು. ಆಗ ಮಾತ್ರ ಪೋಲಿಸ್ ಠಾಣೆಯಲ್ಲಿ ಕೇಸು ನೊಂದಾವಣೆಯಾಯಿತು. ಬಂಧನ ವಾಯಿತು.

ಧನಿಕ ಲೋಕದ ಸಂಚು


ಹೊಟ್ಟೆ ಹಸಿವಿನ ಬೆಂಕಿ ತಣಿಸಲು ಜೀವನವನ್ನೇ ಅಪಾಯದಂಚಿಗಿಟ್ಟು ಬಡಿದಾಡುವ ಅಸಂಖ್ಯ ಕುಟುಂಬಗಳು ಇವೆ. ಗೇಣುದ್ದ ಹೊಟ್ಟೆಗೆ ಗೌರವದ ತುತ್ತು ಸಿಗದ ಈ ನಾಡಲ್ಲಿ, ಎಳೆ ಕಂದಗಳು, ಮುದಿ ಜೀವಿಗಳು ನಿರಂತರ ಬಲಿಯಾಗುತ್ತಿದ್ದಾರೆ. ಹರೆಯದ ಯುವಜನತೆಯನ್ನು ನಿರ್ಜೀವರನ್ನಾಗಿ ಮಾಡುವ ಅಪಾಯಕಾರಿ ಸಂಚು ಹೆಣೆಯುತ್ತಿದೆ ಧನಿಕ ಲೋಕ; ಹೆಣ್ಣು ಮಕ್ಕಳ ದುಡಿಮೆಯನ್ನು ಅತ್ಯಂತ ಕಡಿಮೆ ಕೂಲಿಗೆ ಖರೀದಿಸಲಾಗುತ್ತಿದೆ. ಲೈಂಗಿಕ ದೌರ್ಜನ್ಯಗಳು ಗಾಳಿಯಷ್ಟೇ ಜಳಜಳ ಹರಿದು ಜಾರಿ ಸಾಕ್ಷಿಯನ್ನು ಅಪೋಷನಗೈದು ಉರುಳುತ್ತಿವೆ.

ಕೊಂಗನ ಹೊಸೂರಿನ ಕೊಟ್ರೇಶಿ ಹೇಳುತ್ತಿದ್ದ "ಕುಟುಂಬ ಪೂರ್ತಿ ಕಾಫಿ ಸೀಮೆಯಲ್ಲಿದೆ. ಎರಡು ಪುಟ್ಟ ಕಂದಗಳೂ ಅಲ್ಲಿ ದುಡಿಯುತ್ತಿವೆ. ಈಗ ಆರ್‌ಇಜಿಎ ದಲ್ಲಿ ಕೆಲಸ ಸಿಕ್ತಿಲ್ಲ. ಕರ್ಕೊಂಡು ಬಂದು ಶಾಲೆಗೆ ಕಳಿಸ್ತೇನೆ".

ಬಸ್ಸು ಬಂದಿತು. ಸಂಗಾತಿಗಳು ತುಂಬ ಆತ್ಮೀಯತೆಯಿಂದ ಕೈ ಬೀಸಿದರು. ಬಡಿಗೇರ್ ಸರ್ ಅವರ 'ಕಾಲದ ಕೂಗು' ಕವನ ಸಂಕಲನದ ಮೇಲೆ ಕಣ್ಣಾಡಿಸಿದೆ. ದೊಡ್ಡ ಹೋಟೇಲೊಂದರಲ್ಲಿ ಕೂತ ಜಂಟಲ್‌ಮನ್ ಕೈಯಲ್ಲಿ ಹಬೆ ಸೂಸುವ ಕಾಫಿ ಬಟ್ಟಲಿತ್ತು. ಹತ್ಯೆಯಾದ ಮಗುವಿನ ಕಣ್ಣುಗಳು ಕಾಡಿದವು. ಸೊಂಡೂರಿನ ಗಣಿಯ ಒಡಲಿಂದ ಕೂಲಿ ಕಾರ್ಮಿಕರಿಗೆ ಧೂಳು ಸಿಕ್ಕಿದೆ. ಧಣಿಗಳಿಗೆ ಹಣದ ಹೊಳೆ ಹರಿಸಿದೆ. ಈ ಕೆಮ್ಮಣ್ಣಲ್ಲಿ ಹೋರಾಟ ಬಾವುಟ, ಅರಳುತ್ತದೆ... ಬಸ್ಸು ಚಲಿಸಿತು.


'ಹೃದಯವಿದ್ದರೆ ಕಣ್ಣು ತೆರೆಯುತ್ತದೆ'

ಪಿ.ಸಾಯಿನಾಥ್



ಬೆಂಗಳೂರು ವಿ.ವಿ.ಯ ಸೆನೆಟ್ ಹಾಲ್‌ನಲ್ಲಿ ಮಾರ್ಚ 27ರಂದು ಮಾಧ್ಯಮಕ್ಕೆ ಕಣ್ಣು ಮೂಡಿಸುವ 'ಜನ ಶಕ್ತಿ' ಯ ಕುಸುರಿ ಕ್ರಿಯೆ ನಡೆಯಿತು. ಇದು ಇಂದಿನ ಜರೂರು ಕೂಡ, ಕೆಲವೊಮ್ಮೆ ಮಾಧ್ಯಮಗಳು ಕಣ್ಣೇಕೆ ಸಕಲ ಇಂದ್ರಿಯಗಳನ್ನು ಕಳೆದು ಕೊಂಡಿರುತ್ತವೆ ಎಂಬ ಸಂಗತಿಗಳಿವೆ.

ಕಾರ್ಯಕ್ರಮಕ್ಕೆ ಬಂದ ಕೆಲ ಗೆಳೆಯರು ಹೇಗಿತ್ತು? ಎಂದಾಗ ಮಾರ್ಕ್ಸನ ಮಾತುಗಳು ನೆನಪಿಗೆ ಬಂದವು.ಸಾಹಿತ್ಯ ಮತ್ತು ಕಲೆಯ ಕುರಿತಾದ ಬರಹದಲ್ಲಿ 'ಭೂಮಿಯಲ್ಲಿ ದುಡಿವ ಜನ ತಾವು ಸೃಷ್ಟಿಸಿದ ಸಂಪತ್ತಿಗೆ ಕೀಯರಾಗುವ, ಸೃಷ್ಟ ಕ್ರಿಯೆಯಲ್ಲಿಲ್ಲದವರು ಅದರ ಮಾಲಕರಾಗುವ ಪ್ರಕ್ರಿಯೆಯಲ್ಲಿ ಉಂಟಾದ ಕಂದರ ಹೆಚ್ಚುತ್ತಾ ಹೋದಂತೆ ಮನುಷ್ಯನ ಇಂದ್ರಿಯಗಳು ಮನುಷ್ಯನನ್ನು ಕಳೆದುಕೊಂಡು



ಅಮಾನುಷ ವಾಗುತ್ತವೆ.' ಹೀಗೆ ಹೇಳಿದ್ದಾರೆ.

ಪ್ರಜ್ಞೆ ಮತ್ತು ಪರಿಸರದ ನಡುವಿನ ಸಂಘರ್ಷದಲ್ಲಿ ಮಾನವ ತನ್ನ ಇಂದ್ರಿಯಗಳನ್ನು ಸೂಕ್ಷ್ಮಗೊಳಿಸಿ, ಬದುಕನ್ನು ಸಮರ್ಥಿಸುವ ಅಸ್ತ್ರಗಳನ್ನಾಗಿಸಿದ. ಕಂದರ ಹೆಚ್ಚಾದಂತೆ ಮನುಷ್ಯನ ಕಣ್ಣಲ್ಲಿ ನಾಣ್ಯಮನೆಮಾಡಿತು. ಕಿವಿಯಲ್ಲಿ ಮನುಷ್ಯ ಪ್ರೀತಿಯ ಬದಲು ನಾಣ್ಯದ ಸದ್ದು ಪಿಸುಗುಟ್ಟಿತು. ಜಾಗತೀಕರಣ ಇದನ್ನು ದೃಡಪಡಿಸಿತು.

ಇದರ ಜೊತೆಗೆ ಜಾತಿ ಮತ್ತು ಮತ ಭಾವನೆಗಳನ್ನು ಕೆದರುವ ಮತೀಯ ಸಂಘಗಳು ಮತ್ತದರ ಬಾಲಬಡುಕ ಪತ್ರಿಕೆಗಳು ಮನುಷ್ಯನಿಗೆ ಹೊಸ ಭಾಷೆ ನೀಡಿದವು, ಕಾರಣ ಜನರು ಮನುಷ್ಯರಂತೆ ಮಾತನಾಡದೆ ಹಿಂದು, ಮುಸ್ಲಿಂ ಇಲ್ಲವೆ ಬ್ರಾಹ್ಮಣ, ಲಿಂಗಾಯುತ, ಒಕ್ಕಲಿಗರಾಗಿ ಮಾತನಾಡುತ್ತಾರೆ.

ಮಾಧ್ಯಮದ ಒಂದು ಮುಖವಾದ ಪತ್ರಿಕೆಗಳು ಬರೀ ಅಕ್ಷರಗಳ ಹಾಳೆಗಳಲ್ಲ. ಬೇಡವಾದದನ್ನು ಬಲವಂತವಾಗಿ ತಿನ್ನಿಸುವ ಇಲ್ಲವೆ ತಿನ್ನವಂತೆ ಆಕರ್ಷಿಸುವ ವ್ಯಕ್ತಿತ್ವ ಪಡೆದಿವೆ.

ಅದ್ದರಿಂದ ಪ್ರತಿಕೆಗಳ ಮಾತಿನಲ್ಲಿ ಮನುಷ್ಯನಿರಲೆಬೇಕು. ಈ ಜವಾಬ್ದಾರಿ ಮಾತನ್ನು ಕೆಲ ಮಾಧ್ಯಮಗಳ ಮರೆತಿವೆ. ಇನ್ನೂ ಕೆಲವು ಅಗಾಗ ಜಾಣತನದಿಂದ ಮರೆತಂತೆ ನಾಟಕ ಮಾಡುತ್ತವೆ ಎಂದನಿಸುತ್ತದೆ. ಏಕೆಂದರೆ ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳು ನಂತರ ಅಧಿಕಾರದ ಮಾಲೀಕರಾಗುತ್ತಾರೆ. ಇವರು ಯಥಾವತ್ತಾಗಿ ಪತ್ರಿಕೆಗಳಲ್ಲೂ ಪತ್ರಿಬಿಂಬವಾಗುತ್ತಾರೆ.

ಅವರು ನೀಡುವ ಸವಾಲುಗಳನ್ನು, ಬೆದರಿಕೆಗಳನ್ನು ಯಥಾವತ್ತಾಗಿ ಪ್ರಕಟಿಸುವ ಪತ್ರಿಕೆಗಳು ಅವುಗಳ ಹಿಂದಿನ ದುರುದ್ದೇಶದ ಬಗ್ಗೆ, ಪರಿಣಾಮದ ಬಗ್ಗೆ ಏನನ್ನೂ ಹೇಳುವುದಿಲ್ಲ. ಚುನಾವಣೆಯ ಸಮಯದಲ್ಲಿ ಜನ ಪ್ರತಿನಿಧಿಯೊಬ್ಬ ಬುಡಕಟ್ಟು ಜನರ ಮಧ್ಯೆ ಹೋದದ್ದು, ಕೋಮುವಾದಿಯೊಬ್ಬ ತ್ರಿಶೂಲಗಳನ್ನು ಹಂಚಿದ್ದು, ಪ್ರಮುಖ ಸುದ್ದಿಯಾಗಿಸುವ ಮೂಲಕ ಜನರು ತಮ್ಮ ಬವಣೆಗಳನ್ನು ಬಗೆಹರಿಸಲು ಅವರನ್ನೇ ನಂಬುವಂತೆ ಮಾಡುತ್ತವೆ.

ಆದರೆ ಅದೇ ಜನ ತುತ್ತಿನ ಚೀಲ ತುಂಬಲು ನಗರಗಳಿಗೆ ವಲಸೆ ಹೋದಾಗ ವೃದ್ದ ತಾಯಂದಿರ ಸಂಕಟ, ನಗರದಲ್ಲಿ ದುಡಿದು ಅನೇಕ ರೋಗಗಳಿಗೆ ತುತ್ತಾಗಿ ಬಳಲುವುದು, ಗಣಿ ಧೂಳಿನಲ್ಲಿ ಕರಗುವ ಅವರ ಬದುಕಿನ ಸಂರ್ಘಷದ ಮುಖಗಳು ಪ್ರತಿಕೆಗಳಲ್ಲಿ ಕಾಣುವುದಿಲ್ಲ. ಪತ್ರಿಕಾ ಸ್ವಾತಂತ್ರ್ಯ ಆಳುವವರ ಗುಲಾಮಗಿರಿಗೆ ಶರಣಾದ ಫಲವಿದು.

ಇದನ್ನೆ ಪಿ. ಸಾತಿನಾಥ ಮಾದ್ಯಮಗಳಲ್ಲಿ ಕೆಲಸ ಮಾಡುವವರಿಗೆ ಮನದಟ್ಟು ಮಾಡಿದ್ದು. ಚಿಂತನೆಯಲ್ಲಿ ಕೆಲ ಪ್ರಮುಖ ಪ್ರಶ್ನೆಗಳು ಬಂದವು. ರೈತರ ಆತ್ಮ ಹತ್ಯೆಗೆ ಸಂಬಂಧಿಸಿದ ಪ್ರಮುಖ ಪ್ರಶ್ನೆ, ಮಹಾರಾಷ್ಟ್ರಾ, ಆಂಧ್ರಾ ಮತ್ತು ಕರ್ನಾಟಕದಲ್ಲೆ ಹೆಚ್ಚು ಪ್ರಕರಣಗಳೇಕೆ? ಇಂತಹ ಪ್ರಶ್ನೆಗಳ ಬಗೆಗೂ ಉತ್ತರ ದೊರಕಿತು.

'ಹೃದಯವಿದ್ದರೆ ಕಣ್ಣು ತರೆಯುತ್ತದೆ' ಎಂದ ಪಿ. ಸಾಯಿನಾಥರ ಮಾತು ಮತ್ತೊಮ್ಮೆ ಪ್ರತಿಧ್ವನಿಸಲಿ.

- ಪಿ.ಆರ್. ವೆಂಕಟೇಶ್

ಆಹಾರದ ಹಕ್ಕಿನ ಮೇಲೆ....

ಪುಟ 8 ರಿಂದ

ಮಾತ್ರ ಮಾಡಲಾಗುತ್ತದೆ ಎಂದು ಜನರನ್ನು ತಪ್ಪುದಾರಿಗೆಳೆಯಲಾಗಿತ್ತು. ವಾಸ್ತವವೆಂದರೆ ಇಡೀ ಮಂಗಳೂರಿಗೆ ದನ ಸಹಿತ ಆಡು, ಕುರಿಗಳ ಮಾಂಸ ಕೂಡ ಸಿದ್ದವಾಗುವುದೇ ಇದೇ ಕಸಾಯಿಖಾನೆಯಿಂದ. ನಗರದಲ್ಲಿ ಬೇರೆ ಕಸಾಯಿಖಾನೆ ಇಲ್ಲದ ಕಾರಣ ದನದ ಮಾಂಸದ ಜೊತೆಗೆ ಆಡು, ಕುರಿಗಳ ಮಾಂಸಗಳು ಸಹ ಮಾರುಕಟ್ಟೆಯಲ್ಲಿ ಲಭಿಸದೆ ಮಾಂಸಾಹಾರಿ ಜನ ಪರದಾಡುವ ಪರಿಸ್ಥಿತಿ ನಿರ್ಮಾಣವಾಯಿತು. ಇನ್ನೊಂದೆಡೆ ಅಕ್ರಮ ಕಸಾಯಿಖಾನೆಗಳು ತಲೆಯೆತ್ತಿ ಕಾನೂನು ಸುವ್ಯವಸ್ಥೆಯ ಸಮಸ್ಯೆ ತಲೆದೋರಿತು. ಇಂತಹ ಸಂದರ್ಭಕ್ಕಾಗಿಯೇ ಕಾದು ಕುಳಿತಿದ್ದ ಚಡ್ಡಿ ಪಡೆ ಅಂತಹ ಕಾಸಾಯಿಖಾನೆಗಳ ಮೇಲೆ ದಾಳಿ ನಡೆಸಿ ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ನೆಲೆಗೊಂಡಿತ್ತು. ಆ ಸಂದರ್ಭದಲ್ಲಿ ಡಿವೈಎಫ್‌ಐ ನೇತೃತ್ವದಲ್ಲಿ ಮಾಂಸ ವ್ಯಾಪಾರಿಗಳ ಜೊತೆಗೂಡಿದ 20ಕ್ಕೂ ಹೆಚ್ಚು ಜನಪರ, ಜಾತ್ಯಾತೀತ ಸಂಘಟನೆಗಳು ಸರಣಿ ಪ್ರತಿಭಟನೆ ನಡೆಸಿದವು. ಪ್ರತಿಭಟನೆಯಿಂದಾಗಿ ಉಂಟಾದ ಸಾರ್ವಜನಿಕ ಒತ್ತಡದಿಂದ ಎಚ್ಚೆತ್ತ ಸರ್ಕಾರ ಮಧ್ಯೆ ಪ್ರವೇಶಿಸಿತು. ಇದರಿಂದಾಗಿ ನಗರಪಾಲಿಕೆ ವ್ಯವಸ್ಥಿತ ಕಸಾಯಿಖಾನೆ ನಿರ್ಮಾಣಕ್ಕೆ ಸಮಯಾವಕಾಶ ಕೇಳಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಫಿದಾವಿಟ್ ಸಲ್ಲಿಸಿತು.

ಈ ಎಲ್ಲಾ ಬೆಳವಣಿಗೆಯಿಂದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ 20 ತಿಂಗಳಲ್ಲಿ ಕಸಾಯಿಖಾನೆಯನ್ನು ಸ್ಥಳಾಂತರಿಸಬೇಕು ಎಂಬ ಷರತ್ತಿನೊಂದಿಗೆ ಕಸಾಯಿಖಾನೆಯುನ್ನು ಪುನರಾಂಭಿಸಲು ಅನುಮತಿ ನೀಡಿತು.

ಮೇ 18ಕ್ಕೆ 20 ತಿಂಗಳ ಕಾಲಾವಕಾಶ ಮುಗಿಯಲಿದೆ. ಇಷ್ಟರವರೆಗೆ ನಗರಪಾಲಿಕೆಗೆ ಹೊಸ ಕಸಾಯಿಖಾನೆ ನಿರ್ಮಾಣದ ನಿಟ್ಟಿನಲ್ಲಿ ಯಾವುದೇ ಕೆಲಸವನ್ನು ಮಾಡಿಲ್ಲ. ಈಗ ನಗರಪಾಲಿಕೆ ಕಾಂಗ್ರೆಸ್‌ನಿಂದ ಕೈಜಾರಿ ಬಿಜೆಪಿಯ ಬುಟ್ಟಿಗೆ ಬಿದ್ದಿದೆ.

ಕಸಾಯಿಖಾನೆ ಶಾಶ್ವತವಾಗಿ ಮುಚ್ಚುವುದೇ?

ಕಸಾಯಿಖಾನೆಯ ಹೆಸರಿನಲ್ಲಿ ಜನರ ದಾರಿ ತಪ್ಪಿಸಿ ಅಧಿಕಾರಕ್ಕೆ ಬಂದ ಬಿಜೆಪಿಗೆ ಈಗ ಅಗ್ನಿಪರೀಕ್ಷೆ. ತಾನು ಅಧಿಕಾರಕ್ಕೆ ಬಂದ ತಕ್ಷಣ ಈ ವರ್ಷ ಕಸಾಯಿಖಾನೆಯ ಗುತ್ತಿಗೆಯನ್ನು ನವೀಕರಿಸುವುದಿಲ್ಲ. ಮೇ 18ಕ್ಕೆ ಕಸಾಯಿಖಾನೆ ಮುಚ್ಚುತ್ತದೆ ಎಂದು ಅಧಿಕಾರಿಗಳ ಮೂಲಕ ಹೇಳಿಸಿತು. ಇದರಿಂದ ಮಾಂಸ ವ್ಯಾಪಾರಿಗಳು ಕಂಗಾಲಾದರು. ಆದರೆ ಧೃತಿಗೆಡೆದ ವ್ಯಾಪಾರಸ್ಥರು ಡಿವೈಎಫ್‌ಐ ಕಾರ್ಯಕರ್ತರ ನೇತೃತ್ವದಲ್ಲಿ ನಗರ ಪಾಲಿಕೆ ಕಛೇರಿ ಮುಂದೆ ಧರಣಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯ ಕಾವಿಗೆ ಮಣಿದ ಜಿಲ್ಲಾಧಿಕಾರಿ ಮಧ್ಯ ಪ್ರವೇಶಿಸಿ ಒಂದು ವರ್ಷದ ಗುತ್ತಿಗೆಯನ್ನು ನವೀಕರಿಸಿದ್ದಾರೆ. ಈಗ ನಗರ ಪಾಲಿಕೆ ಹೊಸ ಕಸಾಯಿಖಾನೆ ನಿರ್ಮಾಣಕ್ಕೆ 36 ತಿಂಗಳ ಕಾಲಾವಧಿ ಬೇಕು ಎಂದೂ ಅಲ್ಲಿಯವರೆಗೆ ಕುದ್ರೋಳಿಯ ಕಸಾಯಿಖಾನೆಯುನ್ನು ಮುಂದುವರಿಸಲು ಅವಕಾಶ ಬೇಕು ಎಂದು ಕೋರಿ ಅಫಿದಾವಿತ್ ಸಲ್ಲಿಸಿದ್ದಾರೆ. ಇದರಿಂದಾಗಿ ಬಿಜೆಪಿ ಮುಖಭಂಗಕ್ಕೊಳಗಾದರೂ ತೋರ್ಪಡಿಸದೆ ಮೇ 18ರ ನಂತರ ಯಾವುದೇ ಕಾರಣಕ್ಕೂ ಕುದ್ರೋಳಿಯ ಕಸಾಯಿಖಾನೆ ಬಾಗಿಲು ತೆರೆಯಬಾರದು ಎಂಬ ನಿಟ್ಟಿನಲ್ಲಿ ಒಳಗೊಳಗೇ ಕಾರ್ಯ ನಿರತವಾಗಿದೆ.

ಇಷ್ಟೆಲ್ಲಾ ಆದರೂ ಮೇ 18ರ ನಂತರ ಕಸಾಯಿಖಾನೆಗೆ ಅವಕಾಶ ದೊರೆಯುವುದು ಕಷ್ಟ, ಎನ್ನುವ ಅಭಿಪ್ರಾಯವನ್ನು ಜಿಲ್ಲಾಧಿಕಾರಿಯೇ ವ್ಯಕ್ತಪಡಿಸಿದ್ದಾರೆ. ತಾನು ಅಸಹಾಯಕ ಎನ್ನುತ್ತಿರುವ ಜಿಲ್ಲಾಧಿಕಾರಿ ಮಹೇಶ್ವರರಾವ್ ಮಾಂಸ ವ್ಯಾಪಾರಸ್ಥರು ಸಹಕರಿಸಬೇಕು ಎಂಬ ಮಾತಿನ ಮೂಲಕ ಕಸಾಯಿಖಾನೆ ಮುಚ್ಚುವುದು ಗ್ಯಾರಂಟಿ ಎಂಬ ಸೂಚನೆ ನೀಡತೊಡಗಿದ್ದಾರೆ.

ಈಗಾಗಲೇ ಡಿವೈಎಫ್‌ಐ ಸಂಘಟನೆ ಜೊತೆ ಸೇರಿರುವ ಮಾಂಸ ವ್ಯಾಪಾರಸ್ಥರು ಪ್ರತಿಭಟನೆಯ ದಾರಿಗೆ ಇಳಿದಿದ್ದಾರೆ. ಏಪ್ರಿಲ್ 10 ರಂದು ಡಿವೈಎಫ್‌ಐ ಮತ್ತು ಮಾಂಸ ವ್ಯಾಪಾರಸ್ಥರ ಸಂಘದ ನೇತೃತ್ವಧಲ್ಲಿ ದಲಿತ, ಕಾರ್ಮಿಕ, ರೈತ ಸಂಘಟನೆಗಳ ಬೆಂಬಲದೊಂದಿಗೆ ಸಾವಿರಾರು ಜನರು ನಗರ ಪಾಲಿಕೆ ಕಛೇರಿಗೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರತಿಭಟನೆಗೆ ಭರದ ತಯಾರಿ ನಡೆಯುತ್ತಿದ್ದು, ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ.

ಇಷ್ಟೆಲ್ಲಾ ನಡೆಯುತ್ತಿರುವಾಗ ಕಸಾಯಿಖಾನೆಯ ಪರವಾದ ಹೋರಾಟಕ್ಕೆ ವ್ಯಾಪಕ ಜನ ಬೆಂಬಲ ವ್ಯಕ್ತವಾಗು ತ್ತಿರುವುದನ್ನು ಕಂಡು ಆಡಳಿತರೂಢ ಬಿಜೆಪಿ ಜಾಣ ಮೌನ ವಹಿಸಿದೆ. ಹೋರಾಟವನ್ನು ದಿಕ್ಕು ತಪ್ಪಿಸಲು ಒಳಗಿಂದೊಳಗೆ ತಂತ್ರಗಳನ್ನು ರೂಪಿಸುತ್ತಿದೆ. ಒಟ್ಟು ಈ ವಿವಾದವನ್ನು ರಾಜ್ಯ ಸರ್ಕಾರದ ಗಂಭೀರವಾಗಿ ಪರಿಗಣಿಸಿ ಬಹುಸಂಖ್ಯಾತರ ಆಹಾರದ ಹಕ್ಕಿನ ಮೇಲೆ ನಡೆಯುತ್ತಿರುವ ಧಾಳಿಯ ಸಮಸ್ಯೆ [illegible]ಗೆಹರಿಸಲು ಸರ್ಕಾರಕ್ಕೆ ಮುಂದಾಗಬೇಕಿದೆ. ಇಲ್ಲ[illegible] ಕರಾವಳಿ ಮತ್ತೊಮ್ಮೆ ಅಗ್ನಿಕುಂಡವಾದರೂ ಅ[illegible]ಯವಿಲ್ಲ.

ಕನ್ನಡಿ



ಕೆ.ಎಸ್.ವಿಮಲ

ವರದಕ್ಷಿಣೆ ಪದ್ಧತಿ ಎಂಬುದೊಂದು ಸಾಮಾಜಿಕ ಅನಿಷ್ಟ. ಹಲವರ ಮನಸ್ಸಿನಲ್ಲಿ ಇದಕ್ಕೆ ಎಂಥೆಂಥದ್ದೋ ಸಮರ್ಥನೆಯ ವಾದಗಳು ಸುಪ್ತವಾಗಿರುತ್ತವೆ. ಈ ಸಮಸ್ಯೆಯ ಬಗ್ಗೆ ಕಾನೂನು ಏನು ಹೇಳುತ್ತದೆ.

ವರದಕ್ಷಿಣೆ ನಿಷೇಧ ಕಾನೂನು

ಸುಮಾರು 35 ವರ್ಷಗಳ ಹಿಂದಿನ ಮಾತು. ಸಾಗರದ (ಶಿವಮೊಗ್ಗ ಜಿಲ್ಲೆ) ಹತ್ತಿರದ ಒಂದು ಪುಟ್ಟಹಳ್ಳಿಯಲ್ಲಿ ಒಂದು ಮೌನ ಕ್ರಾಂತಿಯೇ ನಡೆಯಿತು. ಒಂದು ಸುಶಿಕ್ಷಿತ ಕುಟುಂಬದ ಹೆಣ್ಣು ಮಗಳ ಮದುವೆಯ ಸಂಭ್ರಮ. ಹುಡುಗ- ವರ ಮಹಾಶಯ ಆ ಕಾಲದಲ್ಲಿಯೇ ಇಂಜಿನಿಯರಿಂಗ್ ಪದವೀಧರ. ಮುಂಬೈನಲ್ಲಿ ಒಳ್ಳೆಯ ಕೆಲಸ, ಕೈ ತುಂಬ ಸಂಪಾದನೆ, ಗಿಣಿಯ ಹಾಗೆ ಸಾಕಿದ ಮಗಳು ಒಳ್ಳೆ ಜಾಗಕ್ಕೆ ಸೇರುತ್ತಾಳೆ, ಹಳ್ಳಿ ಕೊಂಪೆಯಿಂದ ಮುಂಬೈ ಷಹರಕ್ಕೆ ಹೋಗುತ್ತಾಳೆ ಸಡಗರ, ಸಂಭ್ರಮದ ಜೊತೆ ಸಹಜವಾದ ದುಗುಡ, ಆತಂಕಗಳೂ ಇದ್ದೇ ಇದ್ದವು.

ಏನಾಯ್ತು

ಮದುವೆಯ ದಿನ ಬಂದೇಬಿಟ್ಟಿತು. ದಿಬ್ಬಣ ಸಂಪ್ರದಾಯದಂತೆ ಊರ ಮುಂದಿನ ಅರಳೀ ಕಟ್ಟೆಗೆ ಬಂದಿದೆ. ಅಲ್ಲಿ ವರನ ಪಾದ ತೊಳೆದು, ಪಾನೀಯ, ತಂಪು ಬಿಸೋ... ಬೀಗರಿಗೆ ಬೇಕಾದ ವ್ಯವಸ್ಥೆಗಳಿಗಾಗಿ ಬಿರುಸಿನ ಓಡಾಟ ನಡೆಯುತ್ತಿರುವಾಗಲೆ ಗುಸು-ಗುಸು, ಪಿಸು-ಪಿಸು ಮಾತು. ಅಮ್ಮ ಸೆರಗಿನಲ್ಲಿ ಕಣ್ಣು, ಮೂಗು ಒತ್ತಿಕೊಳ್ಳುತ್ತಿದ್ದಾಳೆ, ಸೋದರ ಮಾವನ ಆತಂಕದ ಮುಖ, ತಂದೆ ತಲೆಗೆ ಕೈಹೊತ್ತಿದ್ದಾನೆ. ಏನಾಯ್ತು? ಏನು ನಡೆಯುತ್ತಿದೆ ಎಂದು ತಿಳಿಯಲು ವಧುವಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಉನ್ನತ ವಿದ್ಯಾಭ್ಯಾಸ, ಉತ್ತಮ ಹುದ್ದೆಯ ಪಿತ್ತ ತಲೆಗೇರಿದ ವರಮಹಾಶಯ "ವರದಕ್ಷಿಣೆಯ" ಡಿಮ್ಯಾಂಡ್ ಇಟ್ಟಿದ್ದ. 10,000/- ನಗದು, ಬೆಳ್ಳಿ ಪಾತ್ರೆಗಳು ಇತ್ಯಾದಿ. ಸಾಧಾರಣ ಕುಟುಂಬದ ಮದುವೆಗೇ 10,000/- ಖರ್ಚು ಮಾಡಲು ಸಾಧ್ಯವಿರದಿದ್ದ ಕಾಲವದು. ಅಂತಹುದರಲ್ಲಿ ದೊಡ್ಡ ಮದುವೆ ಜೊತೆಗೆ ಮದುವೆ ಮಂಟಪದ ಹೊರಗೆ ನಿಂತು ವರದಕ್ಷಿಣೆಯ ಬೇಡಿಕೆ ಎಂದರೆ ಪರಿಣಾಮ ಏನಾದೀತು? ಕಂಗೆಟ್ಟು ಇಡೀ ಕುಟುಂಬ ನೆಂಟರಿಷ್ಟರು ತಲೆಗೆ ಕೈಹೊತ್ತಾಗ ವಧುವಿನ ಹಠ. ವರನಿಗೆ ಒಪ್ಪಿಸಿ, ಮಂಟಪಕ್ಕೆ ಕರೆತನ್ನಿ. ಏನಾದರೂ ವ್ಯವಸ್ಥೆ ಮಾಡಿ. ಇಲ್ಲವಾದರೆ ಪರಿಣಾಮ ನೆಟ್ಟಗಾಗದು. ಅಪ್ಪನಿಗೆ ಅತ್ತದರಿ, ಇತ್ತಪುಲಿ, ಕೊನೆಗೂ ಮಗಳ ಹಠವೇ ಗೆದ್ದಿತು. ವರನಿಗೆ ಅವನ ಬೇಡಿಕೆ ಈಡೇರಿಸುವ ಭರವಸೆ ಇತ್ತು. ಮಂಟಪಕ್ಕೆ ಕರೆ ತಂದಾಯಿತು. ಸೋದರ ಮಾವನ ಜೊತೆ ವರಮಾಲೆ ಹಿಡಿದು ಬಂದ ವಧು ಸಭೆಯ ಮಧ್ಯದಲ್ಲಿ ನಿಂತಳು. "ಇವನನ್ನು ಮದುವೆಯಾಗುವುದಿಲ್ಲ" ಆಗಾಗಲೇ ತುಟಿಯಿಂದ ಕಿವಿಗೆ ಬಿದ್ದ ಪಿಸು ಮಾತು ಎಲ್ಲರ ಎದೆಯಲ್ಲಿ ಆತಂಕದ ಬೀಜಗಳನ್ನು ಬಿತ್ತಿತ್ತು. ಏನಾಗುವುದೋ ಎಂಬ ಕಳವಳ. ಮಂಟಪದ ಬಾಗಿಲಲ್ಲಿ ನಿಂತ ವಧು ಸಭೆಯ ಉದ್ದೇಶಿಸಿ - "ಈ ಗಂಡು ಬಂದಿದ್ದು ನನ್ನನ್ನು ಮದುವೆಯಾಗಲಿಲ್ಲ, ಬದಲಿಗೆ ನನ್ನ ಅಪ್ಪನ ಹಣವನ್ನು. ಆದರೆ ನನಗೆ ಬೇಕಿರುವುದು ನನ್ನಪ್ಪನ ಹಣ ಪ್ರೀತಿಸುವವನಲ್ಲ, ನನ್ನನ್ನು ಪ್ರೀತಿಸಿ ಬದುಕು ನಡೆಸಬಯಸುವವನು. ಅಂತಹ ವ್ಯಕ್ತಿ ಯಾರಾದರೂ ಇದ್ದರೆ ನಾನು ಅವರನ್ನು ಮದುವೆಯಾಗಲು ಸಿದ್ಧ. ಇವನನ್ನು ನಾನು ಮದುವೆಯಾಗುವುದಿಲ್ಲ" ಎಂದ ಮಾತು ಕೇಳಿ ಸಭೆಯಲ್ಲಿ ವಿದ್ಯುತ್ ಸಂಚಾರವಾಯಿತು. ಗಾಬರಿ, ಸಂತೋಷ, ಅಭಿಮಾನ ಒಟ್ಟಿಗೆ ನೂರು ಭಾವನೆಗಳು ಹರಿದಾಡಿದ ಗಳಿಗೆಯದು. ಆಯಿತು ಅಂತಹ ವ್ಯಕ್ತಿ ಸಿಕ್ಕೂ ಆಯಿತು. ಅವಳ ಬದುಕು ಹಾಲು ಜೇನಾಗಿಯೇ ನಡೆಯಿತು.

ವರದಕ್ಷಿಣೆ ಎಂಬುದು ಒಂದು ಸಾಮಾಜಿಕ ಪಿಡುಗು. ಅದು ತೊಡೆಯಬೇಕು. ಸಮಾಜ ಬದಲಾಗಬೇಕು ಇದು ಎಲ್ಲರ ಆಶಯ. ಆದರೆ ಅಷ್ಟು ಸುಲಭವೇ. ವರದಕ್ಷಿಣೆಯನ್ನೂದು ಪರಂಪರಾಗತ ಪದ್ಧತಿ ಎಂದು ಬಿಂಬಿಸುವ ಪ್ರಯತ್ನವೂ ನಡೆಯುತ್ತಿದೆ. ಮದುವೆಯಾಗಿ ಹೋದ ಹೆಣ್ಣು ತನ್ನ ಕೊನೆಯವರೆಗೂ ಆ ಮನೆಯಲ್ಲಿ ಇರುತ್ತಾಳೆ. ಅವಳ ದೇಖರೇಖೆಗಳೆಲ್ಲ ಆ ಮನೆಯ ಜವಾಬ್ದಾರಿ ಹಾಗಾಗಿ ಅವಳ ಖರ್ಚಿನ ಭಾಗವಾಗಿ ಅಪ್ಪನ ಮನೆಯಿಂದ ಕೊಟ್ಟರೇನು ತಪ್ಪು ಎಂಬ ಭಾವವೂ ಇಣುಕುವುದುಂಟು. ಹಾಗೆಂದ ಮಾತ್ರಕ್ಕೆ ಇಡೀ ಸಮಾಜ ವರದಕ್ಷಿಣೆಯನ್ನು ಸ್ವೀಕರಿಸಿಬಿಟ್ಟಿದೆ. ಅದನ್ನು ರೂಢಿಸಿಕೊಂಡಿದೆಯೆಂದೇನೂ ಅಲ್ಲ.

ಇತಿಹಾಸದ ಪುಟಗಳಲ್ಲಿ

ವರದಕ್ಷಿಣೆಯನ್ನು ಒಂದು ಸಾಮಾಜಿಕ ಪಿಡುಗೆಂದೇ ಪ್ರಾರಂಭದಿಂದಲೂ ಪರಿಗಣಿಸಲಾಗಿದೆ. ನಾಳೆ ಅದೊಂದು ಪೆಡಂಭೂತವಾಗಿ ಕಾಡಿಬಿಡಬಹುದೆಂಬ ಆತಂಕ ಸ್ವಾತಂತ್ರ್ಯಪೂರ್ವದಲ್ಲೇ ಹಲವರನ್ನು ಕಾಡಿತ್ತು. ಕೇವಲ ಕಾಡಿಸಿಕೊಂಡು ಕುಳಿತಿರದೇ ಅವರು ಅದನ್ನು ಹಿಡಿತಕ್ಕೆ ತರಲು ಒಂದಿಷ್ಟು ಪ್ರಾಮಾಣಿಕ ಪ್ರಯತ್ನ ನಡೆಸಿದರೆಂಬುದಕ್ಕೆ ಸಾಕ್ಷಿಯಿದೆ. 1939ರಲ್ಲಿ ಸಿಂಧ್ ಪ್ರಾವಿನ್ಷಿಯಲ್ ಸರ್ಕಾರ - "ಸಿಂಧ್ ಲೇಲೇ-ದೇಲೇ ಕಾನೂನು 1939" ಎಂಬ ಕಾನೂನಿನ ಮೂಲಕ ವರದಕ್ಷಿಣೆ ನಿಷೇಧದತ್ತ ಒಂದು ದಿಟ್ಟ ಹೆಜ್ಜೆ ಇಟ್ಟಿತು. ಆದರೆ ವರದಕ್ಷಿಣೆ ಎಂಬುದು ಕನ್ಯಾದಾನದ ಭಾಗವಾಗಿ ಪ್ರೀತಿಯಿಂದ ಕೊಡುವ ಉಡುಗೊರೆ. ಅದನ್ನು ಕೊಡದೇ ಮದುವೆ ಎಂಬ ಕನ್ಯಾದಾನ ಪೂರ್ಣವಾಗದೆಂಬ ಪರಂಪರಾಗತ ನಂಬಿಕೆಯೇ ಆಧಾರವಾಗಿರುವ ವ್ಯವಸ್ಥೆಯಲ್ಲಿ ಈ ಕಾನೂನು ಹೆಚ್ಚು ಪರಿಣಾಮ ಬೀರುವಲ್ಲಿ ಯಶಸ್ವಿಯಾಗಲಿಲ್ಲ. 1950ರಲ್ಲಿ ಬಿಹಾರ ಸರ್ಕಾರ ವರದಕ್ಷಿಣೆ ತಡೆ ಕಾಯ್ದೆ, ಆಂಧ್ರಪ್ರದೇಶ ಸರ್ಕಾರ 1953ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆಯನ್ನು ತಂದವಾದರೂ ಅವು ಜಾರಿಯಾಗುವಲ್ಲಿ ವಿಫಲವಾದವು. ಇದು ಇಷ್ಟಕ್ಕೇ ನಿಲ್ಲದೆ ಪ್ರಥಮ ಲೋಕಸಭೆಯಲ್ಲಿಯೇ ಕಾನೂನು ಮಂತ್ರಿಗಳು ವರದಕ್ಷಿಣೆ ನಿಷೇಧ ಕಾಯ್ದೆಯೊಂದನ್ನು ಜಾರಿಗೆ ತರುವ ಭರವಸೆ ನೀಡಿ ಸಾಕಷ್ಟು ಜನ ಸಂಸತ್ ಸದಸ್ಯರು ಖಾಸಗಿ ಮಸೂದೆಗಳನ್ನು ಪಾರ್ಲಿಮೆಂಟ್‌ನಲ್ಲಿ ಮಂಡಿಸಿದರೆಂಬುದೇ ಈ ಪಿಡುಗು ತನ್ನ ಬಾಲ್ಯದಿಂದಲೂ ವಿರೋಧ ವನ್ನೆದುರಿಸುತ್ತಲೇ ಬೆಳೆದುಬಂದಿತೆಂದು ಗುರುತಿಸಬಹುದು. ಈ ನೆಲೆಯಲ್ಲಿಯೇ ಬಹಳ ಚರ್ಚಿತವಾದ ಈ ವಿಷಯ - ಹಿಂದೂ ಉತ್ತರಾಧಿಕಾರದ ಕಾಯ್ದೆಗೂ ಒಂದು ಆಸ್ತಿಭಾರವಾಯಿತೆಂದರೆ ತಪ್ಪೇನಿಲ್ಲ. 1956ರಲ್ಲಿ ಈ ಕಾಯ್ದೆ ಬಂದ ನಂತರ ಸರ್ಕಾರಕ್ಕೆ ವರದಕ್ಷಿಣೆ ನಿಷೇಧ ಕಾನೂನು ತಕ್ಷಣದಲ್ಲಿ ಜಾರಿಗೆ ಬರಲೇಬೇಕಾದ ಅಗತ್ಯ ಕಂಡುಬಂದ ನಂತರವಷ್ಟೇ 1959ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ ರೂಪುಗೊಂಡಿತು. ಹಾಗೆ ರೂಪುಗೊಂಡ ಕಾನೂನು ಜಂಟಿ ಸದನ ಸಮಿತಿಗೂ ಒಪ್ಪಿಸಲ್ಪಟ್ಟಿತು. ಆದರೆ ಅದರ ಶಿಫಾರಸುಗಳು ಉಭಯ ಸದನಗಳಲ್ಲಿ ಅಂಗೀಕಾರವಾಗದೇ ಉಳಿಯುವ ಸಂದರ್ಭ ಬಂತು. 1961ರಲ್ಲಿ ಮೇ 6ರಿಂದ 9ರವರೆಗೆ ನಡೆದ ಉಭಯ ಸದನಗಳ ಜಂಟಿ ಅಧಿವೇಶನದಲ್ಲಿ ಕಾನೂನಾಗಿ ರೂಪುಗೊಂಡಿತು. ಇಷ್ಟೆಲ್ಲ ಪರಿಪಾಟು ಪಟ್ಟುಬಂದ ಕಾನೂನು ಸಾಕಷ್ಟು ಹರಿತವಾದದ್ದೇ ಆದರೂ ಜನರ ಮನೋಭಾವ ಬದಲಾಗದೇ ಕೇವಲ ಕಾನೂನು ಇಂತಹ ಸಾಮಾಜಿಕ ನೆಲೆಯನ್ನೂ ಹೊಂದಿದ ಅಂಶಗಳನ್ನು ಹತೋಟಿಗೆ ತರಲಾಗದು.

ವರದಕ್ಷಿಣೆ ನಿಷೇಧ ಕಾಯ್ದೆ 1961

ಕಾನೂನಿನ ಉದ್ದೇಶ : ವರದಕ್ಷಿಣೆ ಕೊಡುವ-ತೆಗೆದುಕೊಳ್ಳುವುದನ್ನು ನಿಲ್ಲಿಸುವುದು. ವರದಕ್ಷಿಣೆ ಎಂದರೆ - ಬೆಲೆಬಾಳುವ ಯಾವುದೇ ಆಸ್ತಿ-ಪಾಸ್ತಿಗಳನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮದುವೆಗೆ ಮುನ್ನ ಮದುವೆಯ ಸಂದರ್ಭದಲ್ಲಿ/ ನಂತರ ಕೊಡುವುದು, ತೆಗೆದುಕೊಳ್ಳುವುದು. ಇದು ಮೆಹರ್ ಅಥವಾ ಕನ್ಯಾ ಶುಲ್ಕಕ್ಕೆ ಅನ್ವಯಿಸುವುದಿಲ್ಲ. ಎಂದರೆ ಎರಡೂ ಕಡೆಯವರು ಕುಳಿತು ಮಾತನಾಡಿ ಪರಸ್ಪರ ಒಪ್ಪಿ ಪಟ್ಟಿ ಮಾಡಿ, ಪದ್ಧತಿಗೆ ಅನುಸಾರವಾಗಿ ಕೊಟ್ಟ ತೆಗೆದುಕೊಂಡ ವಸ್ತುಗಳು ಮತ್ತು ಅದು ವಧುವಿಗೆ ಕೊಡುವ ಉಡುಗೊರೆಯಾಗಿ ಮತ್ತುಅದು ವಧುವಿನ ಕುಟುಂಬದ ಆರ್ಥಿಕ ಹೊರೆಯನ್ನು ಹೆಚ್ಚಿಸದಂತೆ ಮತ್ತು ವರನಿಂದ ಬೇಡಿಕೆಯಾಗಿ ಬಂದಿರದ ವಿಷಯವಾಗಿರುತ್ತದೆ.

ಶಿಕ್ಷೆಗಳು : ವರದಕ್ಷಿಣೆ ಕೊಡುವುದು, ಕೇಳುವುದು ಮತ್ತು ಉತ್ತೇಜಿಸುವುದು ಈ ಕಾನೂನಿನ ಪ್ರಕಾರ ಅಪರಾಧ. ಈ ಅಪರಾಧಕ್ಕೆ ಶಿಕ್ಷೆ ಕನಿಷ್ಟ ಐದು ವರ್ಷಗಳ ಸಜೆ ಮತ್ತು 15,000/ - ದಂಡ ಅಥವಾ ವರದಕ್ಷಿಣೆ ಮೊತ್ತ ಯಾವುದು ಹೆಚ್ಚೋ ಅದು. ವರದಕ್ಷಿಣೆ ಕೊಟ್ಟವರು ಆ ಕುರಿತು ದೂರು ದಾಖಲಿಸಿದಲ್ಲಿ ಈ ಕಾನೂನಿನ ಪ್ರಕಾರ ಶಿಕ್ಷಾರ್ಹರಲ್ಲ. ವರದಕ್ಷಿಣೆಗಾಗಿ ಬೇಡಿಕೆ ಇಡುವುದೆಂದರೆ : 6 ತಿಂಗಳಿಂದ 2 ವರ್ಷಗಳವರೆಗೆ ಸಜೆ/ಜೈಲು ವಾಸ ಮತ್ತು 10,000/- ರೂ.ಗಳವರೆಗೆ ದಂಡ.

ವರದಕ್ಷಿಣೆ ಕುರಿತಾದ ಯಾವುದೇ ರೀತಿಯ ಜಾಹಿರಾತು ನೀಡುವುದು ಕೂಡ ಶಿಕ್ಷಾರ್ಹ ಅಪರಾಧ. ಶಿಕ್ಷೆ 6 ತಿಂಗಳಿಂದ 5 ವರ್ಷದವರೆಗೆ ಜೈಲು ವಾಸ ಮತ್ತು 15,000/-ದಂಡ.

ಯಾವುದೇ ಮಹಿಳೆಗೆ ಬಂದ ವರದಕ್ಷಿಣೆ ಅವಳ ಮತ್ತು ಅವಳ ವಾರಸುದಾರರ ಆಸ್ತಿಯೆಂದೇ ಪರಿಗಣಿಸಬೇಕು. ಅದನ್ನು ಸ್ವೀಕರಿಸಿದ 3 ತಿಂಗಳೊಳಗೆ ಅದನ್ನು ಅವಳ ಹೆಸರಿಗೆ ಕಾನೂನು ಪ್ರಕಾರ ವರ್ಗಾಯಿಸಬೇಕು. ಹಾಗೆ ಮಾಡದಿದ್ದಲ್ಲಿ 6 ತಿಂಗಳ ಸೆರೆವಾಸ ಮತ್ತು 10,000/- ದಂಡ ವಿಧಿಸಬಹುದಾಗಿದೆ. ಅದಕ್ಕೆ ಮುನ್ನವೇ ಮಹಿಳೆ ಸಾವನ್ನಪ್ಪಿದಲ್ಲಿ ಅವಳ ವಾರಸುದಾರರೇ ಹಕ್ಕುದಾರರು.

ಮದುವೆಯಾದ 7 ವರ್ಷಗಳೊಳಗೆ ಮಹಿಳೆ ಅಸ್ವಾಭಾವಿಕವಾಗಿ ಮರಣ ಹೊಂದಿದರೆ ಅವಳ ಆಸ್ತಿ ಅವಳ ಮಕ್ಕಳಿಗೆ. ಮಕ್ಕಳಿಲ್ಲದಿದ್ದಲ್ಲಿ ಅವಳ ಪೋಷಕರು ಅದರ ಹಕ್ಕುದಾರರು. ಈ ಕಾನೂನಿನ ಪ್ರಕಾರ ನಡೆಸಿದ ಅಪರಾಧಗಳು ವಿಚಾರಣಾರ್ಹವಾದಂತೆ - ಕಾಗ್ನಿಜ಼್‌ಬಲ್ ಇರುತ್ತವೆ. ಜಾಮೀನು ರಹಿತವೂ ಆಗಿರುತ್ತವೆ. ಆದರೆ ವಾರಂಟ್ ಮತ್ತು ಮ್ಯಾಜಿಸ್ಟ್ರೇಟ್‌ರ ಆದೇಶವಿಲ್ಲದೇ ಬಂಧನ ಮಾಡುವ ಹಾಗಿಲ್ಲ.

- ರಾಜ್ಯ ಸರ್ಕಾರದ ಕರ್ತವ್ಯಗಳು : ರಾಜ್ಯ ಸರ್ಕಾರವು ವರದಕ್ಷಿಣೆ ಪದ್ಧತಿಯ ತಡೆ ಮತ್ತು ನಿರ್ಮೂಲನದತ್ತ ಮಾರ್ಗವಾಗಿ ವರದಕ್ಷಿಣೆ ತಡೆ ಅಧಿಕಾರಿಗಳನ್ನು ನೇಮಿಸಬೇಕು. ಅವರು ವರದಕ್ಷಿಣೆ ಪದ್ಧತಿ ನಿಯಂತ್ರಿಸುವಲ್ಲಿ, ಅದರ ಕುರಿತಾದ ಪ್ರಚಾರ ನಡೆಸುವಲ್ಲಿ, ಘಟನೆ ನಡೆದ ಸಂದರ್ಭದಲ್ಲಿ ಸಾಕ್ಷಿ, ಆಧಾರಗಳನ್ನು ಸಂಗ್ರಹಿಸುವ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ.

ಇವರ ಕೆಲಸಕ್ಕೆ ಅನುಕೂಲವಾಗುವಂತೆ ಸರ್ಕಾರವು ಒಂದು ಸಲಹಾ ಸಮಿತಿಯನ್ನು ರಚಿಸಬಹುದಾಗಿದೆ. ಕಾನೂನು ಅದರಲ್ಲಿರುವ ಅಂಶಗಳು ಉತ್ತಮವಾಗಿದೆ ಯಾದರೂ ಅದರ ಜಾರಿಯ ಕುರಿತು ಇನ್ನೊಂದಿಷ್ಟು ಆಳವಾದ ಬದ್ಧತೆಯ ಅಗತ್ಯವಿದೆ. ಮಹಿಳೆಯನ್ನು ಸಂವಿಧಾನದತ್ತ ಹಕ್ಕುಗಳಿಗೆ ಬಾಧ್ಯಸ್ಥಳಾದ ವ್ಯಕ್ತಿಯಾಗಿ ಪರಿಗಣಿಸುವ ಪರಿಸರದ ನಿರ್ಮಾಣದತ್ತ ಇನ್ನೂ ಶ್ರಮಿಸಬೇಕಾದ ದಾರಿ ಇದೆ. ಈ ದಾರಿ ದುರ್ಗಮವಾಗಿದೆ ಎಂಬುದನ್ನು ಅರ್ಥಮಾಡಿಕೊಂಡೆ ಮುಂದು ವರೆಯುತ್ತಿರುವಾಗಲೇ ಅಲ್ಲೊಂದಿಲ್ಲೊಂದು ದುರ್ಬಳಕೆಯ ಪ್ರಕರಣಗಳೂ ನಡೆಯುತ್ತಿವೆ. ಹಾಗೆಂದೇ ಕಳೆದ ಕೆಲವು ತಿಂಗಳುಗಳ ಹಿಂದೆ ಸರ್ವೋಚ್ಛ ನ್ಯಾಯಾಲಯ ಈ ಕುರಿತು ಕಳವಳ ವ್ಯಕ್ತಪಡಿಸಿತ್ತು. ಯಾವುದೇ ಮಹಿಳಾ ಪರವಾದ ಕಾನೂನು, ನೀತಿ, ನಿಯಮಗಳು ಬರುವುದು ಅಷ್ಟು ಸುಲಭವಿಲ್ಲ. ಹಲವಾರು ಹಂತಗಳ ತೀವ್ರ ಪ್ರಯತ್ನದ ಮೂಲಕ ಸಾಧಿಸಿದ್ದನ್ನು ಅಣು ಮಾತ್ರ ದುರ್ಬಳಸಿದರೂ ಅದು ಬೀರುವ ಪರಿಣಾಮ ದೊಡ್ಡ ಹೊಡೆತವನ್ನೇ ಕೊಟ್ಟೀತು. ಕುಂಬಾರನಿಗೆ ವರುಷ-ದೊಣ್ಣೆಗೆ ನಿಮಿಷವಾದೀತು ಎಚ್ಚರ.

ಕಾವಿ ಸಂವಿಧಾನ

ಹಲವರಿಗೆ ಸಹಜವೇ ಭೂಮಿಯಲಿ ನೋವು
ಬಹುಬೇಗ ಸ್ವರ್ಗಕ್ಕೆ ಕಳಿಸುವೆಂದು ನಾವು
ಕೆಲವರಿಗೆ ಇಲ್ಲಿಯೇ ಸ್ವರ್ಗ ಸೋಪಾನ
ಕಾವಿ ಪರಿವಾರದ್ದು ಈ ಸಂವಿಧಾನ

- ವಿಡಂಬಾರಿ

ತಾಯಿ ಕಾದಂಬರಿಯ ಮುಖಾಮುಖಿಯಂತೂ ಉಳಿದೆಲ್ಲಾ ಕೃತಿಗಳಿಗಿಂತಲೂ ಹೆಚ್ಚು ಜೀವ ಸಂವೇದಿ ನೆಲೆಯತ್ತ ತೆರೆದುಕೊಳ್ಳಲು ಆಕೃತಿಯೇ ಕಾರಣವಾಗಿತ್ತು. ಏಕೆಂದರೆ ಸಮಾಜವಾದಿ ಸಿದ್ಧಾಂತಗಳ ಬೆಳಕಿನಲ್ಲಿ ನಡೆದ ಪ್ರಪ್ರಥಮ ಚಳುವಳಿಯ ನೈಜ ಸಂಗತಿಗಳನ್ನಾಧರಿಸಿ ಬರೆದ ಆ ಕಾದಂಬರಿಗೆ ಬಹುದೊಡ್ಡ ಚಾರಿತ್ರಿಕ ಜವಾಬ್ದಾರಿಯು ಇದೆ.

ಮಾಕ್ಸಿಂ ಗೋರ್ಕಿ 'ತಾಯಿ' ಗೆ ನೂರು ನಮನ

ಡಾ. ಮೀನಾಕ್ಷಿ ಬಾಳಿ

ಜಾಗತಿಕ ಕ್ಲಾಸಿಕ್ ಸಾಹಿತ್ಯ ಕೃತಿಗಳಲ್ಲಿ ಮಕ್ಸೀಂ ಗೋರ್ಕಿಯವರ 'ತಾಯಿ' ಕಾದಂಬರಿಗೆ ಒಂದು ಚಾರಿತ್ರಿಕ ಮಹತ್ವವಿದೆ. 127 ಭಾಷೆಗಳಲ್ಲಿ ಅನುವಾದಗೊಂಡು ವ್ಯಾಪಕ ಓದು ಮತ್ತು ಚರ್ಚೆಗೆ ಒಳಗಾಗಿರುವ ಈ ಕೃತಿ ರಚನೆಯಾಗಿ ಒಂದು ಶತಮಾನ ಸಂದಿದೆ. ಕೃತಿಯ ಧಾತುವಾಗಿರುವ ಸಮಾಜವಾದಿ ಚಳುವಳಿಯ ನಡೆಗೂ ಒಂದು ಶತಮಾನದಷ್ಟು ಆಯುಸ್ಸು ಆಗಿದೆ. ಒಂದೆಡೆ ಚಳುವಳಿ ಇನ್ನೊಂದೆಡೆ ಚಳುವಳಿಯ ಸೂಕ್ಷ್ಮಾತಿಸೂಕ್ಷ್ಮ ಒಳ ಬದಲಾವಣೆಯನ್ನು ಹಿಡಿದಿಟ್ಟ ಕಲಾಕೃತಿ ಇವೆರಡರ ನಡುವೆ ಒಂದು ಶತಮಾನದಷ್ಟು ಕಾಲಮಾನ. ಈ ಎಲ್ಲ ಭಾವಾನುಭೂತಿಯ ಸಾಧ್ಯತೆಯನ್ನು ಕುರಿತು ಒಂದು ಸಮೂಹ ವಿಮರ್ಶೆ, ಸ್ವಯಂ ವಿಮರ್ಶೆ, ಚಿಂತನಧಾರೆಗಳ ವಿಮರ್ಶೆ ಹೀಗೆ ಜೀವಂತ ಬದುಕು ಸಂಧಿಸುವ ಎಲ್ಲವನ್ನೂ ಮುಖಾಮುಖಿಗೊಳಿಸಲೆಂದು ಎರಡು ದಿನದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮತ್ತು ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ಭಾಷಾ ನಿಕಾಯಗಳ ಸಹಯೋಗದಲ್ಲಿ ಕಳೆದ ಫೆಬ್ರವರಿ 5 ಮತ್ತು 6 ಎರಡು ದಿನಗಳ ಸಾಂಸ್ಕೃತಿಕ ಮುಖಾಮುಖಿ ಇದಾಗಿತ್ತು.

ರಷ್ಯಾದ ಜಾರ್ ಸಾಮ್ರಾಜ್ಯಶಾಹಿಯ ವಿರುದ್ಧ ರೈತರು, ಕಾರ್ಮಿಕರು ದಂಗೆಯದು ಚಳುವಳಿಯನ್ನು ಅಣಿ ನೆರೆಸಿದ್ದ ಚಾರಿತ್ರಿಕ ಸಂಗತಿಯನ್ನು ಹಿಡಿದಿಟ್ಟ ಕಲಾಕೃತಿ ತಾಯಿಗೆ ಹಲವು ಸಾಂಸ್ಕೃತಿಕ ಮಹತ್ವಗಳು ಇವೆ. ಇದು ಒಂದು ಸಾಹಿತ್ಯ ಕೃತಿಯಾಗಿ ಎಷ್ಟು ಮಹತ್ವ ಪಡೆದಿದೆಯೋ ಒಂದು ಚಳುವಳಿಯ ಬದ್ಧತೆಯಾಗಿಯೂ ಗಮನ ಸೆಳೆದಿದೆ. ಅದಕ್ಕಿಂತ ಮುಂದುವರೆದು ಭೌತವಾದಿ ದಾರ್ಶನಿಕ ಧಾರೆಯ ಪ್ರಾಯೋಗಿಕ ಜೀವನದ ನಡೆಯಾಗಿಯೂ ಇದು ಪ್ರಭಾವ ಬೀರಿದೆ. ಅಂತೆಯೇ ಇವತ್ತಿಗೂ ಸಮಾಜವಾದಿ ನೆಲೆಯ ಗತಿತಾರ್ಕಿಕ ದೃಷ್ಟಿ-ಧೋರಣೆ ಹೊಂದಿರುವ ಕಾರ್ಯಕರ್ತರಿಗೆ ಇದು ಸದಾಕಾಲದ ಕೈಪಿಡಿಯಂತಿದೆ. ಇಂಥ ಕೃತಿಯೊಂದನ್ನು ಬೇಸ್ ಆಗಿ ಇಟ್ಟುಕೊಂಡು ವರ್ತಮಾನದ ಕ್ಷಣಗಳಲ್ಲಿ ಜಗತ್ತು ಎದುರಿಸುತ್ತಿರುವ ತಲ್ಲಣಗಳನ್ನು ಕುರಿತು ಪರಾಮರ್ಶಿಸಲೆಂದು ನಡೆದ ಈ ಎರಡು ದಿನಗಳ ಗೋಷ್ಠಿ ಒಂದು ಅರ್ಥಪೂರ್ಣ ಪ್ರಯತ್ನವಾಗಿತ್ತು. ಅರ್ಥಪೂರ್ಣ ಏಕೆಂದರೆ ಜಾಗತಿಕ ಮುಕ್ತ ಮಾರುಕಟ್ಟೆ ವ್ಯವಸ್ಥೆ ಹುಟ್ಟು ಹಾಕಿರುವ ಆರ್ಥಿಕ ಅಭದ್ರತೆಯಲ್ಲಿ ನಾವಿದ್ದೇವೆ. ಇನ್ನೊಂದೆಡೆ ಸಾಮ್ರಾಜ್ಯಶಾಹಿ ರಾಜಕಾರಣ ಸೃಷ್ಟಿಸಿರುವ ಭಯೋತ್ಪಾದನೆ, ಕೋಮುವಾದ, ಜನಾಂಗೀಯವಾದಗಳನ್ನು ಪುಷ್ಟೀಕರಿಸುವ ಫಿಲಾಸಫಿಯ ವಿಜೃಂಭಣೆಯ ಸಮ್ಮುಖದಲ್ಲಿ ನಿಂತಿದ್ದೇವೆ. ಇದರೊಟ್ಟಿಗೆ ಸಮಾಜವಾದಿ ಸರಕಾರಗಳನ್ನು ಶತಾಯ-ಗತಾಯ ನೆಲಕಚ್ಚಿಸಬೇಕೆಂದು ಹಗೆಯುತ್ತಿರುವವರ ಮಧ್ಯೆದಲ್ಲಿ ತಿಣಕಾಡುತ್ತಿದ್ದೇವೆ. ಜನಪರ ಚಳುವಳಿಗಳನ್ನು ತೀರ ಕೆಟ್ಟದಾಗಿ ದಮನಿಸಲಾಗುತ್ತಿರುವ ಒಂದರ್ಥದಲ್ಲಿ ಪರ್ಯಾಯ ಸಂಸ್ಕೃತಿಗಾಗಿ ತಡಕಾಡುತ್ತಿದ್ದೇವೆ. ಇಂಥ ಅಸಂಖ್ಯ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಹೊತ್ತಿನಲ್ಲಿ ಖಂಡಿತ 'ತಾಯಿ' ಕಾದಂಬರಿಯ ಚರ್ಚೆ ಕಾಲದ ಜರೂರಿಯಾಗಿ ಕಾಣಿಸಿಕೊಂಡಿರಲಿಕ್ಕು ಸಾಕು. ಸಮಕಾಲೀನ ಸಾಂಸ್ಕೃತಿಕ ಶೂನ್ಯ ಸ್ಥಿತಿಯನ್ನು ಖಾಯಂಗೊಳಿಸುವ ಷಡ್ಯಂತ್ರಗಳು ಮತ್ತದೇ ವೈದಿಕ ಸಂಸ್ಕೃತಿಯ ರಾಮರಾಡಿಯನ್ನು ಮೊಗೆದು ಮೊಗೆದು ಕೊಡುತ್ತಿರುವ ಹಂತದಲ್ಲಿ ತಾಯಿ ಕಾದಂಬರಿಯು ಖಂಡಿತ ಪರ್ಯಾಯವನ್ನು ಕಲ್ಪಿಸಿಕೊಡುತ್ತದೆ. ಈ ಕಾರಣವಾಗಿಯೇ ಕಾದಂಬರಿಯೊಂದಿಗೆ ಸಾಂಸ್ಕೃತಿಕ ಮುಖಾಮುಖಿಯು ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಯನ್ನು ಎತ್ತಿ ಹಿಡಿಯುತ್ತದೆ. ಶುದ್ಧ ಅಕೆಡೆಮಿಕ್ ವಲಯದಾಚೆಗೂ ವಿಸ್ತರಿಸಿಕೊಳ್ಳುತ್ತಿರುವ ಹಂಪಿ ವಿಶ್ವವಿದ್ಯಾಲಯ ಪ್ರಾಯೋಜಿತ ಸಾಹಿತ್ಯ ಕೃತಿಗಳ ಸಾಂಸ್ಕೃತಿಕ ಮುಖಾಮುಖಿಗೆ ಖಂಡಿತ ಬಹುಮುಖಿ ಮಹತ್ವವಿದೆ. ಶುಷ್ಕ ಮತ್ತು ಪಂಡಿತ ಮುಖಿ ಶೈಕ್ಷಣಿಕ ವಲಯವನ್ನು ಸಮಾಜಮುಖಿ ನೆಲೆಯತ್ತ ಹಿಡಿದು



ತರುತ್ತಿರುವ ಪ್ರಯತ್ನ ಮೆಚ್ಚುವಂಥದ್ದೇ. ಹಳಗನ್ನಡ ಮತ್ತು ನಡುಗನ್ನಡ ಕ್ಲಾಸಿಕ್ ಕೃತಿಗಳೊಂದಿಗೆ ಜಾಗತಿಕ ಕೃತಿಗಳನ್ನು ಪುನರ್ ಅಧ್ಯಯನ, ಪುನರ್ ಪರಾಮರ್ಶೆಗೆ ಒಳಪಡಿಸುವುದು ಇವತ್ತಿನ ಸಾಂಸ್ಕೃತಿಕ ಲೋಕದ ಅನಿವಾರ್ಯವೂ ಹೌದು. ಈ ದಿಸೆಯಲ್ಲಿ ತಾಯಿ ಕಾದಂಬರಿಯ ಮುಖಾಮುಖಿಯಂತೂ ಉಳಿದೆಲ್ಲಾ ಕೃತಿಗಳಿಗಿಂತಲೂ ಹೆಚ್ಚು ಜೀವ ಸಂವೇದಿ ನೆಲೆಯತ್ತ ತೆರೆದುಕೊಳ್ಳಲು ಆಕೃತಿಯೇ ಕಾರಣವಾಗಿತ್ತು. ಏಕೆಂದರೆ ಸಮಾಜವಾದಿ ಸಿದ್ಧಾಂತಗಳ ಬೆಳಕಿನಲ್ಲಿ ನಡೆದ ಪ್ರಪ್ರಥಮ ಚಳುವಳಿಯ ನೈಜ ಸಂಗತಿಗಳನ್ನಾಧರಿಸಿ ಬರೆದ ಆ ಕಾದಂಬರಿಗೆ ಬಹುದೊಡ್ಡ ಚಾರಿತ್ರಿಕ ಜವಾಬ್ದಾರಿಯು ಇದೆ.

1905 ರಿಂದ 1907ರ ಅವಧಿಯಲ್ಲಿ ರಾಜ್ಯದ ಜಾರ್ ಸಾಮ್ರಾಜ್ಯಶಾಹಿಯ ದರ್ಪ, ದಬ್ಬಾಳಿಕೆಯ ವಿರುದ್ಧ ಸಾಮಾನ್ಯ ರೈತರು, ಕೂಲಿಕಾರರು, ಮಹಿಳೆಯರು ಸಂಘಟಿತ ನೆಲೆಯಲ್ಲಿ ತಿರುಗಿಬಿದ್ದದ್ದು, ಆ ಯಶಸ್ವಿ ಹೋರಾಟಕ್ಕೆ ನಾಯಕತ್ವ ನೀಡಿದ ಪಾವೆಲ್ ಮತ್ತು ಆತನ ತಾಯಿ ಪೆಲಗೇಯ ನೀಲೊವ್ನ ಹಾಗೂ ಹತ್ತಾರು ಸಂಗಾತಿಗಳು ಕಣ್ಣ ತುಂಬ ಸಮಾನತೆಯ ಕನಸುಗಳನ್ನಿಟ್ಟುಕೊಂಡು ಹೋರಾಟ ಮಾಡಿದ್ದು, ಹೋರಾಟದ ಹಾದಿಯಲ್ಲಿ ಎದುರಾದ ಅಂತರಂಗ, ಬಹಿರಂಗ ಸಂಘರ್ಷಗಳು, ಸಾಮಾನ್ಯ ಜನತೆಯ ಮನೋವಲಯದಲ್ಲಾಗುವ ಏರಿಳಿತಗಳು, ಅಖಂಡ ಹೋರಾಟದ ಅನಂತ ಹೋರಾಟದ ಅನಂತ ಆಯಾಮಗಳನ್ನು ಮಕ್ಸೀಂ ಗೋರ್ಕಿ ನಿರ್ಲಿಪ್ತ ಭಾವದಿಂದ ಆದರೆ ಅಷ್ಟೇ ಎಚ್ಚರದ ಸಾಕ್ಷಿ ಪ್ರಜ್ಞೆಯೊಂದಿಗೆ ಚಿತ್ರಿಸಿದ ಬಗೆ ಇದೆಯಲ್ಲ, ಅದನ್ನು ಒಂದು ಕಲಾಕೃತಿಯ ರೂಪದಲ್ಲಿ ಸ್ಥಾಯಿ ಗೊಳಿಸಿರುವ ಬದ್ಧತೆ ಇದೆಯಲ್ಲ, ಅದು ತಾಯಿ ಕಾದಂಬರಿಯನ್ನು ಸಾರ್ವಕಾಲಿಕಗೊಳಿಸಿದೆ. ವರ್ತಮಾನದ ರಾಜಕೀಯ ಆತಂಕದ ಸ್ಥಿತಿಯೂ ಸದರಿ ಕೃತಿಯ ಪರಾಮರ್ಶೆಗೆ ವಿಸ್ತೃತ ನೆಲೆಯನ್ನು ಒದಗಿಸಿತ್ತು.

ಈ ಎರಡು ದಿನದ ಮುಖಾಮುಖಿ ಕಾರ್ಯಕ್ರಮದಲ್ಲಿ ನಾಡಿನ ಬಹುದೊಡ್ಡ ವಿದ್ವಾಂಸರು, ಪ್ರಗತಿಪರ ಹೋರಾಟಗಾರರು, ಚಿಂತಕರು ಭಾಗವಹಿಸಿದ್ದರು. ವಿಷಯ ಪರಿಣಿತರೆಲ್ಲ ತುಂಬಾ ಚೆನ್ನಾಗಿ ಪ್ರಬಂಧ ಮಂಡಿಸಿದರು. ಸಾಕಷ್ಟು ಒಳನೋಟಗಳಿದ್ದವು ಎಂದೆಲ್ಲಾ ರೆಡಿಮೆಡ್ ಮಾದರಿಯ ವಿಮರ್ಶೆ ಅಥವಾ ವರದಿ ಮಾಡಿದರೆ ಅದು ಖಂಡಿತ ಇಡೀ ವಿಚಾರಸಂಕಿರಣದ ಮಹತ್ವಾಕಾಂಕ್ಷೆಯನ್ನೇ ಮೊಟಕುಗೊಳಿಸಿದಂತೆಯೇ ಸರಿ. ಇಲ್ಲಿ ಆ ಎರಡು ದಿನದ ವಿಷಯ ಮಂಡನೆ, ಚರ್ಚೆ, ಪ್ರಶ್ನೋತ್ತರದ ಚಕಮಕಿಯಲ್ಲಿ ಕಾಲದ ಒತ್ತಡವೊಂದು ಒಳಗುದಿಯಾಗಿ ತಿದಿಯೊತ್ತುತ್ತಲೇ ಇತ್ತು.

ಒಂದೆಡೆ ಜಾಗತೀಕರಣ, ಕೋಮುವಾದ, ಬಂಡವಾಳಶಾಹಿಯ ಹೊಸ ಪಂಥಾಹ್ವಾನಗಳು ನುಂಗಿ ನೊಣೆಯುತ್ತಿದ್ದರೆ, ಮಗುದೊಂದೆಡೆ



ಚಳುವಳಿಗಳ ಅಸ್ತಿತ್ವ, ಹಾದಿಗಳ ಕುರಿತು ಗಂಭೀರ ಆಲೋಚನೆಗಳು ಮೂಡಿದವು. ಸಾಹಿತ್ಯಕ ಮಹತ್ವಾಕಾಂಕ್ಷೆಗಿಂತಲೂ ರಾಜಕೀಯ ಪರ್ಯಾಯದ ಕಾಳಜಿಯೊಂದು ಓತಪ್ರೋತವಾಗಿ ತುಂಬತೊಡಗಿತ್ತು. ರಾಜಕೀಯ ಮಹತ್ವಾಕಾಂಕ್ಷೆ ಎಂದರೆ ಖಂಡಿತ ಪವರ್‌ಪಾಲಿಟಿಕ್ಸ್‌ನ ವಿಕೃತ ಬಯಕೆಯಲ್ಲ. ಅಧಿಕಾರಕ್ಕಾಗಿ ಅಧಿಕಾರವೆಂಬ ಭೂರ್ಜ್ವಸಿ ಅಥವಾ ಹುಸಿ ಡೆಮಾಕ್ರಸಿಯ ಭೂತ ಕನಸುಗಳಲ್ಲ. ಫಿಲಾಸಫಿಕಲ್ ಪಾಲಿಟಿಕ್ಸ್‌ನ ಅವಶ್ಯಕತೆ ಅರ್ಥಾತ್ ಜನತೆಯ ಅಷ್ಟಕ್ಕೂ ಸಮಗ್ರ ಜನತೆಯ ಬದುಕನ್ನು ನಿರ್ವಹಿಸುವ, ಒಟ್ಟು ಜನತೆಯ ಅಭಿವೃದ್ಧಿಯನ್ನು ಸಾಕಾರಗೊಳಿಸುವ ವ್ಯವಸ್ಥೆಯೊಂದರ ಹುಡುಕಾಟ ಅದಾಗಿತ್ತು. ಸ್ವಾತಂತ್ರ್ಯೋತ್ತರದ ಅರವತ್ತು ಸಂವತ್ಸರಗಳ ನಡೆಯಲ್ಲಿ ಪ್ರಗತಿಪರ ಹೋರಾಟಗಳು, ಎಡಪಂಥೀಯ ವಿಚಾರಧಾರೆಗಳು ಎಡವಿದ್ದು ಎಲ್ಲಿ? ಪ್ರತಿಯೊಬ್ಬ ಮತ್ತು ಪ್ರತಿಯೊಂದು ಹೋರಾಟಗಾರನ ಮಿತಿ, ಸಾಧ್ಯತೆ ಎಷ್ಟು? ವರ್ತಮಾನದ ಈ ಚಲ್ಲಾಪಿಲ್ಲಿ ವ್ಯವಸ್ಥೆಯಲ್ಲಿ ಎಲ್ಲ ಒಳಿತನ್ನು ಪುನಃ ಕಟ್ಟುವುದು ಹೇಗೆ? ಹಳೆಯ ತಪ್ಪುಗಳು ಸಂಭವಿಸದಂತೆ ಮಾಡಬೇಕಾದದ್ದು ಏನು? ಇತ್ಯಾದಿ ಪ್ರಶ್ನೆಗಳು ಅಲ್ಲಿ ತಾಯಿ ಕಾದಂಬರಿಯ ಪರಿಪ್ರೇಕ್ಷ್ಯದಲ್ಲಿ ಅನುರಣಿತವಾಗುತ್ತಿದ್ದವು.

ಒಂದೆಡೆ ವರ್ತಮಾನದ ರಾಜಕೀಯ ಷಡ್ಯಂತ್ರಗಳನ್ನು ಹಣಿಯಲು ಸಂಘಟಿತ ಹೋರಾಟ ಮತ್ತು ವಿಸ್ತೃತ ಸಾಂಸ್ಕೃತಿಕ ನಡೆಗಳು ಅತ್ಯಂತ ಅವಶ್ಯ ಎಂಬ ನಿಲುವಿಗೆ ಬರುತ್ತಿರುವಾಗಲೇ, ಇನ್ನೊಂದೆಡೆ ಎಡ ಸಾಹಸವಾದಿಗಳ ಉಗ್ರ ರಕ್ತಕನಸುಗಳು, ಲೋಹಿಯಾವಾದಿಗಳ ಸೋಮಾರಿ ಹಳವಂಡಗಳು ಪುಟಿದೇಳುತ್ತಲೇ ಇದ್ದವು. ಪರಸ್ಪರರನ್ನು ಗುಮಾನಿಸುವ, ತುಚ್ಛೀಕರಿಸುವ ಹಳೆಯ ಚಾಳಿ ಮತ್ತೆ ಮತ್ತೆ ಹಣಕಿ ಹಾಕುತ್ತಲೇ ಇತ್ತು. ಇದಕ್ಕೆ ತಪ್ಪಿಸಬೇಕೆಂಬ ಪ್ರಯತ್ನಗಳು ಕೂಡಾ ಸಾಕಷ್ಟು ಭರವಸೆಯನ್ನು ಮೂಡಿಸುತ್ತಿದ್ದವು. ಎಲ್ಲಕ್ಕಿಂತ ಆಶ್ಚರ್ಯಕರ ಸಂಗತಿ ಎಂದರೆ ತಾಯಿ ಕಾದಂಬರಿಯನ್ನು ಎಲ್ಲ ವಿಚಾರಧಾರೆಯವರು ತಮ್ಮ ತಮ್ಮ ಮೂಗಿನ ನೇರಕ್ಕೆ ಹೊಂದಿಸಿಕೊಳ್ಳುವ ಸಾಹಸ ಮಾಡುತ್ತಲೇ ಇದ್ದದ್ದು. ಅಷ್ಟಕ್ಕೂ ತಾಯಿ ಕಾದಂಬರಿಯ ಒಟ್ಟು ವಸ್ತುವಾದರೂ ನಿರ್ದಿಷ್ಟ ಪ್ರದೇಶವೊಂದರ ನಿರ್ದಿಷ್ಟ ವ್ಯಕ್ತಿಗಳ ಬದುಕಿನಲ್ಲಿ ಸಂಭವಿಸಿದ ನೈಜ ಸಂಗತಿಗಳ ಮೊತ್ತವಾಗಿದೆ. ಆದರೆ ಸತ್ಯ ಘಟನೆಯೊಂದನ್ನು ಕಲಾಕೃತಿಯಾಗಿಸುವಲ್ಲಿ ಗೋರ್ಕಿ ತೋರಿದ ಜಾಣ್ಮೆ ಪ್ರಬದ್ಧತೆಗಳೇ ಇವತ್ತಿಗೂ ಮುಖ್ಯವಾಗಿವೆ. ಒಂದುರೀತಿಯ ಸಾರ್ವಕಾಲಿಕ ಕೃತಿಯನ್ನಾಗಿಸಿದೆ. ಹೀಗಾಗಿ ತಾಯಿ ಸಮಾಜವಾದಿ ಸಿದ್ಧಾಂತದ ಅನುಷ್ಠಾನಕ್ಕೆ ಬೇಕಾದ ದಾರಿ ಮತ್ತು ಗುರಿ ಎರಡನ್ನು ಸ್ಪಷ್ಟಪಡಿಸಿದೆ. ಆದ್ದರಿಂದ ನಮಗಾರಿಗೂ ಈ ಕುರಿತು ತಪ್ಪುಗ್ರಹಿಕೆಗಳು ಇರಬೇಕಾಗಿಲ್ಲ. ಉದ್ದೇಶಪೂರ್ವಕವಾಗಿಯೇ ತಪ್ಪುಗ್ರಹಿಸುವುದಾದರೆ ಈ ಕುರಿತು ತಪ್ಪು ಗ್ರಹಿಕೆಗಳು ಇರಬೇಕಾಗಿಲ್ಲ. ಅದಕ್ಕೆ ನಾ ಇಲಾಜ್ ಕೋ ಬೇಇಲಾಜೇ ಸರಿ. ಇದರರ್ಥ ಮದ್ದಿಲ್ಲದಕ್ಕೆ ಮದ್ದಿಲ್ಲ ಅಷ್ಟೇ.

ಹಿಂದೂ ತಾಲಿಬಾನ್‌ಗಳು

ಹಿಂದೂ ತಾಲಿಬಾನ್‌ಗಳ ಹಾಕಿದರೆ ಮಟ್ಟ
ಹೊರದ ತಾಲಿಬಾನ್‌ಗಳು ಏರುವರು ಚಟ್ಟ
ಮಿತಿ ಮೀರಿ ಹೋಗಿಹುದು ಅಟ್ಟಹಾಸವಿಲ್ಲಿ
ಆದರೂ ಕಣ್ಮುಚ್ಚಿ ಕುಳಿತಿಹುದು ದಿಲ್ಲಿ.

\- ಏಡಂಬಾರಿ

ಶರತ್‌ಚಂದ್ರ

ಜಿಂಬಾಬ್ವೆ ಚುನಾವಣೆಗಳಲ್ಲಿ ಮುಗಾಬೆ ಸೋಲು?

ಜಿಂಬಾಬ್ವೆಯಲ್ಲಿ ಪಾರ್ಲಿಮೆಂಟ್ ಮತ್ತು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು ಮುಗಾಬೆಯವರ ಆಳುವ ಪಕ್ಷ (ಜಾನು-ಪಿ.ಎಫ್.) ಸೋತಿದೆ ಎಂದು ಪ್ರಮುಖ ವಿರೋಧ ಪಕ್ಷ ಎಂ.ಡಿ.ಸಿ. ಹೇಳಿದೆ. ಆದರೆ ಚುನಾವಣಾ ಕಮಿಶನ್ ಫಲಿತಾಂಶದ ಅಧಿಕೃತ ಘೋಷಣೆ ಮಾಡದೆ ಅನಿಶ್ಚಿತತೆ ಉಂಟಾಗಿದೆ. ಘೋಷಿತ ಅಪೂರ್ಣ ಫಲಿತಾಂಶಗಳ ಪ್ರಕಾರ ಪಾರ್ಲಿಮೆಂಟಿನ 210 ಸೀಟುಗಳಲ್ಲಿ ವಿರೋಧಿ ಎಂ.ಡಿ.ಸಿ.105 ಸೀಟು ಗಳಿಸಿದ್ದು, ಆಳುವ ಜಾನು-ಪಿ.ಎಫ್. 93 ಸೀಟು ಗಳಿಸಿದೆ. ಮುಗಾಬೆಯವರ ಮಂತ್ರಿಮಂಡಲದ ಏಳು ಮಂತ್ರಿಗಳು ಸೋತಿದ್ದಾರೆ. ಅಧ್ಯಕ್ಷೀಯ ಚುನಾವಣೆಗಳಲ್ಲಿ ಅಧ್ಯಕ್ಷ ಮುಗಾಬೆಗಿಂತ ವಿರೋಧಿ ಎಂ.ಡಿ.ಸಿ. ಅಭ್ಯರ್ಥಿ ಮೋರ್ಗನ್ ಹೆಚ್ಚಿನ ಮತಗಳಿಸಿದ್ದಾರೆ. ಫಲಿತಾಂಶ ಅಧಿಕೃತವಾಗಿ ಘೋಷಿತವಾಗಿಲ್ಲ. ಎಂ.ಡಿ.ಸಿ. ತಮ್ಮ ಅಭ್ಯರ್ಥಿ ಮೋರ್ಗನ್ ಗೆದ್ದಿದ್ದಾರೆ ಎಂದು ಹೇಳಿದೆ.

ಆದರೂ ಪ್ರತಿ ಮತಗಟ್ಟೆಯ ಹೊರಗೆ ಹಾಕಲಾದ ಮತಗಳಿಕೆ ಪಟ್ಟಿಗಳನ್ನು ಕೂಡಿದರೆ ಮುಗಾಬೆ ಶೇ.42, ಮೋರ್ಗನ್ ಶೇ.49 ಮತಗಳಿಸಿದ್ದಾರೆ ಎಂದು ಹೇಳಲಾಗಿದೆ. ಉಳಿದದ್ದು ಪಕ್ಷೇತರ ಅಭ್ಯರ್ಥಿಗೆ ಹೋಗಿದೆ. ಸಂವಿಧಾನದ ಪ್ರಕಾರ ಯಾವ ಅಭ್ಯರ್ಥಿಗೂ ಶೇ.50 ಕ್ಕಿಂತ ಹೆಚ್ಚು ಮತ ಬರದಿದ್ದರೆ ಎರಡನೇ ಸುತ್ತಿನ ಮತದಾನ ನಡೆಯಬೇಕು. ಜಿಂಬಾಬ್ವೆಯನ್ನು ಮೂರು



ದಶಕಗಳ ಕಾಲ ಆಳಿದ ಮುಗಾಬೆ ಸೋಲುವ ಸಂಭವ ಇದೆ. ಆದ್ದರಿಂದ ಈ ಎರಡನೇ ಸುತ್ತಿನ ಮತದಾನ ಭಾರೀ ಹಿಂಸಾಚಾರ ಅಥವಾ ಚುನಾವಣಾ ಅಕ್ರಮಗಳಿಗೆ ಎಡೆ ಕೊಡಬಹುದು. ಮುಗಾಬೆ ಅಷ್ಟು ಸುಲಭವಾಗಿ ಅಧಿಕಾರ ಬಿಟ್ಟು ಕೊಡುವುದಿಲ್ಲ ಎಂಬುದು ವಿರೋಧಿ ಎಂ.ಡಿ.ಸಿ. ಆತಂಕ.

ಮುಗಾಬೆಯವರ ನಾಯಕತ್ವದ ಜಾನು-ಪಿ.ಎಫ್. ಬ್ರಿಟಿಷ್ ವಸಾಹತುಶಾಹಿ ಮತ್ತು ವರ್ಣಭೇಧದ ವಿರುದ್ಧ ವ್ಯಾಪಕ ಹೋರಾಟ ನಡೆಸಿ ದೇಶದ ಸ್ವಾತಂತ್ರ್ಯ ಗಳಿಸಿತ್ತು. ಮುಗಾಬೆ ಧೃಢ ವಸಾಹತುಶಾಹಿ ವಿರುದ್ಧ ಕ್ರಮಗಳಿಂದ ಬ್ರಿಟನ್ ಸೇರಿದಂತೆ ಪಾಶ್ಚಿಮಾತ್ಯ ದೇಶಗಳ ಸರ್ಕಾರಗಳ 'ವೈರಿ ನಂಬರ್ 1' ಆಗಿದ್ದರು. ಈ ಸರ್ಕಾರಗಳು ಮುಗಾಬೆ, ಜಾನು-ಪಿ.ಎಫ್. ಪಕ್ಷ ಮತ್ತು ಸರ್ಕಾರದ ಬಗ್ಗೆ ತೀವ್ರ ಅಪಪ್ರಚಾರ ನಡೆಸುತ್ತಿತ್ತು. ಅಲ್ಲಿ ಪ್ರಜಾಪ್ರಭುತ್ವ ಇಲ್ಲ, ಸರ್ವಾಧಿಕಾರ ಇದೆ ಇತ್ಯಾದಿಯಾಗಿ. ವಿರೋಧಿ ಪಕ್ಷಗಳಿಗೆ ಪ್ರತ್ಯಕ್ಷ-ಪರೋಕ್ಷ ಪಾಶ್ಚಿಮಾತ್ಯ ಸರ್ಕಾರಗಳ ಕುಮ್ಮಕ್ಕು ಬೆಂಬಲ ಇದೆ. ಆದರೆ ಎಂದು ಇಲ್ಲಿ ಜಿಂಬಾಬ್ವೆಯ ಸ್ವಾತಂತ್ರ್ಯ ನಂತರದ ಬೆಳವಣಿಗೆಯ ಸಮಸ್ಯೆಯನ್ನು, ಜನತೆಯ ಪಾಲ್ಗೊಳ್ಳುವಿಕೆಯ ಜತೆ ಸಮಾಧಾನಕರ ವಾಗಿ ಪರಿಹರಿಸಿಲ್ಲ. ತೀವ್ರ ಅತೃಪ್ತಿ ಹರಡಿದೆ. ಅದನ್ನು ಕೆಲವು ಪಾಶ್ಚಿಮಾತ್ಯ-ಪರ ರಾಜಕೀಯ ಶಕ್ತಿಗಳು ಬಳಸಿಕೊಂಡಿವೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಜಾಗತಿಕ ಆಹಾರ ಬಿಕ್ಕಟ್ಟು - ಬೆಲೆಗಳು ಗಗನಕ್ಕೆ

ಜಾಗತಿಕವಾಗಿ ಎಲ್ಲಾ ಪ್ರಮುಖ ಆಹಾರ ಧಾನ್ಯಗಳ ಬೆಲೆಗಳು ಗಗನಕ್ಕೆ ಏರುತ್ತಿದ್ದು ತೀವ್ರ ಆಹಾರ ಬಿಕ್ಕಟ್ಟಿನ ಸ್ಪಷ್ಟ ಸೂಚನೆಗಳು ಕಾಣುತ್ತಿವೆ. ದಕ್ಷಿಣ-ಪೂರ್ವ ಏಶ್ಯಾದ ಹಲವು ದೇಶಗಳಲ್ಲಿ ಈ ಪ್ರದೇಶದ ಮುಖ್ಯ ಆಹಾರ ಬೆಲೆಯಾದ ಅಕ್ಕಿಯ ಬೆಲೆ ಏರಿ, ಲಭ್ಯತೆ ಕಡಿಮೆ ಆಗಿದ್ದು ತೀವ್ರ ಪ್ರತಿಭಟನೆಗಳಿಗೆ ಕಾರಣವಾಗಿದೆ. ಅಕ್ಕಿಯ ಬೆಲೆ ಏರಿಕೆ ವಿರುದ್ಧ ಇಂಡೋನೇಶ್ಯಾ, ಫಿಲಿಪಿನ್ಸ್ ಗಳಲ್ಲಿ ಭಾರೀ ಪ್ರದರ್ಶನಗಳು ನಡೆದಿವೆ. ಇಂಡೋನೇಶ್ಯಾ, ಫಿಲಿಪಿನ್ಸ್, ಕಂಬೋಡಿಯಾ ಗಳಲ್ಲಿ ಅಕ್ಕಿಯ ಬೆಲೆ ನಿಯಂತ್ರಣ, ಲಭ್ಯತೆ ಸುಧಾರಿಸಲು ರಫ್ತಿನ ಮೇಲೆ ನಿಷೇಧ ಮುಂತಾದ ಅವಸರದ ಕ್ರಮಗಳನ್ನು ಘೋಷಿಸಲಾಗಿದೆ. ಜಗತ್ತಿನ 82 ದೇಶಗಳಲ್ಲಿ ಆಹಾರ ಪೂರೈಕೆಯ ತುರ್ತಿನ ಪರಿಸ್ಥಿತಿ ಎದುರಿಸುತ್ತಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಆಹಾರ ದಾಸ್ತಾನು ಕೇವಲ 12 ವಾರಗಳ ಮಟ್ಟಕ್ಕೆ ಕುಸಿದಿದೆ. ಕಳೆದ ಐದು ವರ್ಷಗಳಲ್ಲಿ ತೈಲ ಬೆಲೆಗಳು ವಿಪರೀತವಾಗಿ ಏರಿದ್ದು, ಆಹಾರ ಧಾನ್ಯಗಳ ಸಾಗಾಣಿಕೆ ವೆಚ್ಚ ಇಮ್ಮಡಿಯಾಗಿದೆ. ಆಹಾರ ಆಮದು ಮಾಡುವ ಬಡದೇಶಗಳ ಮೇಲೆ ಇದರಿಂದ ಭಾರೀ ಪರಿಣಾಮ ಆಗಲಿದೆ.

○

ಉಕ್ರೇನ್ ಜಾರ್ಜಿಯಗಳಿಗೆ ನಾಟೋ ಸದಸ್ಯತ್ವಕ್ಕೆ ಕಡಿವಾಣ

ಮಾಜಿ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ದೇಶಗಳಾದ ಉಕ್ರೇನ್ ಮತ್ತು ಜಾರ್ಜಿಯಾಗಳಿಗೆ ನಾಟೋ ಸದಸ್ಯತ್ವ ಸದ್ಯಕ್ಕೆ ಕೊಡದಿರಲು 26 ದೇಶಗಳ ನಾಟೋ ಮಿಲಿಟರಿ ಕೂಟ ನಿರ್ಧರಿಸಿದೆ. ಇದು ಅಮೆರಿಕ ಅಧ್ಯಕ್ಷ ಬುಶ್ ಮತ್ತು ಅವರು 'ಹೊಸ ಯುರೋಪ್' ಎಂದು ಕರೆಯುವ ಪೂರ್ವ ಯುರೋಪಿನ ಬಲಪಂಥೀಯ ಸರ್ಕಾರಗಳಿಗೆ ಸೋಲು ಮತ್ತು ಮುಖಭಂಗ. ರಶ್ಯ, ಮತ್ತು ಅಧ್ಯಕ್ಷ ಪುಟಿನ್ ಗೆ ಭಾರೀ ಜಯ ಎನ್ನಲಾಗಿದೆ. ಉಕ್ರೇನ್ ಮತ್ತು ಜಾರ್ಜಿಯಾಗಳಿಗೆ ನಾಟೋ ಸದಸ್ಯತ್ವ ಕೊಟ್ಟರೆ ರಶ್ಯ, ಅದನ್ನು ತನ್ನ ಭದ್ರತೆಗೆ ಅಪಾಯ ತರುವ ನಾಟೋದ ಆಕ್ರಾಮಕ ಕ್ರಮ ಎಂದು ಪರಿಗಣಿಸುವುದು. ಉಕ್ರೇನ್ ಮತ್ತು ಜಾರ್ಜಿಯಾಗಳತ್ತ ತನ್ನ ಅಣ್ವಸ್ತ್ರಗಳನ್ನು



ನ್ಯಾಟೋ ಸಭೆಯಲ್ಲಿ ಯುರೋಪ್ ಮುಖಂಡರು

ಗುರಿಯಿಡುವ ಹಕ್ಕನ್ನು ಕಾದಿರಿಸುವುದು ಎಂದು ಪುಟಿನ್ ಎಚ್ಚರಿಕೆ ಕೊಟ್ಟಿದ್ದರು.

ಫ್ರಾನ್ಸ್ ಮತ್ತು ಜರ್ಮನಿಗಳ ನಾಯಕತ್ವದಲ್ಲಿ ಪಶ್ಚಿಮ ಯುರೋಪಿನ ದೇಶಗಳು ಬುಶ್ ರ ಈ ಪ್ರಸ್ತಾವವನ್ನು ಬುಕಾರೆಸ್ಟ್ (ರೋಮೆನಿಯಾ)ನಲ್ಲಿ ನಡೆದ ನಾಟೋ ಕೂಟದ ಶೃಂಗಸಭೆಯಲ್ಲಿ ವಿರೋಧಿಸಿದವು. ಇದು ಯುರೋಪಿನ ಭದ್ರತೆಗೆ ಹೆಚ್ಚಿನ ಅಪಾಯ ತರುವುದು ಎಂದು ಅವರು ವಾದವಾಗಿತ್ತು. ಅಮೆರಿಕ, ನಾಟೋ ಮತ್ತು ಬುಶ್ ಅಂತರ್ರಾಷ್ಟ್ರೀಯ ವಿಷಯಗಳಲ್ಲಿ ರಶ್ಯದ ಮಾತಿಗೆ ಬೆಲೆ ಕೊಡಬೇಕಾಗಿಲ್ಲ ಎಂಬ ಉಧ್ಧಟತನದ ವಿರುದ್ಧ ಪುಟಿನ್ ಅಧ್ಯಕ್ಷರಾದಾಗಿಂದ ಸೆಣಸಾಡುತ್ತ ಬಂದಿದ್ದರು: ಅವರ ಅಧ್ಯಕ್ಷತೆಯ ಕೊನೆಯ ಹೊತ್ತಿಗೆ ಸಂದ ಈ ವಿಜಯ ಮಹತ್ವದ್ದು.

○

ತೈಲ ದೈತ್ಯನನ್ನು ಮಣಿಸಿದ ವೆನೆಜುವೆಲಾ

ವೆನೆಜುವೆಲಾ ಅಧ್ಯಕ್ಷ ಚವೇಜ್ ರೆಕಾರ್ಡುಗಳನ್ನು ಸ್ಥಾಪಿಸುತ್ತ ಬಂದಿದ್ದಾರೆ. ಜಗತ್ತಿನ ಅತಿ ದೊಡ್ಡ ದೈತ್ಯ ತೈಲ ಕಂಪನಿಯಾದ ಎಕ್ಸಾನ್-ಮೊಬಿಲ್ ನ್ನು ಮಣಿಸಿದ್ದು ಅವರ ಇತ್ತೀಚಿನ ರೆಕಾರ್ಡ್. ಮೂರನೇ ಜಗತ್ತಿನ ಸ್ವಾಭಿಮಾನಿ, ಸಾರ್ವಭೌಮ ಸರ್ಕಾರ ದೈತ್ಯ ತೈಲ ಕಂಪನಿಗಳನ್ನೂ ಮಣಿಸಬಲ್ಲುದು ಎಂದು ಚವೇಜ್ ತೋರಿಸಿಕೊಟ್ಟಿದ್ದಾರೆ. ವೆನೆಜುವೆಲಾದ ರಾಷ್ಟ್ರೀಯ ತೈಲ ಕಂಪನಿ ಪಿ.ಡಿ.ವಿ.ಎಸ್.ಎ. ಮತ್ತು ಎಕ್ಸಾನ್- ಮೊಬಿಲ್ ಗಳ ನಡುವೆ ಜಂಟಿ ತೈಲ ಹುಡುಕುವ ಪ್ರಾಜೆಕ್ಟ್‌ನ್ನು ರಾಷ್ಟ್ರೀಕರಿಸಿದ ಹಿನ್ನೆಲೆಯಲ್ಲಿ ಎಕ್ಸಾನ್-ಮೊಬಿಲ್ ಪಿ.ಡಿ.ವಿ.ಎಸ್.ಎ. ವಿರುದ್ಧ 'ಅಂತರ್ರಾಷ್ಟ್ರೀಯ ಕಾನೂನು ಸಮರ' ಹೂಡಿತ್ತು.

ಪ್ರಾಜೆಕ್ಟ್‌ನ ರಾಷ್ಟ್ರೀಕರಣದಿಂದ ಎಕ್ಸಾನ್-ಮೊಬಿಲ್‌ಗೆ ಆದ ನಷ್ಟಕ್ಕೆ ಎಷ್ಟು ಪರಿಹಾರ ಕೊಡಬೇಕು ಎಂಬ ಬಗ್ಗೆ ಒಪ್ಪಂದದ ಪ್ರಕಾರ ಮಾತುಕತೆ ನಡೆಸುವ ಬದಲು ಪಿ.ಡಿ.ವಿ.ಎಸ್.ಎ. ಮೇಲೆ ಭಾರೀ ಪರಿಹಾರದ ಮೊಕದ್ದಮೆ ಹೂಡಿತು. ಪರಿಹಾರ ದೊರೆಯುವವರೆಗೆ ಪಿ.ಡಿ.ವಿ.ಎಸ್.ಎ. ಯ ವಿದೇಶಗಳಲ್ಲಿನ ಆಸ್ತಿ, ಬ್ಯಾಂಕು ಖಾತೆ ವ್ಯವಹಾರಗಳನ್ನು ಸ್ಥಗಿತಗೊಳಿಸಲು ಹಲವು ದೇಶಗಳಲ್ಲಿ ಕೋರ್ಟುಗಳಿಗೆ ಮನವಿ ಸಲ್ಲಿಸಿತು. ಲಂಡನ್ ನಲ್ಲಿ ಸ್ಥಗಿತಗೊಳಿಸಲು ಕೋರ್ಟಿನ ಆದೇಶ ಪಡೆಯಿತು. ಈ ಕ್ರಮದಿಂದ 12 ಶತಕೋಟಿ ಡಾಲರ್ ಆಸ್ತಿ, ಹಣದ ಮೇಲೆ ಪಿ.ಡಿ.ವಿ.ಎಸ್.ಎ. ನಿಯಂತ್ರಣ ಕಳೆದು ಕೊಂಡಿತ್ತು. ಈ ತೀರ್ಪಿನ ವಿರುದ್ಧ ಅಪೀಲಿನಲ್ಲಿ ಈಗ ಎಕ್ಸಾನ್-ಮೊಬಿಲ್ ವಿರುದ್ಧ ತೀರ್ಪು ಬಂದಿದೆ. ಸ್ಥಗಿತಗೊಳಿಸಿದ್ದ 12 ಶತಕೋಟಿ ಡಾಲರ್ ಆಸ್ತಿ, ಬ್ಯಾಂಕು ಖಾತೆ ತೆರವು ಮಾಡಲಾಗಿದೆ.

ಎಕ್ಸಾನ್-ಮೊಬಿಲ್ ಗೆ ಇದರಿಂದ ಮುಖಭಂಗವಾದರೂ ನ್ಯೂಯಾರ್ಕ್, ಹಾಲಂಡ್‌ಗಳಲ್ಲಿ ಇಂತಹುದೇ ಇತರ ಮೊಕದ್ದಮೆಗಳನ್ನು ಮುಂದುವರೆಸುವುದಾಗಿ ಹೇಳಿದೆ. ಆಸ್ತಿ, ಬ್ಯಾಂಕು ಖಾತೆ ಸ್ಥಗಿತಗೊಳಿಸಿದ್ದರಿಂದ ಪಿ.ಡಿ.ವಿ.ಎಸ್.ಎ. ಗೆ ಆದ ನಷ್ಟದ ವಿರುದ್ಧ ಅದು ಕಾನೂನು ಕ್ರಮ ಕೈಗೊಳ್ಳುವುದಾಗಿ ಹೇಳಿದೆ. ತೈಲ ಹುಡುಕುವ ಪ್ರಾಜೆಕ್ಟ್ ಗಳ ಇತರ ಇಂತಹ ರಾಷ್ಟ್ರೀಕರಣದಲ್ಲಿ ಇಂತಹ ಸಮಸ್ಯೆ ಬಂದಿಲ್ಲ. ಇತರ ತೈಲ ಕಂಪನಿಗಳು ಪರಿಹಾರ, ಅಲ್ಪಸಂಖ್ಯಾತ ಒಡೆತನ ಮುಂತಾದ ರೀತಿಯಲ್ಲಿ ಮಾತುಕತೆಗಳ ಮೂಲಕ ಪರಿಹರಿಸಲಾಗಿದೆ. ದೈತ್ಯ ತೈಲ ಕಂಪನಿಗಳಲ್ಲೇ ಅತಿ ದೊಡ್ಡದಾದ ಎಕ್ಸಾನ್-ಮೊಬಿಲ್ ಮಾತ್ರ ಮೊದಲಿಂದಲೂ ಉಧ್ಧಟತನದಿಂದ ವರ್ತಿಸಿತು. ವೆನೆಜುವೆಲಾದ ಬ್ರಿಟಿಷ್ ರಾಯಭಾರಿಯ ಮಾತುಗಳಲ್ಲಿ 'ಎಕ್ಸಾನ್-ಮೊಬಿಲ್‌ನ ಅಂತರ್ರಾಷ್ಟ್ರೀಯ ಕಾನೂನು ಭಯೋತ್ಪಾದನೆ'ಯ ವಿರುದ್ಧ ಹೋರಾಟ ಮುಂದುವರೆಯುತ್ತದೆ.

○

ನೋಟ



ಡಾ. ಜಿ. ಭಾಸ್ಕರ ಮಯ್ಯ

ಜಾಗತೀಕರಣದ ಆರ್ಥಿಕ ಪ್ರಪಂಚ

ಜಾಗತೀಕರಣದಿಂದಾಗಿ ರಾಷ್ಟ್ರೀಯ ಶ್ರಮ ಮಾರುಕಟ್ಟೆಯು ಅಂತಾರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಸೇರಿಹೋಗಿದೆ. ಇದರಲ್ಲಿ ವಸ್ತುಗಳು, ಸೇವೆಗಳು, ವ್ಯಕ್ತಿಗಳು ಮತ್ತು ಸೂಚನೆಗಳು ಮುಕ್ತವಾಗಿ ದೇಶದೇಶಗಳ ಗಡಿಗಳನ್ನು ದಾಟಿವೆ. ಉದಾ: ಜಗತ್ತಿನಲ್ಲಿ 500 ದೊಡ್ಡ ಕಂಪೆನಿಗಳು ಮಾರುಕಟ್ಟೆಯ ಬಂಡವಾಳವಾದಿ ವ್ಯವಸ್ಥೆಯ ಅಡಿಪಾಯವಾಗಿದೆ, ಅವುಗಳ 244 ಕಂಪೆನಿಗಳ ಮಾಲಿಕರು ಅಮೇರಿಕಾದವರು. 23 ಕಂಪೆನಿಗಳು ಜರ್ಮನಿಯವು. ಯುರೋಪಿನಲ್ಲಿ 173 ವಿಶಾಲ ಕಂಪೆನಿಗಳಿವೆ.

ವಿಶ್ವಪ್ರಭುತ್ವಕ್ಕಾಗಿ ಯುರೋಪು ಅಮೇರಿಕಾದೊಂದಿಗೆ ಸ್ಪರ್ಧಿಸುತ್ತಿದೆ. 1988ರಲ್ಲಿ ಜಪಾನಿನ ಆರ್ಥಿಕ ಶಕ್ತಿಯ ಹಿಡಿತ ಕುಸಿದು ಅದರ ನಿಯಂತ್ರಣದಲ್ಲಿದ್ದ 73 ದೊಡ್ಡ ಕಂಪೆನಿಗಳಲ್ಲಿ 46 ಮಾತ್ರ ಉಳಿದವು. ಕಳೆದ ಕೆಲವು ವರ್ಷಗಳಿಂದೀಚೆಗೆ ಅಮೇರಿಕವು ಜಪಾನ್, ಕೊರಿಯಾ, ಥಾಯ್‌ಲೇಂಡ್ ಹಾಗೂ ಬೇರೆ ಹಲವಾರು ದೇಶಗಳ ದೊಡ್ಡ ಕಂಪೆನಿಗಳ ಮೇಲೆ ಒಡೆತನ ಸ್ಥಾಪಿಸಿಕೊಂಡಿದೆ. ಶೇಕಡಾವಾರು ತೆಗೆದುಕೊಂಡರೆ ಈ ಮಾಲಿಕತ್ವವು 61% ಅಮೇರಿಕಾ, 33% ಯುರೋಪ್ ಮತ್ತು 4% ಜಪಾನಿನ ವಶದಲ್ಲಿದೆ.

ವಿಶ್ವ ಆರ್ಥಿಕ ವ್ಯವಸ್ಥೆಯಲ್ಲಿ ಅಮೇರಿಕವು ಅತ್ಯಂತ ಶಕ್ತಿಶಾಲಿಯಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳ ಮೇಲಿನ ಸಿಂಹಪಾಲು ಒಡೆತನ ಅದರದ್ದು ಅವುಗಳು ಜಗತ್ತಿನ ಸಣ್ಣಸಣ್ಣ ಕಂಪೆನಿಗಳನ್ನು ಒಂದೊಂದಾಗಿ ನುಂಗುತ್ತಾ ಬರುತ್ತಿವೆ.

ಇದರ ಭಯಾನಕ ಪರಿಣಾಮವನ್ನು ಎದುರಿಸಬೇಕಾದವರು ವಿಶ್ವದ ಕಾರ್ಮಿಕರು

ಇಂದು ಜಾಗತೀಕರಣವು ಕೇವಲ ಶ್ರೀಮಂತ ರಾಷ್ಟ್ರಗಳನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತಿದೆ. ಅವರ ಆರ್ಥಿಕಶಕ್ತಿ ಗಣನೀಯವಾಗಿ ಏರುತ್ತಿದೆ. ಇದರ ಪರಿಣಾಮವೇ ಜಾಗತಿಕ ಮಟ್ಟದ ನವ ವಸಾಹತುಶಾಹಿ ವ್ಯವಸ್ಥೆ. 1950ರಲ್ಲಿ ವಿಶ್ವದ ರಫ್ತು 61 ಬಿಲಿಯನ್ ಡಾಲರ್ ಇತ್ತು. 1998ರಲ್ಲಿ ಅದು 6844 ಬಿಲಿಯನ್ ಡಾಲರಿನಷ್ಟಾಗಿದೆ.

1950 - 61 ಬಿಲಿಯ (ಬಿಲಿಯ = 10ಸಾವಿರ ಲಕ್ಷ; 1000 ಮಿಲಿಯ; ಮಿಲಿಯ = ಹತ್ತುಲಕ್ಷ)

1980 - 3150 ಬಿಲಿಯ

1990 - 34,470 ಬಿಲಿಯ

1998 68,440 ಬಿಲಿಯ (ಪ್ರತ್ಯಕ್ಷ) ನೇರ ವಿದೇಶಿ ಹೂಡಿಕೆಯೂ ಗಮನಾರ್ಹವಾಗಿ ಹೆಚ್ಚಿದೆ.

1960 - 680 ಬಿಲಿಯ

1980 - 5020 ಬಿಲಿಯ

1992 - 19840 ಬಿಲಿಯ

1997 34580 ಬಿಲಿಯ

1980 - 89ರಲ್ಲಿ ವಿದೇಶೀ ಹಣಕಾಸಿನ ಅಂತಃಪ್ರವಾಹವು 10 ಕೋಟಿ 48 ಲಕ್ಷ ಅಮೇರಿಕನ್ ಡಾಲರ್ ಆಗಿತ್ತು. ಅದು 1990 - 2001ರಷ್ಟಕ್ಕೆ 174 ಕೋಟಿ 6 ಲಕ್ಷಕ್ಕೇರಿತು.

ಇದರ ಪರಿಣಾಮವಾಗಿ ವಿದೇಶಿ ಹಣಕಾಸು ಬಂಡವಾಳವು 910 ಕೋಟಿ 96 ಲಕ್ಷ ಡಾಲರಿನಷ್ಟು ವರ್ಧಿಸಿತು. ಈ ಅವಧಿಯ ಒಟ್ಟು ಆಂತರಿಕ ಉತ್ಪಾದನೆ ಹಾಗೂ ರಫ್ತು ನಗಣ್ಯ.

ಆದರೆ, ಭಾರತದ ಮಟ್ಟಿಗೆ ವಿದೇಶೀ ನೇರ ಹೂಡಿಕೆ (FDI)2005ರಷ್ಟಕ್ಕೆ ಒಟ್ಟು ಆಂತರಿಕ ಉತ್ಪಾದನೆಯೆದುರಿಗೆ ಅತ್ಯಂತ ಕಡಿಮೆ 0.8?.

ಜಾಗತೀಕರಣದ ಪ್ರಭಾವ ಅತ್ಯಂತ ನಕಾರಾತ್ಮಕ. ಬಂಡವಾಳಪತಿಗಳಿಗಷ್ಟೇ ಇದರಿಂದ ಲಾಭವಾಗಿದೆ. ಸಾಮಾಜಿಕ ವರ್ಗಗಳ ನಡುವೆ ಅಸಮಾನತೆ ತೀವ್ರವಾಗಿ, ಅತ್ಯದಿಕವಾಗಿ ಹೆಚ್ಚಿದೆ.

ಸರಕಾರಕ್ಕೆ ಹೆಚ್ಚಿನ ಕರ ಸಂದಾಯವಾಗುವುದು. ನೌಕರಿಯಲ್ಲಿರುವವರಿಂದ ಮಾತ್ರ. ಉಳಿದಂತೆ ಸರಕಾರದ ಆದಾಯ ಇಳಿಮುಖವಾಗಿದೆ.

ದೇಶದಲ್ಲಿ ಕಾನೂನು ಶಿಥಿಲಗೊಂಡಿದೆ. ಲೋಭಿ ಬಂಡವಾಳವಾದಿ ತೋಳಗಳು ಕರ ವಂಚಿಸಲು ನಾನಾ ಉಪಾಯಗಳನ್ನು ಹುಡುಕುತ್ತವೆ. ಇನ್ನೊಂದೆಡೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೊಡುವ ಸುಂಕ ಸಬ್ಸಿಡಿಗಳು ಗಣನೀಯವಾಗಿ ಹೆಚ್ಚಿದೆ. ದುಡಿಯುವ ವರ್ಗಕ್ಕೆ ಕಡಿಮೆ ಆದಾಯದ ಕುಟುಂಬಗಳಿಗೆ, ರೋಗ ಹಾಗೂ ಹಾನಿಗೊಳಗಾದವರಿಗೆ ಕೊಡುವ ಆರ್ಥಿಕ ಸಹಾಯ ಕುಗ್ಗಿದೆ. ಸರಕಾರವು ವಿಶ್ವಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ಸಂಪೂರ್ಣವಾಗಿ ಶಾಮೀಲಾಗಿ ಹೋಗಿದೆ. ಅರ್ಜೆಂಟೈನಾ ಹಾಗೂ ಬ್ರೆಜಿಲ್‌ನಲ್ಲಿ ನೌಕರಿಗಳ ಅವಕಾಶವು 18 ರಿಂದ 15? ಕುಸಿದಿದೆ. ಪೂರ್ವ ಯುರೋಪಿನ ದೇಶಗಳ ಜೀವನಮಟ್ಟ ಶೋಚನೀಯವಾಗಿದೆ. ಮೂರನೆಯ ವಿಶ್ವದ ಮೋಡೆಲ್ ದೇಶ ಎನ್ನಲಾಗುವ 'ಮೆಕ್ಸಿಕೋ' ಕೂಡಾ ಜಾಗತೀಕರಣದ ಬಿರುಗಾಳಿಗೆ ಸಿಲುಕಿದೆ. ಅಲ್ಲಿಯೂ ಕೂಲಿಯ ದರ ಮೂವತ್ತು ಶೇಕಡಾ ಕಡಿಮೆಯಾಗಿದೆ. ಅಮೇರಿಕಾ ಮತ್ತು ಯುರೋಪಿನ ಕೂಟದಲ್ಲಿ ನಿರುದ್ಯೋಗಿಗಳ ಸಂಖ್ಯೆ 3 ಕೋಟಿ 50 ಲಕ್ಷ ಎಂದು ಅಂದಾಜು ಮಾಡಲಾಗಿದೆ. ಜಗತ್ತಿನಲ್ಲಿ ನಿರುದ್ಯೋಗಿಗಳ ಸಂಖ್ಯೆ 12 ಕೋಟಿ ?ಇದು ಕೇವಲ ಸಾಂಖ್ಯಿಕ ಲೆಕ್ಕ? ಬಂಡವಾಳದ ಏಕಮುಖ ಸಂಚಯವೇ ಈ ದುಃಸ್ಥಿತಿಗೆ ಕಾರಣ.

ಶ್ರಮಶಕ್ತಿಯೂ ಸ್ಥೂಲವಾಗಿ ಮೂರು ಭಾಗಗಳಲ್ಲಿ ವಿಭಜಿತವಾಗಿದೆ:

1. ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿರುವ ಸಕಲ ಸೌಲಭ್ಯ ಹೊಂದಿದ ಕಾರ್ಮಿಕ ವರ್ಗ.
2. ರಾಷ್ಟ್ರೀಯ ಬಂಡವಾಳದಿಂದ ನಡೆಯುವ ಖಾಸಗಿ ಮತ್ತು ಸರಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಕಾರ್ಮಿಕರು.
3. ಅನೌಪಚಾರಿಕ ಕ್ಷೇತ್ರಗಳಲ್ಲಿ ಕೆಲಸಮಾಡುವ ಶ್ರಮಿಕರು, ಹೆಂಗಸರು, ಮಕ್ಕಳು; ನಿರ್ವಸಿತರು, ದಲಿತರು ಇವರ ಬಹುದೊಡ್ಡ ಸಮೂಹ.

ಜಾಗತಿಕ ಮಟ್ಟದಲ್ಲಿಯೇ ಇಂದು ಯೂನಿಯನ್ ಹಕ್ಕುಗಳು ಮೊಟಕುಗೊಳ್ಳುತ್ತಿವೆ. ಸೌಮ್ಯವಾದಿ ಟ್ರೇಡ್ ಯೂನಿಯನ್‌ಗಳು ಸರ್ಕಾರದ ಕ್ರೋಧ ಮತ್ತು ಧಮನಕ್ಕೆ ಬಲಿಯಾಗುತ್ತಿವೆ. ಏಕೆಂದರೆ ಅವರ ಕಾರ್ಯಪ್ರಣಾಳಿ ಹೆಚ್ಚು ಲೋಕಪ್ರಿಯ ಮತ್ತು ಸಂಘರ್ಷಶೀಲ. ಟ್ರೇಡ್ ಯೂನಿಯನ್‌ಗಳನ್ನು ಅಭಿವೃದ್ಧಿ ವಿರೋಧಿಯೆಂದು ಅಪಪ್ರಚಾರ ಮಾಡಲಾಗುತ್ತಿದೆ. ಇನ್ನೊಂದೆಡೆ ಬಹುರಾಷ್ಟ್ರೀಯ ನಿಗಮಗಳು ಕಾರ್ಮಿಕರ ಹಕ್ಕುಗಳನ್ನು ಮನಬಂದಂತೆ ಕಾನೂನು ರಚಿಸಿ ಮೊಟಕುಗೊಳಿಸುತ್ತಿವೆ. ಸರ್ಕಾರಗಳು ತಲೆ ಬಗ್ಗಿಸಿ ಅವರ ಚಾಕರಿ ಮಾಡುತ್ತಿವೆ. ಭವಿಷ್ಯದಲ್ಲಿ ಸರ್ಕಾರಗಳು ಇನ್ನಷ್ಟು ದಮನಕಾರಿಯಾಗುತ್ತವೆ. ಏಕೆಂದರೆ ಅವುಗಳ ಮೇಲೆ ಬಹು ರಾಷ್ಟ್ರೀಯ ಕಂಪೆನಿಗಳ ಹಿಡಿತ ದಿನದಿಂದ ದಿನಕ್ಕೆ ಹೆಚ್ಚುತ್ತದೆ.

1. ಬಡತನ
2. ನಿರುದ್ಯೋಗ

ಇದು ಸಾಮಾಜಿಕ ಯಥಾರ್ಥ ಇದ್ದದ್ದೇ ಎಂದು ನಂಬಿಸಲಾಗುತ್ತಿದೆ.

3. ಸಾಮಾಜಿಕ ವಿಘಟನೆ

ಮಾನವ ಹಕ್ಕುಗಳ ಘೋಷಣಾ ಪತ್ರದ 23ನೆಯ ಅನುಚ್ಛೇದ ಈಗ ವ್ಯರ್ಥವಾಗಿ ಹೋಗಿದೆ. ಇಂದು ಅಂತಾರಾಷ್ಟ್ರೀಯ ಸ್ತರದಲ್ಲಿ ಶ್ರಮಜೀವಿಗಳ ಒಕ್ಕೂಟ ಹಿಂದೆಂದಿಗಿಂತಲೂ ಹೆಚ್ಚು ಅನಿವಾರ್ಯವಾಗಿದೆ. ಫ್ಯಾಸಿಸ್ಟ್ ಪಕ್ಷಗಳು ಅನೇಕ ದೇಶಗಳಲ್ಲಿ ಅಭ್ಯುದಯ ಹೊಂದುತ್ತಾ ಕಾರ್ಮಿಕರ ಏಕತೆಗೆ ತೀವ್ರ ಧಕ್ಕೆಯನ್ನುಂಟುಮಾಡುತ್ತಿವೆ.

ಬಂಡವಾಳಶಾಹಿ ದೇಶಗಳಲ್ಲಿ ಓಉಔಗಳ ಪಾತ್ರ ದೊಡ್ಡದು. ಅವುಗಳಿಗೆ ಹೆಚ್ಚು ಹೆಚ್ಚು ಬೆಂಬಲಕೊಡಲಾಗುತ್ತದೆ. ಏಕೆಂದರೆ ಬಂಡವಾಳಗಾರರಿಗೆ ಹಾಗೂ ಬಹುರಾಷ್ಟ್ರೀಯ ನಿಗಮಾಧಿಪತಿಗಳಿಗೆ ಟ್ರೇಡ್ ಯೂನಿಯನ್ ಸವಾಲುಗಳನ್ನು ಎದುರಿಸಲು ಅವರು ನೆರವಾಗುತ್ತಾರೆ.

ಭಾರತದಲ್ಲಿ ಲಕ್ಷಾಂತರ ಕೈಗಾರಿಕೆಗಳು ಇಂದು ಮುಚ್ಚಲ್ಪಟ್ಟದ್ದು ಕೋಟ್ಯಂತರ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಇದರೊಂದಿಗೆ 'ಗಿಖಿಐ ಲಕ್ಷಾಂತರ ಕಾರ್ಮಿಕರನ್ನು ಮನೆಯಲ್ಲಿ ಕುಳ್ಳಿರಿಸಿದೆ.

ಇಂದು ಮುಖ್ಯಧಾರೆಯ ಟ್ರೇಡ್ ಯೂನಿಯನ್‌ಗಳಿಗಿಂತ ಮೀನುಗಾರರ ಬೃಹತ್ ಸಂಘಟನೆ, ಛತ್ತೀಸ್‌ಗಢದ ಮುಕ್ತಿಮೋರ್ಚಾ ಅತಿ ಹೆಚ್ಚು ಸಕ್ರಿಯವಾಗಿದೆ. ಅವುಗಳು ಸಾಮ್ರಾಜ್ಯವಾದ ಮತ್ತು ಕೋಮುವಾದ ಎರಡಕ್ಕೂ ಅ?ಚಿಟಚುಟಿಣ ಮಾಡುತ್ತಿವೆ. ಮೀನುಗಾರರ ಸಂಘಟನೆಯ ಒಂದೂವರೆ ಲಕ್ಷ ಮೀನುಗಾರರು, ಮೀನು ಮಾರಾಟಗಾರರನ್ನು ಹೋರಾಟಕ್ಕಿಳಿಸಿದೆ. ಅಂತಾರಾಷ್ಟ್ರೀಯ ಸ್ತರದಲ್ಲಿ ಭಾರತ, ಶ್ರೀಲಂಕಾ ಮತ್ತು ಬಾಂಗ್ಲಾ ಮೀನುಗಾರರ ಏಕತೆಯ ಸಾಧ್ಯತೆಗಳು ಹೆಚ್ಚಿದೆ. ಛತ್ತೀಸ್‌ಗಢ್ ಮುಕ್ತಿಮೋರ್ಚಾ ಕೋಮುಶಕ್ತಿಗಳಿಗೂ ಸಾಮ್ರಾಜ್ಯವಾದಕ್ಕೂ ತೀವ್ರ ಮುಖಭಂಗವನ್ನುಂಟುಮಾಡುತ್ತಿದೆ.

ನೂತನ ನಾಯಕತ್ವ


ಸಿಪಿಐ(ಎಂ) ಪಕ್ಷದ 19ನೇ ಮಹಾಧಿವೇಶನವು ಒಟ್ಟಾರೆ 86 ಜನರ ನೂತನ ಕೇಂದ್ರ ಸಮಿತಿಯನ್ನು ಚುನಾಯಿಸಿದೆ. ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕಾಂ.ಪ್ರಕಾಶ್ ಕಾರಟ್ ಪುನರಾಯ್ಕೆಯಾಗಿದ್ದಾರೆ. ಇದೇ ಕೇಂದ್ರ ಸಮಿತಿಯು ಹದಿನೈದು ಜನರ ಪಾಲಿಟ್ ಬ್ಯೂರೋವನ್ನು ಆಯ್ಕೆ ಮಾಡಿದೆ. ಪಟ್ಟಿ ಹೀಗಿದೆ.

ಪಾಲಿಟ್ ಬ್ಯೂರೋ


ಪ್ರಕಾಶ್ ಕಾರಟ್ - ಪ್ರಧಾನ ಕಾರ್ಯದರ್ಶಿ
ಜ್ಯೋತಿಬಸು (ವಿಶೇಷ ಆಹ್ವಾನಿತರು)
ಬುದ್ದದೇವ ಭಟ್ಟಾಚಾರ್ಯ- ಮುಖ್ಯಮಂತ್ರಿ, ಪಶ್ಚಿಮ ಬಂಗಾಳ
ವಿಎಸ್ ಅಚ್ಯುತಾನಂದನ್-ಮುಖ್ಯಮಂತ್ರಿ, ಕೇರಳ
ಮಾಣಿಕ್ ಸರ್ಕಾರ್-ಮುಖ್ಯಮಂತ್ರಿ, ತ್ರಿಪುರ
ಎಸ್.ರಾಮಚಂದ್ರನ್ ಪಿಳ್ಳೈ
ಸೀತಾರಾಮ ಯೆಚೂರಿ
ಎಂ.ಕೆ.ಪಂಧೆ
ಭಿಮನ್ ಬಸು
ಪಿಣರಾಯಿ ವಿಜಯನ್
ಕೆ.ವರದರಾಜನ್
ಬಿ.ವಿ.ರಾಘವುಲು
ಬೃಂದಾ ಕಾರಟ್
ಕೊಡಿಯೇರಿ ಬಾಲಕೃಷ್ಣನ್ -ಹೊಸ ಸೇರ್ಪಡೆ
ನಿರುಪಮ್ ಸೇನ್ -ಹೊಸ ಸೇರ್ಪಡೆ
ಮೊಹಮದ್ ಅಮೀನ್-ಹೊಸ ಸೇರ್ಪಡೆ


ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ.ನಾಯರ್‌ರವರು ಕೇಂದ್ರ ಸಮಿತಿಯ ಸದಸ್ಯರಾಗಿ ಚುನಾಯಿತರಾಗಿದ್ದಾರೆ.

ಪುನರಾಯ್ಕೆಗೊಂಡ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್



ಕರ್ನಾಟಕದಿಂದ ನೂತನ ಕೇಂದ್ರ ಸಮಿತಿ ಸದಸ್ಯ ಕಾಂ. ವಿ.ಜೆ.ಕೆ.ನಾಯರ್





ಜ್ಯೋತಿ ಬಸು ಈಗ ಪೊಲಿಟ್‌ಬ್ಯೂರೋ ವಿಶೇಷ ಆಹ್ವಾನಿತರು. ಕಾಮ್ರೇಡ್ ಸುರ್ಜಿತ್ ಕೇಂದ್ರ ಸಮಿತಿಯ ವಿಶೇಷ ಆಹ್ವಾನಿತರು.
(ಅನಾರೋಗ್ಯದ ಕಾರಣದಿಂದಾಗಿ)





ಅಗಲಿದ ವೈಜ್ಞಾನಿಕ ಕಾಲ್ಪನಿಕ ಕಥೆಗಾರ ಅರ್ಥರ್ ಕ್ಲಾರ್ಕ್


ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಆಸಕ್ತಿಕರವಾದ ಕಥಾನಕ ಶೈಲಿಗಳ ಮುಖೇನ ಜಗತ್ತಿನ ಜನಸಾಮಾನ್ಯರಿಗೆ ಮುಟ್ಟಿಸುವಲ್ಲಿ ಯಶಸ್ಸುಕಂಡವರಲ್ಲಿ ಸರ್ ಆರ್ಥರ್ ಸಿ. ಕ್ಲಾರ್ಕ್ ರವರು ಮುಂಚೂಣಿಯಲ್ಲಿದ್ದಾರೆ. ಅದಕ್ಕೊಂದು ಉದಾಹರಣೆಯೆಂದರೆ: ಅವರ '2001: ಒಂದು ಸುದೀರ್ಘ ಆಗಸ ಪಯಣ' ಎಂಬ ವಿಜ್ಞಾನ ಕಾಲ್ಪನಿಕ ಪುಸ್ತಕವು ಅದೆಷ್ಟೊಂದು ಜನಪ್ರಿಯತೆ ಪಡೆಯಿತೆಂದರೆ, 1968ರಲ್ಲಿ ಅದರ ಆಧಾರದ ಮೇಲೆ ಚಿತ್ರಿಸಿದ ಸಿನಿಮಾ ನೋಡಿದ ಅಲೆಕ್ಸಿ ಲಿಯೊನೊವ್ ಎಂಬ ಗಗನಯಾನಿ ತಾನು ಮತ್ತೊಮ್ಮೆ ಗಗನಸುತ್ತಿ ಬಂದ ಅನುಭವವಾಯ್ತು ಎಂದನಂತೆ. ಹೀಗೆ, ವೈಜ್ಞಾನಿಕ ಕಾಲ್ಪನಿಕ ಕಥೆಗಳಿಗೊಂದು ಚೌಕಟ್ಟು ಮತ್ತು ಅವುಗಳ ಪ್ರಾಮುಖ್ಯತೆಗೆ ಅರ್ಥವೊದಗಿಸಿದ ಅವರು ಜಾಗತಿಕ ಮನ್ನಣೆ ಗಳಿಸಿದ್ದರು.

ವಿಜ್ಞಾನದ ಬೆಳವಣಿಗೆಯ ಆಧಾರದ ಮೇಲೆ ಸಾಮಾನ್ಯ ಕಥೆಗಳನ್ನು ಹೊಸೆಯುತ್ತಾ ಭವಿಷ್ಯತ್ತಿನ ವಿಜ್ಞಾನ ದಾಪುಗಾಲಿಡುವ ದಿಕ್ಕಿನ ಕುರಿತು ಜನಮಾನಸಕ್ಕೆ ಮುಂಚಿತವಾಗಿಯೇ ತಿಳಿಸಿಕೊಡುತ್ತಿದ್ದ ಜಗತ್ತು ಕಂಡ ಅದ್ಭುತ ಕಥೆಗಾರ ಸರ್ ಆರ್ಥರ್ ಸಿ. ಕ್ಲಾರ್ಕ್ ರವರು ತಮ್ಮ 90ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಅವರ ಬದುಕು ಕೂಡ ಅವರ ಬರಹದಂತೆಯೇ ಹಲವು ರೋಚಕ ಮತ್ತು ಕೌತುಕಗಳಿಂದ ಕೂಡಿತ್ತು. ಮೊದಲನೆ ಮಹಾಯುದ್ಧ ಸಮಯದಲ್ಲಿ ಇಂಗ್ಲೆಂಡಿನಲ್ಲಿ ರೈತ ಕುಟುಂಬವೊಂದರಲ್ಲಿ ಜನಿಸಿದ ಅವರು ಅಲ್ಲಿಯೇ ತಮ್ಮ ವಿದ್ಯಾಭ್ಯಾಸ ಮುಗಿಸಿದ್ದರೂ, ಕಳೆದ ನಲವತ್ತಕ್ಕೂ ಹೆಚ್ಚು ವರ್ಷಕಾಲ ಅವರು ನಮ್ಮ ನೆರೆಯ ಶ್ರೀಲಂಕಾವನ್ನು ತನ್ನ ವಾಸಸ್ಥಳವಾಗಿಸಿಕೊಂಡು ತಮ್ಮ ಕೊನೆಯುಸಿರಿನವರೆಗೂ ಅಲ್ಲಿಯೇ ಬದುಕಿದ್ದರು. ಅವರು ಸುಮಾರು ಹನ್ನೆರಡಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದು, 'ಗ್ರಹಗಳ ನಡುವೆ ಯಾನ' ಎಂಬ ಪಕ್ಕಾ ವೈಜ್ಞಾನಿಕ ಪುಸ್ತಕವು ಅವರ ಬರಹಕ್ಕೆ ಮಹತ್ವದ ತಿರುವನ್ನು ನೀಡಿತು.

ಅಂತರಿಕ್ಷದ 'ಕ್ಲಾರ್ಕ್ ಕಕ್ಷೆ': ಟೆಲಿಫೋನ್, ಮೊಬೈಲ್, ವೈರ್‌ಲೆಸ್ ಇತ್ಯಾದಿಯಂಥಹ ಸಾಧನಗಳಿಗೆ ಸಂಪರ್ಕ ಕಲ್ಪಿಸುವ ಉಪಗ್ರಹಗಳನ್ನು ಭೂಮಿಯತ್ತ ಮುಖ ಮಾಡಿ ಅವುಗಳು ಭೂಮಿಯ ಸುತ್ತಲೂ ನಿಗಧಿತ ಕಕ್ಷೆಯಲ್ಲಿ ಸುತ್ತುವಂತೆ ಮಾಡಲಾಗಿರುತ್ತದೆ. ಅಂಥಹ ಕಕ್ಷೆಗೆ ಭೂ-ಕೇಂದ್ರಿತ ಕಕ್ಷೆ ಎಂದು ಕರೆಯುತ್ತಾರೆ. ಭೂಕೇಂದ್ರಿತ ಕಕ್ಷೆಯ ಆಧಾರ ಹೊಂದಿರುವ ಸಂವಹನ ಉಪಗ್ರಹವನ್ನು ಅವರು ತಮ್ಮ ಸಾಹಿತ್ಯದಲ್ಲಿ ಪ್ರಸ್ತಾಪಿಸಿದ 25 ವರ್ಷಗಳ ನಂತರ ಅದನ್ನು ವಾಸ್ತವವಾಗಿ ಉಪಯೋಗಕ್ಕೆ ಬರುವಂತೆ ಅಳವಡಿಸುವಲ್ಲಿ ಯಶಕಾಣಲಾಯಿತು. ಭೂಮಧ್ಯ ರೇಖೆಯ ಮೇಲಿನಿಂದ ಸುಮಾರು 36,000 ಕಿ.ಮೀ ದೂರದಲ್ಲಿರುವ ಭೂ-ಕೇಂದ್ರಿತ ಕಕ್ಷೆಯನ್ನು 'ಕ್ಲಾರ್ಕ್ ಕಕ್ಷೆ' ಎಂದು ಅಂತರಾಷ್ಟ್ರೀಯ ಖಗೋಳಶಾಸ್ತ್ರ ಸಂಘಟನೆಯು ಹೆಸರಿಸಿ ಅವರಿಗೆ ಗೌರವ ಸಲ್ಲಿಸಿದೆ.

ಗಗನನೌಕೆಗಳ ತಂತ್ರಜ್ಞಾನ ಮತ್ತು ಭೂಮಿಯ ಸಮೀಪದ ಆಗಸವನ್ನು ಜಾಗತಿಕ ಸಂವಹನ ವ್ಯವಸ್ಥೆ ಕಲ್ಪಿಸಲು ಬಳಸುವ ಕುರಿತಂತೆ ಅವರ ಭವಿಷ್ಯವಾಣಿಗಳು ಬಹುತೇಕ ನಿಖರವಾಗಿದ್ದವು. ಹಾಗೆಯೇ 1980ರ ದಶಕದಲ್ಲಿ ಅಮೇರಿಕಾದ ಸ್ಟಾರ್‌ವಾರ್ಸ್ ಪರಿಕಲ್ಪನೆಯ ಮಿಲಿಟರಿ ತಂತ್ರಜ್ಞಾನ ಅಭಿವೃದ್ಧಿಯ ಕುರಿತಂತೆ ಅದರ ಮಿಲಿಟರಿ ದಾಹ ನೀತಿಯನ್ನು ವಿರೋಧಿಸಿದ್ದರು. ಅವರ ಕಾರ್ಯನಿರ್ವಹಣಾ ಶೈಲಿಯು ಜನರ ನಡುವೆ ಮೈತ್ರಿ ಮತ್ತು ಶಾಂತಿಗಾಗಿ ಸದಾ ತುಡಿಯುತ್ತಿತ್ತು.

ಜಗತ್ತು ಕಂಡ ಅದ್ಭುತ ಕಥೆಗಾರ ಸರ್ ಆರ್ಥರ್ ಸಿ. ಕ್ಲಾರ್ಕ್ ರವರು ತಮ್ಮ 90ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಅವರ ಬದುಕು ಕೂಡ ಅವರ ಬರಹದಂತೆಯೇ ಹಲವು ರೋಚಕ ಮತ್ತು ಕೌತುಕಗಳಿಂದ ಕೂಡಿತ್ತು.



ವಿಜ್ಞಾನದ ಕಾಲ್ಪನಿಕ ಕಥೆಗಳು: ವೈಜ್ಞಾನಿಕ ವಿಧಾನಗಳನ್ನು ಸಮಗ್ರವಾಗಿ ಗ್ರಹಿಸಿ, ಅದರ ಜ್ಞಾನದ ತಳಪಾಯದ ಮೇಲೆ ಭವಿಷ್ಯತ್ತಿನಲ್ಲಿ ಉಂಟಾಗಬಹುದಾದ ಘಟನೆಗಳ ಸುತ್ತಲು ಹೊಸೆಯುವ ಕಥೆಗಳಿಗೆ ವೈಜ್ಞಾನಿಕ ಕಾಲ್ಪನಿಕ ಕಥೆಗಳೆಂದು ಕರೆಯಲಾಗುತ್ತದೆ.

ವಿಜ್ಞಾನದ ಕಾಲ್ಪನಿಕ ಕಥೆಗಳು ಸಾಮಾನ್ಯವಾಗಿ ಸಾಹಿತ್ಯ ಪ್ರಕಾರಕ್ಕೆ ಸೇರುವುದರಿಂದ ಅವುಗಳು ವಿಜ್ಞಾನ ಮತ್ತು ಕಲೆಯನ್ನು ಬೆಸೆಯುವ ಅಥವಾ ಅವುಗಳ ನಡುವಿನ ಅಂತರವನ್ನು ತಗ್ಗಿಸುವ ಕಲಾ ಪ್ರಕಾರಗಳೆಂದು ಹೇಳಲಾಗುತ್ತದೆ. ಇಂತಹ ಕಥೆಗಳಲ್ಲೂ ಅನೇಕ ವಿಭಾಗಗಳಿವೆ. ಮೊದಲನೆಯದಾಗಿ ವಿಜ್ಞಾನದ ಪ್ರತಿಯೊಂದು ಪ್ರಕ್ರಿಯೆಯನ್ನು ವಿವರಣಾತ್ಮಕವಾಗಿ ಹೇಳುವ ಕಥೆಗಳನ್ನು 'ಕಠಿಣ ವಿಜ್ಞಾನದ ಕಾಲ್ಪನಿಕ ಕಥೆಗಳು' ಎಂದೂ, ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ ಇತ್ಯಾದಿಯಂತಹ ವಿಷಯಗಳಿಗೆ ಒತ್ತು ನೀಡುವ ಕಥೆಗಳನ್ನು 'ತೆಳುವಾದ ಅಥವಾ ಸಾಮಾಜಿಕ ವಿಜ್ಞಾನದ ಕಾಲ್ಪನಿಕ ಕಥೆಗಳು' ಎಂದು ವಿಂಗಡಿಸಲಾಗಿದೆ. ಅಲ್ಲದೆ, ಮಿಲಿಟರಿ ತಂತ್ರಜ್ಞಾನ ಆಧಾರಿತ ವಾದವುಗಳನ್ನು ಮಿಲಿಟರಿ ವಿಜ್ಞಾನ ಕಥೆಗಳು, ಕಾಲದ ಆಧಾರಿತವಾದ ಕಥೆಗಳು, ಇತಿಹಾಸದ ಘಟನೆಗಳು ಈಗಾಗಲೇ ಸಂಭವಿಸಿದ್ದಕ್ಕಿಂತ ಇನ್ನಾವುದೋ ರೀತಿಯಲ್ಲಿ ಸಂಭವಿಸಿದ್ದರೆ ಇತಿಹಾಸವೇ ಬದಲಾಗುತ್ತಿತ್ತೆಂದು ಬಿಂಬಿಸುವ ಪರ್ಯಾಯ ಇತಿಹಾಸದ ಕಾಲ್ಪನಿಕ ಕಥೆಗಳು ಎಂದು ಮತ್ತೂ ವಿಂಗಡಿಸಲಾಗಿದೆ.

ಜಗತ್ತಿನದಾದ್ಯಂತ ವಿಜ್ಞಾನದ ಕಾಲ್ಪನಿಕ ಕಥಾಸಾಹಿತ್ಯವನ್ನು ಹರಡುವ ಸಾವಿರಾರು ಸಂಖ್ಯೆಯ ಕ್ಲಬ್‌ಗಳು, ಸಂಘಗಳು, ಸಮುದಾಯಗಳು ಅಸ್ತಿತ್ವದಲ್ಲಿವೆ. ಇವು ವಿಜ್ಞಾನ ಸಾಹಿತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜಗತ್ತಿನ ಜನರ ನಡುವೆ ವೈಚಾರಿಕ ವಿಷಯಗಳನ್ನು ಹಂಚಿಕೊಳ್ಳುವ ಕಾರ್ಯದಲ್ಲಿ ತೊಡಗಿವೆ. ○

ಇಂತಹ ಅದ್ಭುತ ಲೋಕಕ್ಕೆ ಕಲ್ಪನೆಯ ನೌಕೆಯಲ್ಲಿ ಕರೆದೊಯ್ದ ಕತೆಗಾರ ಅರ್ಥರ್ ಕ್ಲಾರ್ಕ್



ಕವನ

ಹುಟ್ಟುತ್ತೇನೆ ಹುಲ್ಲಾಗಿ...

ನಮ್ಮಮ್ಮ ಹೇಳ್ತಿದ್ಲು
"ದೊಡ್ಡವ್ರು ಸತ್ರೆ
ಆಕಾಶದಾಗೆ ಚುಕ್ಕಿ ಆಗ್ತಾರೆ
ನಮ್ಮೊಂತೋರು ಸತ್ರೆ
ಗುಡ್ಡದಾಗಿನ ಕಲ್ಲು, ಹೊಲದಾಗಿನ ಹುಲ್ಲು
ಆಗ್ತೀವಿ" ಅಂತ.
ಹುಡುಕುವುದಿಲ್ಲ
ಸತ್ತ ಅಪ್ಪನ ಆಕಾಶದಲ್ಲಿ
ಕಳೆದುಹೋದ ಅಮ್ಮನ ಚುಕ್ಕಿಯಲ್ಲಿ...

ಎದುರಾಗುವ
ಕಲ್ಲು ಬೆಟ್ಟಗಳಲ್ಲಿ ಕಾಣುತ್ತೇನೆ
ಅಪ್ಪನ ಗಟ್ಟಿತನವನ್ನ
ಹೊಲದ ಬದುವಿನ ಹುಲ್ಲಿನಲ್ಲಿ
ಹುಡುಕುತ್ತೇನೆ ಅಮ್ಮನ ಮಮತೆಯನ್ನ

ಯಾರಿಗೂ ಸಿಗದ 'ಆಕಾಶ
ದ ಚುಕ್ಕಿ' ಆಗೋದಕ್ಕಿಂತ
ಬದುಕಿಗೆ ಆಸರೆಯಾಗೋ 'ಕಲ್ಲೋ,
ಹುಲ್ಲೋ, ಮಣ್ಣೋ' ಆಗೋದೇ ಸುಖ...

ಇರಲಿ ನಿಮಗೆ
'ಚುಕ್ಕಿ ಚಂದ್ರಮ' ರ ಬದುಕು
ಸಾಕೆನಗೆ
ಈ ಮಣ್ಣಿನ ಗೆಣೆತನ

- ವಿ.ಹರಿನಾಥ ಬಾಬು
ಸಿರುಗುಪ್ಪ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH